ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 27
ಜುಲೈ 06, 2003 ಬೆಲೆ ರೂ. 3.00



ತುರ್ತುಪರಿಸ್ಥಿತಿ :
ಸರ್ವಾಧಿಕಾರದ ಕರಾಳ ಛಾಯೆ !




ಭಾರತ-ಚೀನಾ ಸಹಕಾರದ ಹೆಜ್ಜೆ



ಅಧಿಕಾರ ಉಳಿಸಿಕೊಳ್ಳುವ ಕೃಷ್ಣ ತಂತ್ರಗಳು

ಬಳ್ಳಾರಿ: ಇದು ಸಾವಲ್ಲ ?






ಚಿತ್ತ ಸ್ವಾಸ್ಥ್ಯ ಕೆಡಿಸುವ 'ಭೂತ್'

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

33



ಭೂಗತ ಜೀವನಕ್ಕೆ ಕಾಲಿಟ್ಟು ಅದರ ಅನುಭವವಿಲ್ಲದ ಜಯಪಾಲ್ ಆಳ ಅಗಲ ಗೊತ್ತಿಲ್ಲದ ಬಾವಿಗೆ ಹಾರಿದ ಸ್ಥಿತಿಯ ಬಗ್ಗೆ ಮತ್ತು ಈಶಾನ್ಯ ಪ್ರಾಂತ್ಯ ಪ್ರದೇಶಕ್ಕೆ ಭೇಟಿ ನೀಡಲಿದ್ದ ಜವಾಹರ್‌ಲಾಲ್ ನೆಹರೂ ಅವರ ಪ್ರಾಣಕ್ಕೆ ಅಪಾಯವಿದ್ದ ಸಂಗತಿಯ ಬಗ್ಗೆ ಕಳೆದ ವಾರ ಓದಿದ್ದೀರಿ ಮುಂದೆ..



ಕನ್ನಡಕ್ಕೆ: ವಿಶ್ವ ಕುಂದಾಪುರ

ಬಲೆ ಬೀಸಲಿದ್ದ ಮಾಯಾಂಗನೆ

ನನಗೆ ಭಾರಿ ಆತಂಕವಾಯಿತು. ಮುಂದಿನ ರೈಲಿನಲ್ಲೆ ಒಬ್ಬನನ್ನು ಕೋಲ್ಕತ್ತಾಗೆ ಕಳಿಸಿದೆ. ನೆಹರೂ ಹೆಸರಿಗೆ ಪತ್ರವೊಂದನ್ನು ಅಲ್ಲಿಂದ ಅಂಚೆಗೆ ಹಾಕುವಂತೆ ಆತನ ಕೈಗಿತ್ತೆ. ಈಶಾನ್ಯ ಗಡಿ ಪ್ರಾಂತ್ಯಕ್ಕೆ ಭೇಟಿ ನೀಡುವುದನ್ನು ರದ್ದುಪಡಿಸುವಂತೆ ನೆಹರೂರನ್ನು ಕೋರುವ ಅನಾಮಿಕ ಪತ್ರ ಅದಾಗಿತ್ತು.

ಬಂಧನವಾಗುವ ಸಂದೇಶ

ಅದೇ ದಿನ ಸಂಜೆ ನಮ್ಮ 'ಸಂಘಟನಾ ಸಂಕೇತ'ದಲ್ಲಿ ಕೋಲ್ಕತ್ತಾ ಪ್ರದೇಶ ಕೇಂದ್ರ ಕಚೇರಿಯಿಂದ ಸಹೋದ್ಯೋಗಿಯೊಬ್ಬರಿಂದ ವೈರ್‌ಲೆಸ್ ಸಂದೇಶ ಬಂದಿತು. "ದ್ರೋಹವಾಗಿದೆ. ನಿಮ್ಮನ್ನು ಬಂಧಿಸಲಾಗುತ್ತಬೆ" ಎಂಬುದು ಸಂದೇಶದ ಸಾರಾಂಶ.

ಶತ್ರುಗಳ ಕೈಯಲ್ಲಿ ನಾಯಿಯಂತೆ ಸಾಯುವುದು ನನಗೆ ಬೇಕಿರಲಿಲ್ಲ. ಇಂಗ್ಲಸ್‌ರ ಕೋಣೆಗೆ ನುಗ್ಗಿ ನನ್ನ ಅಭಿಪ್ರಾಯವನ್ನು ಅವರಿಗೆ ತಿಳಿಸಿದೆ. ನಾನು ಸೇನೆಯನ್ನು ತೊರೆಯುವ ಮುನ್ನ, ಭಾರತದಲ್ಲಿ ಬ್ರಿಟೀಷ್ ಆಡಳಿತ ಕೊನೆಯಾಗಲೇಬೇಕು ಎಂದು ನಾನು ಇಂಗ್ಲಸ್‌ಗೆ ಹೇಳಿದ್ದು ಹೌದೆಂದು ಅನಂತರ ವಿಚಾರಣಾ ನ್ಯಾಯಾಲಯವೊಂದರ ಮುಂದೆ ಸಾಕ್ಷ್ಯ ಹೇಳಿದ ಲೆಫ್ಟಿನೆಂಟ್ ರಾಯ್ ದೃಢಪಡಿಸಿದರು. 'ನಿಮ್ಮನ್ನು ಬೇಗನೆ ಒದ್ದೋಡಿಸುತ್ತೇವೆ' ಎಂದೂ ನಾನು ಹೇಳಿದ್ದೆ.

ಮರುದಿನ ಮುಂಜಾನೆ, ಕೆನಡಾದ ಪೈಲಟ್ ಚಲಾಯಿಸುತ್ತಿದ್ದ ವಿಮಾನವೊಂದರಲ್ಲಿ ನಾನು ಪ್ರಯಾಣಿಸುತ್ತಿದ್ದೆ. ಅದು ಕೋಲ್ಕೊತ್ತಾಕ್ಕೆ ತೆರಳುತ್ತಿತ್ತು. ಆ ದಿನಗಳಲ್ಲಿ ಕೋಲ್ಕೊತ್ತಾ ಕರ್ಫ್ಯೂ ಪೀಡಿತವಾಗಿತ್ತು. ರಾತ್ರಿ ನಾವು ಕೋಲ್ಕೊತ್ತಾದ ಗ್ರಾ ್ಯಂಡ್ ಹೋಟೇಲ್‌ನಲ್ಲಿ ಕಳೆದೆವು.

ಹೋಟೇಲ್ ಮ್ಯಾನೇಜರ್ ಕೆನ್ನೆಗೆ ಏಟು

ಕೊಲ್ಕೊತ್ತಾದ ಸಹೋದ್ಯೋಗಿಗಳೆಲ್ಲರೂ ನನ್ನನ್ನು ಭೇಟಿಯಾಗಲು ರಾತ್ರಿ ಅಲ್ಲಿಗೆ ಬಂದರು. ಸಿಂಗಲ್ ಬೆಡ್ ರೂಮ್‌ನಲ್ಲಿ ನಾವು ಹತ್ತು ಮಂದಿ ಮಲಗಿದೆವು. ಕರ್ಫ್ಯೂ ಇದ್ದಿದ್ದರಿಂದ ಯಾರೂ ಹೊರಗೆ ಹೋಗುವಂತಿರಲಿಲ್ಲ, ಅನುಮತಿಯೂ ಸಿಗುತ್ತಿರಲಿಲ್ಲ. ಅಷ್ಟೊಂದು ಜನರಿದ್ದುದನ್ನು ಕಂಡು ಹೋಟೇಲ್ ಮ್ಯಾನೇಜರ್ ಗದ್ದಲವೆಬ್ಬಿಸಿಬಿಟ್ಟ. ಆಗ ಸಿಖ್ ಅಧಿಕಾರಿಯೊಬ್ಬ ಪಟಾರನೆ ಕೆನ್ನೆಗೆ ಬಿಗಿದು ಮ್ಯಾನೇಜರ್‌ನ ಬಾಯಿ ಮುಚ್ಚಿಸಿದ.

ನಾನೀಗ ಸೇನೆ ತೊರೆದವನಾಗಿದ್ದೆ. ಆ ದಿನ ಬೆಳಿಗ್ಗೆಯೇ ಜನರಲ್ ಎ.ಸಿ.ಚಟರ್ಜಿಯವರನ್ನು ಭೇಟಿಯಾದೆ. ಅಗತ್ಯವಾದ ದಾಖಲೆಪತ್ರಗಳನ್ನು ಅವರ ವಶಕ್ಕೊಪ್ಪಿಸಿದೆ.

ಆಕಾಶವಾಣಿಯ ನಿರ್ದೇಶಕರಾಗಿದ್ದ ಪ್ರಖ್ಯಾತ ಬುಖಾರಿಯವರ ಸೋದರ ಲೆಫ್ಟಿನೆಂಟ್ ಹಮೀದ್ ಬುಖಾರಿ ಪೌಕರ್ ಸರ್ವಿಸ್ ಪ್ರದೇಶದ ಶ್ರೀಮಂತ ಮುಸ್ಲಿಂ ಮನೆಯೊಂದರಲ್ಲಿ ನನ್ನನ್ನು ಒಂದು ರಾತ್ರಿ ಇರಿಸಿದರು.

ಕೊಲ್ಕೊತ್ತಾದ ಬೀದಿಗಳಲ್ಲಿ ದೊಂಬಿ, ಗಲಭೆ ನಡೆಯುತ್ತಿಲೇ ಇತ್ತು. ಮರುದಿನ ಹಮೀದ್ ನನ್ನನ್ನು ಹೌರಾ ರೈಲ್ವೆ ಸ್ಟೇಷನ್‌ಗೆ ಕಾರಿನಲ್ಲಿ ಕರೆದುಕೊಂಡು ಹೋದರು. ನಾವು ಬಾಂಬೆ ಮೇಲ್‌ನಲ್ಲಿ ಮುಂಬಯಿಗೆ ಪ್ರಯಾಣಿಸಿದೆವು.

ಮುಂಬಯಿಯಲ್ಲಿ ನಾನು ಇರಾಕ್ ಅಹಮದರನ್ನು ಬೀಳ್ಕೊಟ್ಟೆ. ಅವರ ಕಣ್ಣುಗಳು ತೇವಗೊಂಡಿದ್ದವು. "ಜೈಪಾಲ್, ಬಹುಶಃ ನೀವು ಅರ್ಥ ಮಾಡಿಕೊಳ್ಳಲಾರಿರಿ. ಆದರೆ ಪ್ರಿಯಮಿತ್ರನೇ, ನಾನು ನಿಮಗೆ ಒಳಿತನ್ನು ಹಾರೈಸುತ್ತೇನೆ".

ಇಷ್ಟೊಂದು ಆತ್ಮೀಯರಾಗಿದ್ದ ನಾವು ಮುಂದಿನ ವರ್ಷವೇ ಎರಡು ಬೇರೆ ಬೇರೆ ದೇಶಗಳ ಪ್ರಜೆಗಳಾಗುತ್ತೇವೆಂದು ಯಾರಿಗೆ ತಾನೇ ಗೊತ್ತಿತ್ತು!

ಸೀಗ್ರಿನ್ ಹೋಟೆಲ್‌ನಲ್ಲಿ ಕೆಲವು ದಿನಗಳ ಮಟ್ಟಿಗೆ ನನ್ನ ಕೇಂದ್ರ ಕಛೇರಿಯನ್ನು ಸ್ಥಾಪಿಸಿದೆ.

ನಾನಿನ್ನು ನನ್ನ ಸಮವಸ್ತ್ರವನ್ನು ತ್ಯಜಿಸಿರಲಿಲ್ಲ. ನಾನಲ್ಲಿ ಮೇಜರ್ ಕೌಲ್ ಆಗಿದ್ದೆ. ಅದೊಂದು ತಪ್ಪಾಗಿತ್ತು. ಭೂಗತ ಜೀವನದ ರೀತಿಗಳನ್ನು ಇನ್ನಷ್ಟೇ ಕಲಿತುಕೊಳ್ಳಬೇಕಾಗಿತ್ತು. ದೂರದಲ್ಲಿ ಅರಬ್ಬಿ ಸಮುದ್ರದ ಅಬ್ಬರ ಕೇಳಿಸುತ್ತಿತ್ತು. ಸಮುದ್ರದ ತಂಪು ಗಾಳಿ ನಿಧಾನವಾಗಿ ಕೋಣೆಯೊಳಗೆ ನುಸುಳುತ್ತಿತ್ತು. ಆ ದಿನ ರಾತ್ರಿ ನಾನು ಹಾಯಾಗಿ ನಿದ್ದೆ ಮಾಡಿದೆ.

ಕೆಲವೇ ದಿನಗಳಲ್ಲಿ ನಾನು ಒಬ್ಬ ಪೂರ್ಣ ನಾಗರಿಕನಾಗಿ ಬೋರಿ ಬಂದರ್‌ನಲ್ಲಿನ ಒಂದು ಭಾರತೀಯ ಹೊಟೇಲ್‌ಗೆ ವಾಸವನ್ನು ಬದಲಾಯಿಸಿದೆ.

'ಹತ್ಯೆ' ಅನುಮಾನ

ನನ್ನ ಬಂಧನಕ್ಕಾಗಿ ಬೇಟೆ ಆರಂಭವಾಯಿತು. ಮುಂಬಯಿಯಲ್ಲಿನ ನಮ್ಮ ಸಂಘಟನೆ ದಿನದಿನವೂ ನನ್ನ ಸಂಪರ್ಕ ಇಟ್ಟುಕೊಂಡಿತು.

ನಾನು ನಾಪತ್ತೆಯಾಗಿದ್ದು ಗೊತ್ತಾದ ಮರುದಿನ ಮೋಹನ್ ಬಾರಿಯಲ್ಲಿನ ನನ್ನ ಘಟಕ ಕೆಲಸವನ್ನು ಸ್ಥಗಿತಗೊಳಿಸಿತು. "ನಮ್ಮ ಸಿ.ಓ.ರನ್ನು (ಕಮಾಂಡಿಂಗ್ ಆಫೀಸರ್) ಬ್ರಿಟೀಷರು ಕೊಂದಿದ್ದಾರೆ" ಎಂಬುದು ಸೈನಿಕರ ಅನುಮಾನವಾಗಿತ್ತು.

> ಶ್ರೀಮತಿ ಡೇ ಬ್ರಿಟಿಷರ ಪರವಾಗಿ ಕೆಲಸ ಮಾಡಿ ನನ್ನ ಬಂಧನಕ್ಕಾಗಿ ಸಂಚು ರೂಪಿಸಿದ್ದು ಸ್ವತಃ ಅವಳ ಗಂಡನಿಂದ ನನಗೆ ಗೊತ್ತಾಯಿತು. 'ನಾನು ಆಕೆಯ ಪತಿ. ಆದರೆ ನಾನು ದೇಶಪ್ರೇಮಿ' ಎಂದು ನಿರೇನ್ ಡೇ ಹೇಳಿದ ಮಾತಿನಿಂದ ನಾನು ಭಾವಪರವಶನಾದೆ. ನನ್ನ ಕಣ್ಣಾಲಿಗಳು ತೇವಗೊಂಡವು.

ಜೈಪಾಲ್ ಕರ್ತವ್ಯದ ಮೇಲೆ ಕೊಲ್ಕೊತ್ತಾಗೆ ಹೋಗಿದ್ದು ಅಲ್ಲಿ ಅವರನ್ನು ಮುಸ್ಲೀಮರು ಗಲಭೆಯಲ್ಲಿ ಕೊಂದು ಹಾಕಿದ್ದಾರೆ! ಎಂದು ಕೆಲವು ದಿನಗಳಾದ ಮೇಲೆ ಬ್ರಿಟೀಷರು ಆ ಸೈನಿಕರಿಗೆ ಹೇಳಿದರು. "ಮೇಜರ್ ವರ್ಮಾ ಅವರ ಮೃತ ದೇಹವನ್ನು ಗುರುತಿಲಾಗಿದೆ" ಎಂದವರು ಘೋಷಿಸಿದರು. ಒಂದು ದೇಹವನ್ನು ಹಾಜರುಪಡಿಸುವುದು ಅವರಿಗೆ ಕಷ್ಟವಾಗಿರಲಿಲ್ಲ. ಯಾಕೆಂದರೆ ಆ ದಿನಗಳಲ್ಲಿ ಕೋಲ್ಕೊತ್ತಾದ ಬೀದಿ ಬೀದಿಗಳಲ್ಲಿ ಸಾವಿರಾರು ಜನರ ಮಾರಣ ಹೋಮವಾಗುತ್ತಿತ್ತು.

ಸಶಸ್ತ್ರ ಪಡೆಗಳ ಭೂಗತ ಕ್ರಿಯಾ ಮಂಡಳಿಯೊಂದನ್ನು ಸಶಸ್ತ್ರ ಪಡೆಗಳ ಹೊರಗಡೆ ನಾನು ಸ್ಥಾಪಿಸಿದ್ದೇನೆ ಎಂದು ಬಹಿರಂಗ ಪತ್ರವೊಂದರ ಮೂಲಕ ನಾನು ಭಾರತದ ರಾಜಕೀಯ ಪಕ್ಷಗಳಿಗೆ ತಿಳಿಸಿದೆ. ಹಾಗೆ ಮಾಡಿದ್ದೇ ತಡ ಬ್ರಿಟೀಷರು ತಮ್ಮ 'ಪ್ಲೇಟ್' ಬದಲಾಯಿಸಿದರು.

"ಆತ (ಜೈಪಾಲ್) ಹಣದೊಂದಿಗೆ ಓಡಿಹೋಗಿದ್ದಾನೆ. ಅವನೊಬ್ಬ ವಂಚಕ, ಮೋಸಗಾರ" ಎಂದು ಬ್ರಿಟೀಷರು ಗುಲ್ಲೆಬ್ಬಿಸಿದರು.

ನಾನು ಸೇನೆ ತೊರೆದ ಒಂದು ವಾರದ ನಂತರ ಕರ್ನಲ್ ಇಂಗ್ಲಸರಿಗೆ ಪತ್ರ ಬರೆದು ಇಂಥ ಅಪಪ್ರಚಾರವನ್ನು ಖಂಡಿಸಿದೆ. "ನಾನು ಜೀವಂತವಾಗಿದ್ದೇನೆ. ಕ್ರಿಯಾಶೀಲನಾಗಿದ್ದೇನೆ. ನೀವು ದೇಶಬಿಟ್ಟು ಹೋಗುವವರೆಗೂ ನಾನು ಹೋರಾಡುತ್ತಲೇ ಇರುತ್ತೇನೆ" ಎಂದು ನಾನು ಬರೆದೆ.

ಅತ್ತ ಕೊಲ್ಕೊತ್ತಾದಲ್ಲಿ ಕಳವಳಕಾರಿ ವಿದ್ಯಮಾನವೊಂದು ನಡೆಯಿತು.

ಜನರಲ್ ಚಟರ್ಜಿಯವರ ಮಗಳನ್ನು ಭೇಟಿ ಮಾಡಿದ ನಿಲಿಮಾ ಡೇ, ಚಟರ್ಜಿ ಜತೆ ನಾನು ಸಂಪರ್ಕ ಹೊಂದಿರುವ ವಿಚಾರ ತನಗೆ ಗೊತ್ತೆಂದು ಹೇಳಿದಳು. ಜೈಪಾಲ್‌ರನ್ನು ಭೇಟಿಯಾಗಲು ಸಮಯ ನಿಗದಿ ಮಾಡುವಿರಾ ಎಂದು ಪ್ರಶ್ನಿಸಿದಳು. ಯಾವುದೇ ಅನುಮಾನ ಬಾರದ್ದರಿಂದ ಚಟರ್ಜಿ ಮಗಳು ತಂದೆ ಜತೆ ಮಾತಾಡಿದಳು. ಜನರಲ್ ಜತೆಗೆ ನನಗೆ ಸಂಪರ್ಕ ಇದ್ದುದು ಡೇ ಹೊರತು ಬೇರಾರಿಗೂ ಗೊತ್ತಿರಲಿಲ್ಲ. ಚಟರ್ಜಿ ಮಗಳಿಗೂ ನಾನು ಯಾರೆಂಬುದು ತಿಳಿದಿರಲಿಲ್ಲ.

ಜನರಲ್ ನನ್ನನ್ನು ತಕ್ಷಣವೇ ಬರುವಂತೆ ಮುಂಬಯಿಗೆ ಹೇಳಿ ಕಳಿಸಿದರು. ಆಗ ಕೊಲ್ಕೊತ್ತಾಕ್ಕೆ ಹೋಗುವುದು ಅಪಾಯಕಾರಿಯಾಗಿತ್ತು ಆದರೂ ಅವರ ಭೇಟಿಗಾಗಿ ನಾನು ಮರುದಿನ ಕೊಲ್ಕೊತ್ತಾಗೆ ವಿಮಾನದಲ್ಲಿ ಪ್ರಯಾಣಿಸಿದೆ.

"ಶ್ರೀಮತಿ ಡೇ ನಿಮ್ಮನ್ನು ಭೇಟಿಯಾಗಬೇಕಂತೆ. ಏನೋ ತುರ್ತು ವಿಷಯ ಇರುವಂತೆ ಕಾಣುತ್ತದೆ" ಜನರಲ್ ನನಗೆ ಹೇಳಿದರು.

ಬಲೆ ಬೀಸಲಿದ್ದ ಮಾಯಾಂಗನೆ

ಆ ದಿನ ಸಂಜೆ ಮಿಶನ್ ರೋಡ್‌ನಲ್ಲಿದ್ದ ಆಕೆಯ ಗಂಡನ ಮನೆಯಲ್ಲಿ ಆಕೆಯನ್ನು ಭೇಟಿಯಾಗಲೆಂದು ತೆರಳಿದೆ. ನನ್ನ ಅದೃಷ್ಟ ಚೆನ್ನಾಗಿತ್ತು. ಬ್ಯಾರಿಸ್ಟರ್ ನಿರೆನ್ ಡೇ ಅಧ್ಯಯನ ಕೋಣೆಯಲ್ಲಿ ನನಗೆ ಸಿಕ್ಕರು.

"ನಾನು ಶ್ರೀಮತಿ ನಿರೇಸ್‌ರನ್ನು ಕಾಣಬೇಕಿದೆ" ನಾನೆಂದೆ.

ಹಾಗಂದಿದ್ದೆ ತಡ, ನಿರೇಸ್ ಹೌಹಾರಿ- "ಏನು, ನೀವು ಆಕೆಯನ್ನು ಭೇಟಿಯಾಗಬೇಕೆ" ಎಂದು ಪ್ರಶ್ನಿಸಿದರು.

"ನೀವು ಸೇನೆ ತ್ಯಜಿಸಿದ ವಿಷಯ ನನಗೆ ಗೊತ್ತು. ಆಕೆ ನಿಮಗೆ ದ್ರೋಹ ಬಗೆಯುತ್ತಾಳೆ. ಲೆಫ್ಟಿನೆಂಟ್ ಲಾಸನ್ ಮತ್ತು ಆಕೆ ನಿಮ್ಮ ಬಂಧನಕ್ಕೆ ಸಂಚು ಹೂಡುತ್ತಿದ್ದಾರೆ. ಅವಳು ನನ್ನ ಹೆಂಡತಿ. ಆದರೆ ನಾನೊಬ್ಬ ದೇಶಪ್ರೇಮಿ. ನೀವು ಆಕೆಯನ್ನು ಭೇಟಿಯಾಗಕೂಡದು" - ನಿರೇಸ್ ಡೇ ಪ್ರೀತಿಯಿಂದ ನನಗೆ ಹೇಳಿದರು.

"ನಾನು ಶೀಘ್ರವೇ ಆಕೆಯಿಂದ ವಿಚ್ಛೇದನ ಪಡೆಯಲಿದ್ದೇನೆ"- ಎಂದೂ ಡೇ ಹೇಳಿದರು.

ಅನುಪಮ ದೇಶಪ್ರೇಮ

ದೇಶಭಕ್ತಿಯ ಈ ಅನುಪಮ ಉದಾಹರಣೆ ಕಂಡು ನನ್ನ ಕಣ್ಣಾಲಿಗಳು ತುಂಬಿಬಂದವು. ನಾನು ಅವರಿಗೆ ಕೃತಜ್ಞತೆ ಅರ್ಪಿಸಿ ಲಗುಬಗೆಯಿಂದ ಅಲ್ಲಿಂದ ಹೊರಟುಬಂದೆ. ನಿರೇನ್ ಡೇ ನನ್ನನ್ನು ಹಂತಕ ಪಡೆಯಿಂದ ಪಾರು ಮಾಡಿದರು.

ಈಗ ಎಲ್ಲವೂ ಸ್ಪಷ್ಟವಾಗಿತ್ತು. ಸಿಹಿಮಾತು ಆಡಿದ ಹಾಗೂ ನೆರವಾಗುವಂತೆ ಕಂಡು ಬಂದವಳ ಮೋಡಿಯ ಬಲೆಗೆ ನಾವು ಬಿದ್ದಿದ್ದೆವು. ಬೆಳ್ಳಗಿರುವುದೆಲ್ಲಾ ಹಾಲಲ್ಲವಲ್ಲ!

(ಮುಂದುವರಿಯುವುದು)

ತಿದ್ದುಪಡಿ

ಕಳೆದ ಸಂಚಿಕೆ 21 ಸಂಪುಟ 25 ರ ಪುಟ3 ರಲ್ಲಿ ಪ್ರಕಟವಾದ 'ಜಾತಿ ಕಂದರಗಳ ದಾಟಿ...' ವರದಿಯಲ್ಲಿ ಕಣ್ತಪ್ಪಿನಿಂದ ಕೆಲವು ದೋಷಗಳು ಮುದ್ರಿತವಾಗಿವೆ. ಕಾಂ. ವಿಠ್ಠಲಭಂಡಾರಿ, ಕಾಂ. ಯಮುನಾ ಗಾಂವ್ಕರ್ ಮದುವೆಯಾದದ್ದು ಹೊನ್ನಾವರದ ಮೂಡ ಗಣಪತಿ ದೇವಾಲಯದಲ್ಲಿ ಎಂದಿದೆ. ಮದುವೆಯಾದದ್ದು ಮೂಡ ಗಣಪತಿ ದೇವಸ್ಥಾನದ ಹತ್ತಿರವಿರುವ ಕಲ್ಯಾಣಮಂಟಪದಲ್ಲಿ ಎಂದಾಗಬೇಕಿತ್ತು.

ಬೇಂದ್ರ ಕವನ 'ನಾನು ಬಡವಿ, ಆತ ಬಡವ ಒಲವೆ ನಮ್ಮ ಬದುಕು' ಎಂದಾಗಬೇಕಿತ್ತು.

ಹಾಗೇ ಸಂಪುಟ 25, ಸಂಚಿಕೆ 25ರಲ್ಲಿ ನದಿ ನೀರು ಮಾರಾಟ ಲೇಖನದ ಅಂಕಿ ಅಂಶದಲ್ಲಿ ನೀರಿನ ಜಾಗತಿಕ ವಹಿವಾಟು 40 ಸಾವಿರ ಕೋಟಿ ಡಾಲರು ಎಂದಿರಬೇಕು(ಬದಲಿ 30 ಸಾವಿರ ಡಾಲರು) ಆದ ದೋಷಗಳಿಗೆ ವಿಷಾದಿಸುತ್ತೇವೆ.

- ಸಂ

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜುಲೈ 1, 2003

ಕಾಂ.ಸೂರಿ ನೆನಪಿನ ಕಾರ್ಯಕ್ರಮ
ಎನ್‌ಜಿಓ ಹಾಲ್ - ಬೆಂಗಳೂರು
ಸಂಜೆ 5.30 ಕ್ಕೆ
ಕಾಂ ಎಂ.ಕೆ.ಪಂಧೆ, ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು
ಕಾಂ. ಜಿ.ಎನ್.ನಾಗರಾಜ್, ರಾಜ್ಯಕಾರ್ಯದರ್ಶಿ, ಸಿಪಿಐ(ಎಂ)
ಕಾಂ. ವಿ.ಜೆ.ಕೆ.ನಾಯರ್, ಪ್ರ.ಕಾರ್ಯದರ್ಶಿ, ಸಿಐಟಿಯು ಕರ್ನಾಟಕ
ಕಾಂ. ಕೆ.ಪ್ರಕಾಶ್-ಅಧ್ಯಕ್ಷತೆ

ಜುಲೈ 1 ರಿಂದ

ಸಂವಿಧಾನದ 31 (ಬಿ) ಅಡಿ ತಿದ್ದುಪಡಿಗೆ ಒತ್ತಾಯಿಸಿ ಗ್ರಾಮೀಣ ಕೃಪಾಂಕ ನೌಕರರು ಮತ್ತು ಅವಲಂಬಿತರ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ. ಜಿಲ್ಲಾಧಿಕಾರಿ ಕಛೇರಿಗಳ ಎದುರು: ಗ್ರಾಮೀಣ ಕೃಪಾಂಕ ಕ್ರಿಯಾ ಸಮಿತಿ, ಎಸ್.ಎಫ್.ಐ. ಮತ್ತು ಡಿವೈಎಫ್ಐ

ಅಧಿಕಾರ ಉಳಿಸಿಕೊಳ್ಳುವ ಕೃಷ್ಣ ತಂತ್ರಗಳು

ಕರ್ನಾಟಕ ರಾಜಕೀಯದಲ್ಲೀಗ ಬಿರುಸು ಕಂಡ ರವಿದು. ಎಲ್ಲರದ್ದೂ ಚುನಾವಣೆಯ ಮೇಲೆ ರಿಸಿದ್ಧ ವರಸೆ. ಕಾಂಗ್ರೆಸ್‌ಗೆ - ಮುಖ್ಯಮಂತ್ರಿ ಣ್ಣರಿಗೆ ಅಧಿಕಾರ ಉಳಿಸಿಕೊಳ್ಳುವ ವರಾತ. ಂಗ್ರೆಸ್‌ಗೆ ತಾನೇ ಪರ್ಯಾಯವೆಂದೂ ಧಿಕಾರಗದ್ದುಗೆಗೇರಲು ಆರಿಂಚು ಮಾತ್ರವೇ ರ ಎಂದು ಭ್ರಮೆ ಸೃಷ್ಟಿಸುವ ಕಾತುರ ಬಿಜೆಪಿಗೆ. ಲೀನದ ಅಧ್ಯಾಯವನ್ನು ತೆರೆದು - ಮುಚ್ಚುತ್ತಿದ್ದ ದತಾ ಬಣಗಳೀಗ ಕಾರ್ಯಸೂಚಿಯಲ್ಲಿ ಮಗ್ನ! ದ ಬಣಗಳು ವಿಲೀನವಾಗದೇ ಅವರವರ ದಿ ಅವರು ನೋಡಿಕೊಳ್ಳುವಂತಹ ಸ್ಥಿತಿಯ ದೆ ಕೃಷ್ಣರವರ ರಾಜಕೀಯ ತಂತ್ರದ ಹಸ್ತ ುವ ಬಗ್ಗೆ ಅಲ್ಲಗೆಳೆಯಲಾಗದ ಗುಮಾನಿ. ಜಿಲ್ಲೆಗಳಲ್ಲಿ ಪಕ್ಷದ ಸಂಘಟನೆಗೆ ಚೈತನ್ಯ ಂಬಲು ಪ್ರವಾಸ ಹೊರಟಿರುವ ಜನಾರ್ಧನ ಜಾರಿಯವರು ಆರಂಭದಲ್ಲಿ ೀಮುವಾದಿಗಳ ವಿರುದ್ಧ, ಪಕ್ಷದೊಳಗಿನ ಸ್ತಿನ ವಿರುದ್ಧ ಅಬ್ಬರಿಸಿದರು. ಈಗ ವಾಸದಲ್ಲಿ ನಿರಾಯಾಸವಾಗಿ ಗೊರಕೆಗೆ ದಂತೆ ಕಾಣುತ್ತದೆ. ಮತ್ತು ಅಷ್ಟೇ ಸಾಕು ದು ಕಾಂಗ್ರೆಸ್ ಪಕ್ಷ ಭಾವಿಸಿರಬಹುದು.ಆದರೆ ಖ್ಯಮಂತ್ರಿ ಕೃಷ್ಣರವರು ಅಧಿಕಾರದ ಗದ್ದುಗೆ ಯ್ದುಕೊಳ್ಳಲು ಹಲವಾರು ತಂತ್ರ-ಕುತಂತ್ರಗಳ, ರಸೆಗಳಲ್ಲಿ ಮಗ್ನರಾಗಿದ್ದಾರೆ. ಊರೂರು ಸುಗುದ್ದ ಕೆಲಸವನ್ನು ಅಧ್ಯಕ್ಷರಿಗೆ ಹಂಚಿ, ೋಘ ಸಾಧನೆಗಳ ಸರ್ಕಾರ ತಮ್ಮದೆಂದು ತ್ತೂರಿ ಊದುತ್ತಾ, ತಿರುಗುತ್ತಿದ್ದಾರೆ. ಮಧ್ಯಂತರ ನಾವಣೆಯ ಇಂಗಿತ ಮನದಲ್ಲಿರಿಸಿ ಭಿವೃದ್ಧಿಯ ಹೆಸರಿನಲ್ಲಿ ಅನೇಕ ೋಜನೆಗಳಿಗೆ ಅಡಿಗಲ್ಲು ಹಾಕುತ್ತಿದ್ದಾರೆ. ದೋ ಆರಂಭಿಸಬೇಕಿದ್ದ ಚಿತ್ರಾವತಿ ರೇಜನ್ನು ಈಗ ಆರಂಭಿಸಿ ಆಂಧ್ರದ ಖ್ಯಮಂತ್ರಿಯೊಂದಿಗೆ ಸ್ಪರ್ಧೆಗಿಳಿದು ರಾಜಕೀಯ ಲಾಭ ಪಡೆಯಲು ಆತುರರಾಗಿದ್ದಾರೆ. 'ಅಭಿವೃದ್ಧಿ'ಗಾಗಿ ಎಂತಹದೇ ರಿಸ್ಕ್ ತೆಗೆದುಕೊಳ್ಳಲು ಸಿದ್ಧವೆಂದು, ಬದ್ಧವೆಂದು ಬಿಂಬಿಸಲು ಹೆಣಗುತ್ತಿದ್ದಾರೆ. ಈ ವಿಷಯದಲ್ಲಿ ಬೇರೆಯವರ ವಿರೋಧ ಬರದಂತೆ ಎಚ್ಚರಿಕೆ ವಹಿಸುತ್ತಾ ತಮ್ಮ ರಾಜಕೀಯ ತಂತ್ರ ಯಶಸ್ವಿ ಗೊಳ್ಳುವಂತೆ ನೋಡಿಕೊಳ್ಳುತ್ತಿದ್ದಾರೆ. ತಮ್ಮ ದಿವಾಳಿಖೋರ ನೀತಿಗಳಿಂದ ತತ್ತರಿಸುತ್ತಿರುವ ಜನತೆಯ ಆಕ್ರೋಶ ತಮ್ಮ ವಿರುದ್ಧ ತಿರುಗದಂತೆ, ಅದು



ನಿಶ್ಯಕ್ತವಾಗುವಂತೆ ನೋಡಿಕೊಳ್ಳುವ ಹವಣಿಕೆಯಲ್ಲಿದ್ದಾರೆ. ನೂರಾರು ಕೆಲವೆಡೆ ಸಾವಿರಾರು ಕೋಟಿ ರೂಪಾಯಿಗಳ ಹಗರಣ-ಭ್ರಷ್ಟಾಚಾರಗಳಿದ್ದರೂ ದಕ್ಷರೆಂಬ ಪೋಜು ನೀಡುತ್ತಿದ್ದಾರೆ. ಪತ್ರಿಕೆ-ಟಿವಿ ಮಾಧ್ಯಮಗಳನ್ನು ತಮ್ಮ ಸುತ್ತ ನೆರೆಸಿಕೊಳ್ಳುತ್ತಿದ್ದಾರೆ.

ಈವಾರ ಕರ್ನಾಟಕ ಒಂದು ನೋಟ —— ಎಸ್.ವೈ.ಗುರುಶಾಂತ್

ಮಂತ್ರಿಯಾದರೇ ಅಲ್ಲಂ!

ಅಲ್ಲಂ ವೀರಭದ್ರಪ್ಪನವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ಅಧ್ಯಕ್ಷರಾದ ನಂತರ ಉಲ್ಲೇಖಿಸಬಹುದಾದ್ದೆಂದರೆ, ಅದ್ದೂರಿಯಾಗಿ ಸನ್ಮಾನ ಮಾಡಿಸಿಕೊಂಡಿದ್ದು. ಆನಂತರ 'ಮಂತ್ರಿಗಿರಿಯ' ಆಸೆಯಲ್ಲೇ ಕಾಲ ಕಳೆದರು. ಪಕ್ಷದ ಅಧ್ಯಕ್ಷತೆಯೆಂಬುದು ಮಂತ್ರಿಗಿರಿಗಿಂತ ದೊಡ್ಡದಲ್ಲ, ಒಂದು ವೇಳೆ ಸ್ಥಾನ ದೊಡ್ಡದೆಂಬ ಮಾತು ಮಾಮೂಲಿ ನಂಬಿಕೆಯಾದರೂ, ಮಂತ್ರಿಗಿರಿಯ 'ಮಾಮೂಲಿ'ಗಿಂತ ಮಿಗಿಲೇನಲ್ಲ. ಸತ್ಯಕ್ಕಾಗಿ ಹಂಬಲಿಸಿದವರು. ಈ ಶುಷ್ಕ ಖಾತೆಯಿಂದ ತಮ್ಮನ್ನು ಮುಕ್ತಿಗೊಳಿಸಿ ಕೆಂಪು ದೀಪದ ಕಾರಿನೊಳಗೆ ಕೂಡಿಸುವಂತೆ ಮುಖ್ಯಮಂತ್ರಿಯನ್ನು ಪರಿಪರಿಯಾಗಿ ಕೇಳಿಕೊಂಡರು ಅಲ್ಲಂ! ಹೀಗೆ ಅವಲತ್ತುಕೊಂಡ ಅಲ್ಲಂರವರನ್ನು ಅಧ್ಯಕ್ಷ ಹುದ್ದೆಯಿಂದ ಮುಕ್ತಿಗೊಳಿಸಿ ವಾರ್ತಾ ಖಾತೆಗೆ ಪೋಸ್ಟಿಂಗ್ ಮಾಡಿದ್ದಾರೆ ಕೃಷ್ಣಾರವರು. ಕಾಂಗ್ರೆಸ್‌ನಲ್ಲಿ ಅಧ್ಯಕ್ಷ ಹುದ್ದೆಗೆ ಎಷ್ಟು ಮಾನ, ಸ್ಥಾನ ಎಂಬುದು ತಿಳಿದಿದ್ದೇ! ಅಲ್ಲಂರಿಂದ ಅಧಿಕಾರ ವಹಿಸಿಕೊಂಡ ಬಾಯಿಮಾತಿನ ಬಹದ್ದೂರ್ ಜನಾರ್ಧನ ಪೂಜಾರಿಯವರು ಆರಂಭದಲ್ಲಿ ಹೊಸದಾಗಿ ಊರಿಗೆ ಬಂದ ಪೊಲೀಸ್ ಇನ್ಸ್‌ಪೆಕ್ಟರ್ ತರಹ ಹಾದಿಬದಿಯಲ್ಲಿ ಹೋಗುವವರ ಮೇಲೆ ಅಬ್ಬರಿಸಿ, ಶಿಸ್ತು-ಶಿಸ್ತು ಮಾತನಾಡಿ 'ಮಾಮೂಲಿ'ಯಾಗಿ ಬಿಡುವಂತೆ ಪೂಜಾರಿಯವರು ಘರ್ಜಿಸಿ, ನಂತರ ಕ್ವಿಜ್ ಸ್ಪರ್ಧೆಗಳಿಗೆ ಇಳಿದು ಈಗ ವಿಶ್ರಾಂತಿ ಪಡೆಯುತ್ತಿದ್ದಾರೆ. ಈ ಅಧ್ಯಕ್ಷರ ಬೇಡಿಕೆ ಏನಿರುತ್ತದೆಯೋ ನೋಡಬೇಕು. ಅಂತೂ ಕೃಷ್ಣರವರು ಯಾವಾಗ, ಹೇಗೆ ಬೇಕು ಹಾಗೆ ಮಂತ್ರಿಮಂಡಲ ವಿಸ್ತರಿಸುತ್ತಾ, ಅದಕ್ಕೊಂದು ನೀತಿ-ಕಡಿವಾಣ ಇಲ್ಲದೇ ಒತ್ತಡ ಬಂದತ್ತ ವಾಲುತ್ತಾರೆ.

ಮಹಿಳೆಯರ ಮೂಗಿಗೆ ಬಿಜೆಪಿ ತುಪ್ಪ

ಮಹಿಳಾ ಮೀಸಲಾತಿ ಬಗ್ಗೆ ಬಿಜೆಪಿ ಒಂದು ನಾಟಕವಾಡಿತು. ಈ ಮಸೂದೆ ಶತಾಯಗತಾಯ ಪಾರ್ಲಿಮೆಂಟಿನಲ್ಲಿ ಅಂಗೀಕಾರವಾಗಬಾರದೆಂದು ಸತತ ಷಡ್ಯಂತ್ರಗಳನ್ನು ಹೊಸೆಯುತ್ತಲೇ ಇರುವ ಬಿಜೆಪಿಯು ಮಹಿಳಾ ಮೋರ್ಚಾದ ಕರ್ನಾಟಕ ಘಟಕದ ಸಮಾವೇಶವನ್ನು ಸಂಘಟಿಸಿ ಅದರಲ್ಲಿ ಸಚಿವ ಅನಂತಕುಮಾರ್‌ರವರ ಅಮೋಘ ಭಾಷಣಕ್ಕೆ ವ್ಯವಸ್ಥೆಗೊಳಿಸಿತ್ತು. ಈ ಕುಮಾರ(ಉತ್ತರ)ರು ಏರಿದ ಸ್ವರದಲ್ಲೇ ಮಹಿಳಾ ಮಸೂದೆಯನ್ನು ಬೆಂಬಲಿಸಿದರು. ಯಥಾರೀತಿ ಸೂತ್ರದಂತೆ ಬೇರೆ ಪಕ್ಷಗಳನ್ನು ತೆಗಳಿದರು. ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಏನೇ ಮಾಡಿಯಾದರೂ ಮಹಿಳಾ ಮೀಸಲಾತಿ ಮಸೂದೆ ಅಂಗೀಕರಿಸಿಯೇ ತೀರುವುದಾಗಿ ಘೋಷಿಸಿ ಚಪ್ಪಾಳೆ ತಟ್ಟಿಸಿಕೊಂಡರು. ಅದನ್ನು ಮಂಡಿಸುವ ಮೊದಲು ಕೆಲವು ಬದಲಾವಣೆಗಳನ್ನು ಮಾಡಲಾಗುವುದೆಂದು ಮೆಲ್ಲಗೆ ಉಸುರಿದರು. ಈ ಬದಲಾವಣೆ ಬಹುತೇಕ ಶೇ 33 ಎಂದು ಇರಲೂ ಬಹುದೇನೋ! ಮಧ್ಯಂತರ ಚುನಾವಣೆಗೆ ಹಾತೊರೆಯುತ್ತಿರುವ ಬಿಜೆಪಿ ತರಾತುರಿಯಲ್ಲಿ ಏರ್ಪಡಿಸಿದ ರಂಗವಿದೂಷಕ ಪ್ರಸಂಗದಂತಿತ್ತು ಈ ಸಮಾವೇಶ! ಇದಾದ ಬಳಿಕ ಶೇ 33 ಮೀಸಲಾತಿ ಸಿಕ್ಕೇಬಿಟ್ಟಿತು ಎಂದು ನಾಯಕರು ಮನೆಗೆ ವಾಪಸಾದರು. ಬಂದಿದ್ದ ಮಹಿಳೆಯರು ಬಿರುಮಾತು. ತೊಳೆದುಕೊಳ್ಳುವುದು ಹೇಗೆ ಎಂದು ಯೋಚಿಸುತ್ತಾ ತೆರಳಿದರು.

ಬಿಜೆಪಿ - ಹೊಸ ಆಟದ ವರಸೆ

ಬಿಜೆಪಿಯೀಗ ಹೊಸ ಅಧ್ಯಕ್ಷರನ್ನು ತ್ತುಕೊಂಡಿದೆ. ಕೇಂದ್ರ ಸಚಿವ ಂತಕುಮಾರ್‌ರವರನ್ನು ಬಿಜೆಪಿಯ ಜ್ಯಅಧ್ಯಕ್ಷರನ್ನಾಗಿ ಪ್ರತಿಷ್ಠಾಪಿಸಲಾಗಿದೆ. ಡಿಯೂರಪ್ಪನವರು ಪ್ರಚಾರ ಸಮಿತಿ ಕ್ಷರು! 'ಅಧ್ಯಕ್ಷರು' ಎಂದಿದ್ದರೂ ಒಟ್ಟಾರೆ ಾ ಕೀಲಿ ಇರುವುದು ಅನಂತಕುಮಾರ್ ುಲ್ಲೇ! ಹಿಂದೆ 'ಗಳಸ್ಯ-ಕಂಠಸ್ಯ' ರಾಗಿದ್ದ ಭಯತ್ರರು ಪರಸ್ಪರ ದೋಷಾರೋಪದಲ್ಲಿ ್ನರಾಗಿ ಭಿನ್ನ ಬಣದಲ್ಲಿರುವ ಸಂಗತಿ ಈಚಿನ ದ್ದಿಯಷ್ಟೇ ಅಲ್ಲ.

ಬಿಜೆಪಿ ಎಲ್ಲಾ ಹಂತಗಳ ಾವಣೆಗಳಲ್ಲಿಯೂ ಸೋಲನ್ನಪ್ಪಿತ್ತು. ುಕರುಗಳ ಭ್ರಷ್ಟಾಚಾರ, ಹಗರಣಗಳು ಜ್ಜಾಹೀರಾಗಿದ್ದವು. ಪಕ್ಷದೊಳಗೆ ತೀವ್ರ ೂಪದ ಗುಂಪುಗಾರಿಕೆ, ಕಲಹಗಳು ೀಟಗೊಂಡವು. ಶಾಸಕರ ಒಂದು ಹಿಂಡೇ ಂದ ಹೊರ ನಡೆದಿತ್ತು. ಅದು ಸಂಸದ ೀಶ್ವರ್ ಹೊರ ಹೋಗುವವರೆಗೂ ರಿಸಿತ್ತು. ಹೊರ ನಡೆಯಲು ಅನೇಕರು ತೆಯನ್ನು ಮಾಡಿಕೊಳ್ಳುವವರಿದ್ದರು. ಆರ್‌ಎಸ್‌ಎಸ್ ಎಷ್ಟೇ ಯತ್ನಿಸಿ ಮುವಾದಿ ದ್ವೇಷದ ದಳ್ಳುರಿಯಲ್ಲಿ ಪಿಯನ್ನು ಉಳಿಸಲು ಹೆಣಗುತ್ತಿದ್ದರೂ ಕ್ಕೆ ಕರ್ನಾಟಕದಲ್ಲಿ ಭವಿಷ್ಯವಿಲ್ಲ ಎಂಬುದು ವಾಗತೊಡಗಿತ್ತು. ಇಂತಹ ಸನ್ನಿವೇಶದಲ್ಲಿ ಹುಳುಕಿನ ಮೂಲ ಅಧ್ಯಕ್ಷರಾದ ರವರ ಮೇಲೆಯೇ ಎಂದು ಬಹಿರಂಗ ರಗಳು ನಡೆದಿದ್ದವು. ಹೀಗೆ ಕಳೆದು ಹೋಗುತ್ತಿರುವ ನೆಲೆ-ಮಾನ ಉಳಿಸಿಕೊಳ್ಳೋದು ಹೇಗೆ?. ಮಧ್ಯಂತರ ಚುನಾವಣೆ ಮೂಲಕ ಕೇಂದ್ರದಲ್ಲಿ ಅಧಿಕಾರಕ್ಕೆ ಬರಬೇಕೆಂಬ ತರಾತುರಿಯಲ್ಲಿರುವಾಗ ಮುಖ ಕಾಯ್ದುಕೊಂಡು ಸೀಟುಗಳನ್ನು ಹೆಚ್ಚಿಸಿಕೊಳ್ಳಲು ಏನು ಮಾಡೋದು ಎಂದು ನಾಯಕರು ಕೈ ಚಚ್ಚಿಕೊಳ್ಳುತ್ತಿರುವಾಗಲೇ ಅನಂತಕುಮಾರ್‌ರ ನೇಮಕವಾಗಿದೆ. ಇದಕ್ಕೆ ಬಿಜೆಪಿಯೊಳಗೆ ವಿರೋಧವಿದೆ ನಿಜ! ಆದರೆ ಅದನ್ನು ಬದಿಗೊತ್ತಲಾಗಿದೆ.

ಸಚಿವನಾಗಿದ್ದರೂ, ಅದನ್ನು ಉಳಿಸಿಕೊಂಡು ಅಧ್ಯಕ್ಷರಾಗಿ ನೇಮಕಗೊಂಡದ್ದು ಅನಂತಕುಮಾರರ ಸಾಮರ್ಥ್ಯಕ್ಕೆ ಸಾಕ್ಷಿಯೆಂದೇನೋ ಹೇಳುತ್ತಾರೆ ಮಂಧಿಮಾಗಧರು. ಆದರೆ ವಿಷಯ ಅದಲ್ಲ... ಕೇಂದ್ರ ಸರ್ಕಾರದ ಪ್ರಭಾವ, ಬಲ ಬಳಸಿ ರಾಜ್ಯದ ಹಿತಗಳಿಗಾಗಿ ನಿಲ್ಲುವ 'ಏಕಮಾತ್ರ' ನಾಯಕ ಎಂದು ಬಿಂಬಿಸಿ, ಹೈಟೆಕ್ ಕೃಷ್ಣರಿಗೆ ಸಾಟಿಯಾಗುವ ಮುಖಂಡ ಎಂದು ಪ್ರಚಾರಿಸುವುದು ಬಿಜೆಪಿಯ ತಂತ್ರವಿದ್ದಂತೆ ಕಾಣುತ್ತಿದೆ. ಹಾಗೆ ನೋಡಿದರೆ ಕೃಷ್ಣ ಅನಂತಕುಮಾರರನಡುವೆ 'ಮಧುರ' ಸಂಬಂಧವಿರುವುದನ್ನು ಹಲವು ಸಂದರ್ಭಗಳಲ್ಲಿ ಗುರುತಿಸಬಹುದಾಗಿದೆ. ಮೇಲಾಗಿ ಕೇಂದ್ರ-ರಾಜ್ಯ ಸರ್ಕಾರಗಳ ಆರ್ಥಿಕನೀತಿಗಳು ಒಂದೇ ಇರುವಾಗ, ಇದು ನಿಜಕ್ಕೂ ಏನಾದರೂ ಹೊಸ ಸೂತ್ರಗಳನ್ನು ತಂದೀತೆ ಎಂಬ ಅನುಮಾನ ರಾಜಕೀಯ ವಲಯದಲ್ಲಿ ಮೂಡಿರುವುದು ಅಸಹಜವೇನಲ್ಲ.

ಬೆಂಗಳೂರಿಗೆ ಆಗಮಿಸಿದ ಅನಂತಕುಮಾರರು 'ಕಾಂಗ್ರೆಸ್‌ಗೆ ಬಿಜೆಪಿಯೇ ಪರ್ಯಾಯ' ಎಂದು ಹೇಳಿಕೆ ನೀಡಿದ್ದಾರೆ. (ಅಧಿಕಾರಕ್ಕೆ ಬರುವ ಬಗ್ಗೆ ಅವರಿಗೂ ಶಂಕೆ ಇರಬಹುದು) ಅಂದರೆ ಕಾಂಗ್ರೆಸ್‌ಗೆ ಜನತಾದಳವೇ ಪರ್ಯಾಯವೆಂದಾದರೆ ಹೇಗೆ? ಎಂಬ ಚಿಂತೆ ಖಂಡಿತ ಅವರನ್ನು ಕಾಡುತ್ತಿದೆ.

ಹೀಗಾಗಿ ಜನತಾದಳದ ಉಭಯ ಬಣಗಳು ಒಂದಾಗದಂತೆ ಬಹಳ ಎಚ್ಚರಿಕೆಯಿಂದ ರಾಜಕೀಯ ಆಟಗಳು ಸಾಗಿವೆ. ಒಂದು ಹಂತದಲ್ಲಿ ಶಾಸಕಾಂಗ ಪಕ್ಷದ ನಾಯಕರಾಗಿದ್ದ ಪಿ.ಜಿ.ಆರ್.ಸಿಂಧ್ಯಾರವರು 'ವಿಲೀನದ ಪ್ರಕ್ರಿಯೆಗೆ ತಡೆ ಒಡ್ಡಲು ಅ.ಭಾ. ಪ್ರಗತಿಪರ ಜನತಾದಳದ ನಾಯಕರು ಕೃಷ್ಣರವರೊಂದಿಗೆ ಕೈ ಜೋಡಿಸಿದ್ದಾರೆ" ಎಂದು ಬಹಿರಂಗವಾಗಿ ಹೇಳಿದರು. ನಂತರದ ವಿದ್ಯಮಾನದಲ್ಲಿ ಸಿಂದ್ಯಾರನ್ನು ಬದಲಾಯಿಸಿ ಶಾಸಕಾಂಗ ಪಕ್ಷಕ್ಕೆ ಸೋಮಶೇಖರ್‌ರವರನ್ನು ನೇಮಕ ಮಾಡಲಾಯಿತು.

ಈಗಂತೂ ಜನತಾದಳ ನಾಲ್ಕು ಬಣಗಳಾಗಿ ಒಡೆದಿದೆ. ಸುಬ್ರಹ್ಮಣ್ಯಂ ಸ್ವಾಮಿಯವರ ಜನತಾ ಪಕ್ಷಕ್ಕೆ ರಾಷ್ಟ್ರಾಧ್ಯಕ್ಷರಾಗಿ ಹೆಂಡದ ಉದ್ಯಮಿ ಮಲ್ಯ ಘೋಷಿತವಾಗಿ ಬೀದರಿನಿಂದ ಬೆಂಗಳೂರಿನವರೆಗೆ ಜನರ ಕಷ್ಟಸುಖ ಅರಿಯಲು 'ಜಾಥಾ' ಹೊರಟು ಪುಕ್ಕಟ್ಟೆ ಮನೋರಂಜನೆ, ಹಣ ಒದಗಿಸುತ್ತಿದ್ದಾರೆ. ಜನತಾದಳ ಬಣಗಳು ಒಂದಾಗದಂತೆ ನೋಡಿಕೊಳ್ಳುವಲ್ಲಿ ರಾಮಕೃಷ್ಣ ಹೆಗಡೆಯವರದ್ದು ಸಕ್ರಿಯ ಪಾತ್ರವಿದೆ.

ಕಾಂಗ್ರೆಸ್-ಬಿಜೆಪಿಗಳು ರಾಜ್ಯದಲ್ಲಿ ಜನತಾದಳವು ಮೂರನೇ ಪರ್ಯಾಯವಾಗಿ ಬೆಳೆದುಬರದಂತೆ ತಡೆಯುವುದನ್ನೇ ಗುರಿಯಾಗಿಸಿಕೊಂಡಿದ್ದಾರೆ. ಹೀಗಾದರೆ ರಾಷ್ಟ್ರಮಟ್ಟದಲ್ಲಿಯೂ ಮೂರನೇ ಪರ್ಯಾಯವು ರೂಪುಗೊಳ್ಳದಂತೆ ತಡೆಯುವುದರ ಹುನ್ನಾರ. ಈ ದೃಷ್ಟಿಯಲ್ಲಿ ಮುಂದಿನ ಚುನಾವಣಾ ಹೋರಾಟ ಕಾಂಗ್ರೆಸ್ V/s ಬಿಜೆಪಿ ಎಂದು ಬಿಂಬಿಸಿ ಲಾಭ ಹೊಡೆಯುವ ಲೆಕ್ಕಾಚಾರವೂ ಇದೆ. ಇಂತಹ ಅನೇಕ ಲೆಕ್ಕಗಳನ್ನಿಟ್ಟು ರಾಜಕೀಯ ಚಟುವಟಿಕೆಗಳು ಚುರುಕುಗೊಂಡಿವೆ.



ಸಚಿವ ಮಲ್ಲಿಕಾರ್ಜುನ ನಾಗಪ್ಪನವರ ಮನೆಯ ಮುಂದೆ ಒಂದು ಜಾತ್ರೆ

ಈ ಮಂತ್ರಿಗಳ ಮನೆ ಮುಂದೆ ಜನಗಳ ಜಾತ್ರೆಯೋ ಜಾತ್ರೆ. ಯಾಕಾಗಿ ?

ಅಂದು ಜೂನ್ 6, ವಾರ ಶುಕ್ರವಾರ, ಬೆಳಗಾಗುತ್ತಲೇ ಗಂಗಾವತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ ನಾಗಪ್ಪನವರ ಮನೆಯ ಮುಂದೆ ವಿಸ್ತಾರವಾದ ಶಾಮಿಯಾನ ಎದ್ದು ನಿಂತಿತು. ನೋಡು ನೋಡುವಷ್ಟರಲ್ಲಿ ಶಾಮಿಯಾನ ತುಂಬ ಜನ! ಕೆಲವರು ಟ್ರಾಕ್ಟರುಗಳಲ್ಲಿ ಬಂದಿದ್ದರೆ, ಇನ್ನುಳಿದವರು ಲಾರಿಗಳಲ್ಲಿ ಆಗಮಿಸಿದ್ದರು. ಒಂದೆರಡು ಗಂಟೆಗಳಲ್ಲಿ ಸಚಿವರ ಮನೆಯ ಮುಂದೆ ಜನ ಜಾತ್ರೆಯೋ ಜಾತ್ರೆ! ಸಾವಿರಾರು ಜನರು

ಸಚಿವರ ಮನೆಯ ಮುಂದೆ ಇಷ್ಟೊಂದು ಜನ ಯಾಕೆ ಸೇರಿದ್ದಾರೆ? ದಾರಿಯಲ್ಲಿ ಹೋಗುವವರ ಕುತೂಹಲ ಕೆರಳಿ ಅವರೂ ಅಲ್ಲಿ ಇಲ್ಲಿ ನೆರಳಲ್ಲಿ ನಿಂತು ಪ್ರೇಕ್ಷಕರಾಗಲಣಿಯಾದರು. ಮಂತ್ರಿಗಳ ಮನೆಯಲ್ಲಿ ಯಾರೂ ಸತ್ತಿರಲಿಲ್ಲ. ಹಾಗೇನಾದರೂ ಆಗಿದ್ದರೆ ಆಗೊಮ್ಮೆ ಈಗೊಮ್ಮೆ ಅಳುವವರ ಧ್ವನಿ ಕೇಳಿಬರಬೇಕಾಗಿತ್ತು. ಮಂತ್ರಿಗಳ ಮನೆಯಲ್ಲಿ ಯಾವ ಶುಭಕಾರ್ಯವೂ ಇದ್ದಂತೆ ಕಾಣುತ್ತಿರಲಿಲ್ಲ. ಮನೆಯ ಮುಂದೆ ಕುಂತವರು ಅವರ ಬೀಗರು ಬಿಜ್ಜರು ಆಗಿರಲಿಲ್ಲ. ಪೋಲೀಸರ ಕಡುನೀಲಿ ವ್ಯಾನೊಂದು ಬುರ್‍ರನೆ ಬಂದು ನಿಂತಾಗ ಪ್ರೇಕ್ಷಕರಾಗಿ ನಿಂತವರು ನೆರಳಿನಲ್ಲೇ ಬೆವರಲು ಆರಂಭಿಸಿದರು. "ಸಚಿವ ಮಲ್ಲಿಕಾರ್ಜುನ ನಾಗಪ್ಪನವರಿಗೆ ಧಿಕ್ಕಾರ" ಎಂದು ಶಾಮಿಯಾನದ ಕೆಳಗೆ ಕುಳಿತ ಗಂಡಸರು ಮತ್ತು ಹೆಂಗಸರು ಒಂದೇ ಸಮನೆ ಕೂಗಲಾರಂಭಿಸಿದಾಗ ಮಜಾ ನೋಡಲು ನಿಂತಿದ್ದ ಜನಗಳಿಗೆ ನಿಜ ತಿಳಿಯಲಾರಂಭಿಸಿತು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕು ನೀರಾವರಿ ಪ್ರದೇಶವಾಗಿದ್ದರೂ ಸತತ ಮೂರನೇ ವರ್ಷಕ್ಕೆ ಕಾಲಿಟ್ಟ ಬರಗಾಲದಿಂದಾಗಿ ನೀರಾವರಿ ಪ್ರದೇಶದ ಕೃಷಿ ಕೂಲಿಕಾರರು ಮತ್ತು ಬಡರೈತರು ದೂರದ ನಗರಗಳಿಗೆ ವಲಸೆ ಹೋಗಿದ್ದಾರೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಕರ್ನಾಟಕ ಪ್ರಾಂತ ರೈತ ಸಂಘಗಳು ಕಳೆದ ಮೂರು ವರ್ಷಗಳಿಂದಲೂ ಬರಪರಿಹಾರ ಕಾಮಗಾರಿಗಳನ್ನು ಆರಂಭಿಸಲು ಒತ್ತಾಯಿಸುತ್ತಾ ಹೋರಾಟ ನಡೆಸುತ್ತಾ ಬಂದಿವೆ. ಜನರ ಒತ್ತಡಕ್ಕೆ ಮಣಿದು ಅಲ್ಲೊಂದು ಇಲ್ಲೊಂದು ಕಾಮಗಾರಿ ಕೈಗೊಳ್ಳಲಾದರೂ ಅವುಗಳನ್ನು ಅರ್ಧದಲ್ಲೇ ಕೈಬಿಟ್ಟು ಪರಿಹಾರಕ್ಕಾಗಿ ಬಂದ ಹಣವನ್ನು ಆಹಾರ ಧಾನ್ಯವನ್ನು ಕಬಳಿಸಲಾಗುತ್ತಿತ್ತು. ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಸಚಿವರ ಆಶೀರ್ವಾದ! ಸರ್ಕಾರಿ ಕಛೇರಿಗಳಲ್ಲಿ ಸಚಿವರ ಕುಲಬಾಂದವರದ್ದೇ ದರ್ಬಾರು!! ಪರಿಹಾರ ಕಾಮಗಾರಿಗಳನ್ನು ಗುತ್ತಿಗೆಗೆ ಕೊಡಬಾರದೆಂದೂ, ಪರಿಹಾರ ಕಾಮಗಾರಿಗಳಲ್ಲಿ ಯಂತ್ರಗಳನ್ನು ಬಳಸಬಾರದೆಂದೂ ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದರೂ ಕೆರೆಗಳ ಹೂಳೆತ್ತುವ ಕೆಲಸಕ್ಕಾಗಿ ಪೋಕ್‌ಲೇನ್‌ನಂತರಹ ಯಂತ್ರಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿತ್ತು ಮಾತ್ರವಲ್ಲ ಐಲಿ ನಾರಾಯಣಪ್ಪ, ನಾಗೇಶ್ವರರಾವ್, ಕನಕಗಿರಿಯ ತೆಗ್ಗಿನಮನಿ ಗುಂಡಪ್ಪ ಮೊದಲಾದ ಸಚಿವರ ಆಪ್ತರಿಗೇ ಗುತ್ತಿಗೆ ನೀಡಲಾಗುತ್ತಿತ್ತು. ಸಂಘಗಳ ಪ್ರತಿಭಟನೆ ವ್ಯಕ್ತವಾದಲೆಲ್ಲಾ ಸೇಡಿನ ಕ್ರಮವಾಗಿ ಕಾಮಗಾರಿಗಳನ್ನು ಬೇರೆಡೆಗೆ ವರ್ಗಾಯಿಸಲಾಗುತ್ತಿತ್ತು.



ಬರದ ಕಾಮಗಾರಿಗಳಿಗೆ ಆಗ್ರಹಿಸಿ ಚಳುವಳಿ

ಈ ಎಲ್ಲ ಅಕ್ರಮಗಳಿಗೆ ತೆರೆ ಬೀಳುವಂತಾಗಲು ಸಚಿವರನ್ನು ಬಯಲಿಗೆಳೆಯುವುದು ಅನಿವಾರ್ಯವಾಯಿತು. ನಿಲ್ಲಿಸಲಾದ ಬರಪರಿಹಾರ ಕಾಮಗಾರಿಗಳನ್ನು ತಕ್ಷಣ ಪುನರಾರಂಭಿಸಬೇಕು, ಕಾಮಗಾರಿಗಳನ್ನು ಗುತ್ತಿಗೆಗೆ ಕೊಡ[...] ಯಂತ್ರಗಳನ್ನು ಬಳಸದೆ ಕೂಲಿಕಾರರಿಗೆ [...] ಕೊಡಬೇಕು, ಕಾಮಗಾರಿಗಳಲ್ಲಿ ನಡೆದಿದೆ ಎನ್ನ[...] ಭ್ರಷ್ಟಾಚಾರದ ಪ್ರಕರಣಗಳ ವಿವರ[...] ತನಿಖೆಯಾಗಬೇಕು, ಎಲ್ಲ ಬಡವರಿಗೂ [...] ರೇಷನ್ ಕಾರ್ಡುಗಳನ್ನು ಕೊಡಬೇಕು, ಇ[...] ಬೇಡಿಕೆಗಳನ್ನು ಆಗ್ರಹಿಸಿ ಸಚಿವರ ಮ[...] ಮುಂದೆಯೇ ಸಾಮೂಹಿಕ ಧರಣಿ ಸತ್ಯಾ[...] ನಡೆಸಲು ನಿರ್ಧರಿಸಲಾಗಿತ್ತು.

ನಿರೀಕ್ಷೆಯಂತೆ, ಅಂದು ಮನೆಯಲ್ಲಿ ಸ[...] ಸುಳಿವು ಇರಲಿಲ್ಲ. ಚಳುವಳಿ ನಿರತರ [...] ಪೋಲೀಸರ ಒತ್ತಡ. ಚಳುವಳಿಗಾರರ ಬಿಗಿ [...] ಕೊನೆಗೆ ಉಪ ವಿಭಾಗಾಧಿಕಾರಿಗಳು ಕ[...] ಇವರ ಮಧ್ಯಸ್ತಿಕೆಯಲ್ಲಿ ಇಡೀ ದಿನದ ಸಾಮ[...] ಧರಣಿ ಸತ್ಯಾಗ್ರಹ ಮುಕ್ತಾಯ. ಅರ್ಧಕ್ಕೆ [...] ಲಾಗಿದ್ದ ಬರಪರಿಹಾರ ಕಾಮಗಾ[...] ಪುನರಾರಂಭ. ಇತರ ಬೇಡಿಕೆಗಳ ಈಡೇ[...] ಭರವಸೆ, ಸುಮಾರು 25 ಗ್ರಾಮಗಳಿಂದ ಆ[...] ಹೋರಾಟದಲ್ಲಿ ಪಾಲ್ಗೊಂಡ ರೈತ [...] ಕೂಲಿಕಾರರಲ್ಲಿ ಆತ್ಮವಿಶ್ವಾಸ ಮೂಡಿಸಿದ ಆ[...]

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯ[...] ಮಾರುತಿ ಮಾನ್ಪಡೆ ಅವರು ಗುಲ್ಬರ್ಗಾ[...] ಆಗಮಿಸಿ ಧರಣಿ ಸತ್ಯಾಗ್ರಹವನ್ನು ಉದ್ಘಾಟಿ[...] ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ [...] ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊ[...] ಬೆಂಗಳೂರಿನಿಂದ ಆಗಮಿಸಿದ್ದರು. ಕೆ.ಬ[...] ಜಿ.ನಾಗರಾಜ, ಹೆಚ್.ಲಿಂಗಪ್ಪ, ಯಮುನ[...] ರುದ್ರಪ್ಪ ರುದ್ರಗೌಡ, ಹುಲಗಪ್ಪ, ನಿ[...] ಮೊದಲಾದವರು ಹೋರಾಟದ [...] ವಹಿಸಿದ್ದರು.

- ಗಂಗಾಧರ

ನಮ್ಮ ನುಡಿ ಸಂ-ವಾದ


ಖಾಸಗಿ ಉದ್ದಿಮೆಯಲ್ಲಿ ಮೀಸಲಾತಿ!

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಬೇಕೆಂಬುದು ಸ್ವಾತಂತ್ರ್ಯ ಹೋರಾಟದ ಚಳುವಳಿಯ ಭಾಗವಾಗಿ ಹೊರಹೊಮ್ಮಿತು. ಮೀಸಲಾತಿ ಅಗತ್ಯ ಎಂಬುದನ್ನು ಸ್ವಂತ ಅನುಭವದ ಮೂಲಕ ತಿಳಿದುಕೊಂಡಿದ್ದ ಸಂವಿಧಾನ ಶಿಲ್ಪಿಗಳಲ್ಲೊಬ್ಬರಾದ ಬಿ.ಆರ್. ಅಂಬೇಡ್ಕರ್ ಅದನ್ನು ಸಂವಿಧಾನದಲ್ಲಿ ಅಳವಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆದರೆ ಉದ್ಯೋಗದಲ್ಲಿ ಮೀಸಲಾತಿ ಎಂಬುದು ಕಡ್ಡಾಯವಾಗಲಿಲ್ಲ.

ಸಂವಿಧಾನದ ಕಲಂ 335ರ ಪ್ರಕಾರ "ಒಕ್ಕೂಟ (ಕೇಂದ್ರ) ಮತ್ತು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕಗಳನ್ನು ಮಾಡುವ ಸಂಬಂಧ ಅನುಸೂಚಿತ (ಪರಿಶಿಷ್ಟ) ಜಾತಿಗಳ ಮತ್ತು ವರ್ಗಗಳ, ಕ್ಲೈಮುಗಳನ್ನು, ಆಡಳಿತ ದಕ್ಷತೆಯನ್ನು ಕಾಪಾಡಿಕೊಂಡು ಬರುವುದಕ್ಕೆ ಸುಸಂಗತವಾಗಿರುವಂತೆ, ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು" ಎಂದಿದೆ. ಇದರ ಆಧಾರದಲ್ಲಿಯೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಲಾಖೆಗಳಲ್ಲಿ ಉದ್ದಿಮೆಗಳಲ್ಲಿ ಮತ್ತು ಸರಕಾರ ಅನುದಾನ ನೀಡುತ್ತಿರುವ ಸಂಸ್ಥೆಗಳ ಉದ್ಯೋಗಗಳಲ್ಲೂ ಮೀಸಲಾತಿ ಇದೆ.

ಆದರೆ ಖಾಸಗಿ ಉದ್ದಿಮೆಗಳಲ್ಲಿ ಕಡ್ಡಾಯವಾಗಿ ಮೀಸಲಾತಿ ಸಾಧ್ಯವೆ? ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಅಂಬೇಡ್ಕರ್ ಜನ್ಮದಿನೋತ್ಸವದಂದು ಖಾಸಗಿ ಉದ್ದಿಮೆಗಳಲ್ಲೂ ಮೀಸಲಾತಿ ಬೇಕು ಎಂದು ಪ್ರತಿಪಾದಿಸಿದ್ದಾರೆ. ಆದರೆ ಮರುದಿನವೇ ಅವರ ಹೈಟೆಕ್ ಸ್ನೇಹಿತರಾದ ಇನ್‌ಫೋಸಿಸ್‌ನ ನಾರಾಯಣ ಮೂರ್ತಿಯವರು ಜಾತಿ ಆಧಾರದಲ್ಲಿ ಉದ್ಯೋಗ ನೀಡುವುದು ಸಾಧ್ಯವಿಲ್ಲ ಎಂದಿದ್ದಾರೆ. ಲಾಭಕೋರತನವೇ ಪ್ರಮುಖ ಅಸ್ತ್ರವನ್ನಾಗಿಟ್ಟುಕೊಂಡಿರುವ ಖಾಸಗಿ ಉದ್ದಿಮೆದಾರರು ಸಾಮಾಜಿಕ ಕಳಕಳಿಯ ಬಗ್ಗೆ ಗಮನಹರಿಸಬೇಕಷ್ಟೆ.

ಸ್ವಾತಂತ್ರ್ಯಾ ನಂತರದ 55 ವರ್ಷಗಳನ್ನು ಅವಲೋಕಿಸಿ ನೋಡಿದರೆ, ಮೀಸಲಾತಿಯಿಂದ ಇಡೀ ದಲಿತ ಸಮುದಾಯವೇ ಬೆಳವಣಿಗೆ ಆಗಿದೆ ಎಂದು ಹೇಳುವಂತಿಲ್ಲ. ಆದರೆ ಸೀಮಿತ ಪ್ರಮಾಣದಲ್ಲಿ ಪ್ರಗತಿ ಆಗಿದೆ. ಸ್ವಲ್ಪವಾದರೂ ಸಾಧಿಸಲು ಸಾಧ್ಯ ಎಂಬ ಛಲದ ಚಿಂಗುರು ಮೂಡಿದೆ. ಇದೀಗ ಕಾಂಗ್ರೆಸ್ ಸರಕಾರ ಆರಂಭಿಸಿದ ಹಾಗೂ ಬಿಜೆಪಿ ಸರಕಾರ ಮುಂದುವರಿಸುತ್ತಿರುವ ಉಖಾಜಾ (ಉದಾರೀಕರಣ, ಖಾಸಗೀಕರಣ, ಜಾಗತೀಕರಣ) ನೀತಿಯಿಂದಾಗಿ ಈ ಚಿಗುರು ಮುರುಟಿದೆ. ಮೀಸಲಾತಿ ಮರೀಚಿಕೆಯಾಗಿದೆ. ಕೇಂದ್ರ ರಾಜ್ಯ ಸರಕಾರದ ಕಛೇರಿಗಳಲ್ಲಿ ಉದ್ಯೋಗ ಕಡಿತ, ಸಾರ್ವಜನಿಕ ಉದ್ದಿಮೆಗಳ ನಾಶ, ಉದ್ಯೋಗ ರಹಿತ ಬೆಳವಣಿಗೆ - ಇದರಿಂದಾಗಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನ ವಂಚಿತರಾಗಿದ್ದಾರೆ. ಇತರೆ ವಿಭಾಗದ ಜನರಿಗೂ ಕೆಲಸದ ಅವಕಾಶ ಕಡಿಮೆಯಾಗಿದೆ.



ಮುಖ್ಯಮಂತ್ರಿಯವರು ಆದರದಿಂದ ಬರ ಮಾಡಿಕೊಂಡಿರುವ ಹೈಟೆಕ್ ಕ್ಷೇತ್ರದಲ್ಲಿ ದಲಿತ ಬಂಧುಗಳಿಗೆ ಕೆಲಸ ಸಿಗುತ್ತಿಲ್ಲ. ಇದೀಗ ಮುಖ್ಯಮಂತ್ರಿಯವರು ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಬೇಕು ಎಂದು ಪ್ರತಿಪಾದಿಸಿದ್ದಾರೆ. ಆದು ಒಳ್ಳೆಯದೆ. ಆದರೆ ಇದು ಸಾಧ್ಯವೇ? ಖಾಸಗೀ ಆಸ್ತಿ ಮೂಲಭೂತ ಹಕ್ಕಾಗಿರುವ ನಮ್ಮ ಸಂವಿಧಾನದಲ್ಲಿ ತಿದ್ದುಪಡಿ ತಾರದೆ, ಖಾಸಗೀ ಸಂಸ್ಥೆಗಳಲ್ಲಿ ಮೀಸಲಾತಿ ತರುವುದು ಕನಸಿನಮಾತು.

ಖಾಸಗಿ ಮಾಲಕರು ಎಷ್ಟು ಪ್ರಭಾವಶಾಲಿಗಳೆಂದು ಕೃಷ್ಣರಿಗೆ ಗೊತ್ತಿಲ್ಲವೇನು? ವೃತ್ತಿ ಶಿಕ್ಷಣದಲ್ಲಿ ಸಾಮಾಜಿಕ ನ್ಯಾಯವನ್ನು ಸ್ವಲ್ಪ ಮಟ್ಟಿಗಾದರೂ ಎತ್ತಿಹಿಡಿಯುವ ಸಾಮ[...] ಪ್ರವೇಶ ಪರೀಕ್ಷೆ (ಸಿ.ಇ.ಟಿ)ಯ[...] ನಾಶಗೊಳಿಸುವ ಹುನ್ನಾರಕ್ಕೆ ಸರಕಾರದ ಆ[...] ಸ್ತಂಭಗಳೇ ಸಂಚುನಡೆಸಿವೆ. ತಮ್ಮದೇ [...] ಅಧಿಕಾರ ನಡೆಸುತ್ತಿದ್ದರೂ, ಪಕ್ಷಕ್ಕಿಂತ [...] ಮುಖ್ಯ ಎಂದು ಖಾಸಗೀ ಶಿಕ್ಷಣ ಸಂಸ[...] ಕೂಗಾಡಿದವು. ಈಗಿರುವ ಶುಲ್ಕದಲ್ಲಿ[...] ಕಟ್ಟಡದ ಮೇಲೆ ಕಟ್ಟಡ ಕಟ್ಟಿಸುತ್ತಿರುವ ಖಾ[...] ಶಿಕ್ಷಣ ಸಂಸ್ಥೆಗಳು ಇನ್ನಷ್ಟು ಶುಲ್ಕ ಹೆಚ್ಚಿಸಬೇ[...] ಒತ್ತಾಯಿಸುತ್ತಿವೆ.

ಶಿಕ್ಷಣ ಕ್ಷೇತ್ರ[...] ಖಾಸಗೀ ಮಾಲಿಕ[...] ನ್ಯಾಯ ಒದಗಿಸಲು[...] ಸಾಧ್ಯವಾದ ಸರಕಾ[...] ಉದ್ಯೋಗ ಕ್ಷೇತ್ರ[...] ಮೀಸಲಾತಿ ಒದಗ[...] ಸಾಧ್ಯವೆ? ಜನ[...] ಆಯ್ಕೆಯಾಗಿರುವ [...] ಪ್ರತಿನಿಧಿಗಳೇ (ಕಾ[...] ಪಕ್ಷಕ್ಕೆ ಸೇರಿದ) ಸಾಮ[...] ನ್ಯಾಯವನ್ನು ಗಾಳಿಗೆ ತ[...] ಪ್ರಯತ್ನಿಸುತ್ತಿರುವಾಗ ನಾರಾಯಣ ಮ[...] ಅಜೀವ್ ಪ್ರೇಮ್ ಜೀ, ವಿ[...] ಮಲ್ಯರಂತವರು ಮೀಸಲಾತಿ ಪಾಲಿಸುತ್ತ[...] ನಂಬಿಕೆ ಯಾರಿಗಿದೆ? ಆದ್ದರಿಂದ ಸಾಮ[...] ಉದ್ದಿಮೆಗಳನ್ನು ಬಲಗೊಳಿಸಲು [...] ಹೋರಾಟ ಅಗತ್ಯ.

- ವಿನ[...]
ಬೆಂ[...]

ಜುಲೈ 1 ಕನ್ನಡ ಪತ್ರಿಕೋದ್ಯಮ ದಿನ

ಜುಲೈ 1 ಮಂಗಳೂರಿನಲ್ಲಿ ಕನ್ನಡದ ಪ್ರಥಮ ಪತ್ರಿಕೆ ಅರಳಿದ ದಿನ. ಮಂಗಳೂರು ಸಮಾಚಾರ ಹುಟ್ಟಿದ ದಿನವನ್ನು ಅಂದು ರಾಜ್ಯಾದ್ಯಂತ ಕನ್ನಡ ಪತ್ರಿಕೋದ್ಯಮ ದಿನವಾಗಿ ಆಚರಿಸಲಾಗುತ್ತಿದೆ. ಅದೇ ಮಂಗಳೂರು ಇನ್ನೊಂದು ಇತಿಹಾಸ ನಿರ್ಮಿಸಿತು. ಕನ್ನಡದ ದುಡಿವ ಜನರ ಪ್ರಾಣಮಿತ್ರ 'ಐಕ್ಯರಂಗ' ಕ್ಕೆ ಅಡಿಪಾಯವನ್ನು ಹಾಕಿತು. ಜನಶಕ್ತಿ ಹೆಸರಿನಲ್ಲಿ ಆರಂಭವಾದ ಪತ್ರಿಕೆ ನಂತರ ಐಕ್ಯರಂಗವಾಗುವತ್ತ ಹೆಜ್ಜೆ ಹಾಕಿತು.

ಕನ್ನಡ ಪತ್ರಿಕೋದ್ಯಮದ ದಿನದ ಈ ಸಂದರ್ಭದಲ್ಲಿ ಐಕ್ಯರಂಗದ ಸವಿ ನೆನಪುಗಳನ್ನು ಇಲ್ಲಿ ಮೆಲುಕು ಹಾಕಲಾಗಿದೆ. ಇಂದಿನ ಪತ್ರಿಕೋದ್ಯಮದಲ್ಲಿ ಐಕ್ಯರಂಗ ಭರವಸೆಯ ದೀಪ ಎಂದು ಬಣ್ಣಿಸುವ ಬರಹ ಸಂಗಾತಿ ಕೆ.ಬಿ.ಕನ್ನಯ್ಯ ಅವರದ್ದು.

ಐಕ್ಯರಂಗ ಎಂಬ ಮಿಣಿ ಮಿಣಿ ದೀಪ

ಕೆ.ಬಿ.ಕನ್ನಯ್ಯ

ಸಮುದ್ರ ರಾಜನ ಗೆಳೆತನ ಆದರೆ ಉಪ್ಪಿಗೆ ಬಡತನ ಎನ್ನುತ್ತಾರೆ. ಈ ಮಾತು ಮಾಧ್ಯಮ ಲೋಕಕ್ಕೂ ಅಕ್ಷರಶಃ ಅನ್ವಯಿಸುತ್ತದೆ. ಎಲ್ಲಿ ನೋಡಿದರೂ ಪತ್ರಿಕೆಗಳು, ಎಷ್ಟು ನೋಡಿದರೂ ಮುಗಿಯದಷ್ಟು ಚಾನೆಲ್‌ಗಳು ಆದರೆ ಸುದ್ದಿಗೆ ಮಾತ್ರ ಬಡತನ.

ಇದು ಮಾಧ್ಯಮ ಯುಗ. ಪತ್ರಿಕೆ ಟಿ.ವಿ.ಚಾನಲ್, ರೇಡಿಯೋ ಚಾನಲ್‌ಗಳು ಇನ್ನಿಲ್ಲದಂತೆ ಆರಂಭವಾಗುತ್ತಿವೆ. ಹಲವು ಗಟ್ಟಿಯಾಗಿ ನೆಲೆ ನಿಂತಿವೆ. ಆದರೂ ಸಹಾ ಓದುಗರಿಗೆ ಸುದ್ದಿ ಎನ್ನುವುದು ಮಾತ್ರ ಸಿಕ್ಕುತ್ತಿಲ್ಲ. ಅಕ್ಕಿ ಅಂಗಡಿಯಲ್ಲಿ ಅಕ್ಕಿ, ತರಕಾರಿ ಅಂಗಡಿಯಲ್ಲಿ ತರಕಾರಿ, ಬಟ್ಟೆ ಅಂಗಡಿಯಲ್ಲಿ ಬಟ್ಟೆ ಸಿಗುವಂತೆ ಸುದ್ದಿ ಅಂಗಡಿಯಲ್ಲಿ ಸುದ್ದಿ ಸಿಗಬೇಕು. ಆದರೆ ಹಾಗಾಗುತ್ತಿಲ್ಲ. ಗೋದಾಮಿನಲ್ಲಿ ಆಹಾರದ ಮೂಟೆಗಳು ಆದರೆ ಬಡವರಿಗೆ ಮಾತ್ರ ಬರ ಎಂಬ ಪರಿಸ್ಥಿತಿ ಮಾಧ್ಯಮ ಕ್ಷೇತ್ರದಲ್ಲಿಯೂ, ಲೆಕ್ಕ ಹಾಕಲು ಹೋದರೆ ಮಾಧ್ಯಮಗಳ ಸಂಖ್ಯೆ ಅಪಾರ ಆದರೆ ಸುದ್ದಿಗೆ ಮಾತ್ರ ಇನ್ನಿಲ್ಲದ ಬರ.

ಹೀಗೇಕಾಯಿತು? ಮಾಧ್ಯಮದ ವ್ಯಾಕರಣ ಇಂದು ಬದಲಾಗಿದೆ. ಜಾಗತೀಕರಣದ ಅಲೆಗಳು ಅಪ್ಪಳಿಸುವ ಮುನ್ನ ಇದ್ದ ಸುದ್ದಿಯ ವ್ಯಾಖ್ಯಾನಕ್ಕೂ ನಂತರದ ದಿನಗಳಲ್ಲಿನ ಸುದ್ದಿಯ ವ್ಯಾಖ್ಯಾನಕ್ಕೂ ಸ್ಪಷ್ಟ ವ್ಯತ್ಯಾಸವಿದೆ. ಮಾಧ್ಯಮ ಎನ್ನುವುದು ಅಭಿವೃದ್ಧಿಯತ್ತ ಹೆಜ್ಜೆ ಹಾಕಲು ಇರುವ ಊರುಗೋಲು. ಮಾಧ್ಯಮ ಎನ್ನುವುದು ಸಮಾಜ ಮತ್ತು ಸರ್ಕಾರದ ನಡುವಿನ ಸೇತುವೆ ಎಂಬ ದಿನಗಳಿದ್ದವು. ಆದರೆ ಈಗ ಈ ಆಲೋಚನೆ ಕ್ರಮೇಣ ಬದಲಾಗುತ್ತಿದೆ. ಮಾಧ್ಯಮ ಎನ್ನುವುದು ಎಲ್ಲಾ ಸರಕುಗಳಂತೆಯೇ ಮಾರಾಟಕ್ಕಿರುವ ಒಂದು ವಸ್ತು ಎನ್ನುವ ಭಾವನೆ ಆಳವಾಗಿ ಬೇರೂರುತ್ತಿದೆ. ಮಾಧ್ಯಮ ಎನ್ನುವುದನ್ನು ಮಾರಾಟದ ವಸ್ತುವಾಗಿ ಮಾತ್ರ ಸೀಮಿತಗೊಳಿಸಿದಾಗ ಅದು ಮಾರಾಟವಾಗಬಹುದಾದ ಸುದ್ದಿಯನ್ನು ಮಾತ್ರ ಕೊಡಲು ಇಷ್ಟಪಡುತ್ತದೆ. ಹೀಗಾಗಿಯೇ ಫ್ಯಾಷನ್ ಶೋ, ಬೇಬಿಶೋ, ಕ್ಯಾಸೆಟ್ ಬಿಡುಗಡೆ, ಫಿಲಂಫೇರ್ ಅವಾರ್ಡ್, ಲೆವಿನ್‌ಸ್ಕಿ ಹಗರಣ, ಹಿಲರಿ ಕ್ಲಿಂಟನ್ ಪುಸ್ತಕ, ಹ್ಯಾರಿ ಪಾಟರ್, ಸಿನೇಮಾನಟರು ಪ್ರೀತಿ ಪ್ರಣಯ ವಿಚ್ಛೇದನ ಇಂತಹದ್ದು ಮಾತ್ರ ಸುದ್ದಿಯಾಗುತ್ತದೆ. ಕೂಲಿಗಾಗಿ ಕಾಳು ಕೊಡುತ್ತಿಲ್ಲ, ಗೋದಾಮಿನಲ್ಲಿ ದಾಸ್ತಾನಿದ್ದರೂ ಬಡತನವಿದೆ, ವಿದ್ಯುಚ್ಛಕ್ತಿಯನ್ನು ಖಾಸಗಿ ರಂಗಕ್ಕೆ ಕೊಡುವುದು ಏಕೆ, ಹೊಸ ಕಾರ್ಮಿಕ ನೀತಿಯ ಅಗತ್ಯವೇನಿತ್ತು? ನದಿಗಳನ್ನು ಮಾರಾಟ ಮಾಡುತ್ತಿರುವುದು ಏಕೆ ಎಂಬ ಪ್ರಶ್ನೆಗಳು ಪ್ರಶ್ನೆಗಳಾಗಿ ನಮ್ಮ ಬಳಿಯೇ ಉಳಿಯುತ್ತಿದೆ.

ಮಾಧ್ಯಮ ಎಂಬುದು ಊರುಗೋಲು ಎಂಬ ನಂಬಿಕೆ ಹಾಗೂ ಮಾಧ್ಯಮ ಎಂಬುದು ಮಾರಾಟದ ಸರಕು ಎಂಬ ಎರಡು ಭಿನ್ನ ಆಲೋಚನೆಗಳ ನಡುವಿನ ಸಂಘರ್ಷ ಆರಂಭವಾಗಿದೆ.

ಬಡತನದ ದೇಶದಲ್ಲಿ ಕತ್ತಲು ಇರುವ ದೇಶದಲ್ಲಿ ಮಾಧ್ಯಮಗಳು ಮಿಣಿ ಮಿಣಿ ದೀಪಗಳಾಗಿದ್ದವು. ಕತ್ತಲು ದೊಡ್ಡದಿದ್ದರೂ ಅದನ್ನು ನುಂಗಿ ಹಾಕುವ ವಿಶ್ವಾಸ ಪುಟಾಣಿ ಹಣತೆಗಳಿಗಿತ್ತು. ಮಾಧ್ಯಮಗಳನ್ನು ಮುಂದಿಟ್ಟುಕೊಂಡು ಅನ್ಯಾಯಗಳನ್ನು ಗೆಲ್ಲುವ ನಂಬಿಕೆಯಿತ್ತು. ಆದರೆ ಇಂದು ಜಾಗತೀಕರಣ ಇಂತಹ ವಿಶ್ವಾಸವನ್ನು ಕಸಿದುಕೊಂಡಿದೆ. ಮಾಧ್ಯಮಗಳ ಮನಸ್ಸು ಬದಲಾಗುತ್ತಿದೆ.

ಜಾಗತೀಕರಣದಿಂದಾಗಿ ಮಾಧ್ಯಮಗಳು ಮಾರುಕಟ್ಟೆಯ ವಕ್ತಾರರಾಗಿವೆ. ಟಿವಿ ಚಾನಲ್‌ಗಳಿಗೆ ಬೇಕಾದ ದೊಡ್ಡ ಬಂಡವಾಳ ಮಾರುಕಟ್ಟೆಯನ್ನು ಆಕ್ರಮಿಸುವಂತೆ ಮಾಡಿದರೆ, ಟಿವಿ ಚಾನಲ್‌ಗಳಿಂದಾಗಿ ಗಲಿಬಿಲಿಗೊಂಡ ಪತ್ರಿಕೆಗಳು ತಮ್ಮನ್ನು ಮರುವ್ಯಾಖ್ಯಾನ ಮಾಡಿಕೊಳ್ಳುವ ಭರದಲ್ಲಿ ತಾವೂ ಮಾರುಕಟ್ಟೆ ಶಕ್ತಿಗಳಿಗೇ ಶರಣು ಹೋದವು. ಇದು ಕೊಳ್ಳುವವರಿಗೆ ಕೊಳ್ಳಲಾಗದವರ ಕಥೆಯನ್ನು' ವಿವರಿಸುತ್ತಿದ್ದ ಮಾಧ್ಯಮಗಳ ಮನಸ್ಸನ್ನು ಬದಲಿಸಿತು. ಈಗ ಕೊಳ್ಳುವ ಶಕ್ತಿ ಇರುವವರಿಗೆ ಕೊಳ್ಳುವವರ ವಿಚಾರವನ್ನು ಬಿಡಿಸಿಡುವ ಕೆಲಸವನ್ನು ಮಾಧ್ಯಮಗಳು ಕೈಗೆತ್ತಿಕೊಂಡಿವೆ.

ಇದ್ದ ಮಾಧ್ಯಮಗಳು ತಮ್ಮ ಮನಸ್ಸನ್ನು ಈ ರೀತಿ ಬದಲಿಸಿಕೊಳ್ಳುತ್ತಿದ್ದರೆ ವಿದೇಶದಿಂದಲೇ ನೇರವಾಗಿ ಹಾರಿ ಬಂದ ಚಾನಲ್, ಬರಲಿರುವ ಪತ್ರಿಕೆಗಳು ಮಾಧ್ಯಮದ ಮನಸ್ಸು ಇನ್ನಷ್ಟು ಬದಲಾಗಲು ಮಾರುಕಟ್ಟೆಯತ್ತ ವಾಲಲು ಕಾರಣವಾಗಲಿದೆ. ಜಾಗತೀಕರಣ ಇದ್ದ ಮಾಧ್ಯಮಗಳನ್ನು ಬದಲು ಮಾಡಿದೆ, ಜೊತೆಗೆ ನೇರವಾಗಿ ಬಂದಿಳಿದಿದೆ.

ಜಾಗತೀಕರಣ ಎಂಬುದು ವ್ಯಾಪಾರಿ ಮಾತುಕತೆ ಅಲ್ಲ ಅದು ಜೀವನದ ಮೇಲಿನ ಹಲ್ಲೆ. ಆದರೆ ಈಗಿನ ಮಾಧ್ಯಮಗಳು ವ್ಯಾಪಾರಿ ಮಾತುಕತೆಗೆ ಒತ್ತು ನೀಡುತ್ತಿದೆಯೇ ಹೊರತು ಜೀವನದ ಮೇಲಿನ ಹಲ್ಲೆಗಲ್ಲ. ರೇಷನ್ ಅಂಗಡಿಗಳಲ್ಲಿ ದಿಢೀರನೆ ಒಂದೊಂದೇ ಆಹಾರ ವಸ್ತು ಮಾಯವಾಗುತ್ತಿದೆ. ಬೀಡಿಕಾರ್ಮಿಕರು ಏಕೆ ಮನೆಕೆಲಸದವರಾಗಿ ಬದಲಾಗುತ್ತಿದ್ದಾರೆ. ಹಳ್ಳಿಗಳಿಗೆ ಉಸಿರು ನೀಡಿದ್ದ ಆಸ್ಪತ್ರೆಗಳನ್ನು ನಿಲ್ಲಿಸುವಂತೆ ವಿಶ್ವಬ್ಯಾಂಕ್ ಏಕೆ ಒತ್ತಡ ಹೇರುತ್ತಿದೆ? 8 ಗಂಟೆ ದುಡಿಯುತ್ತಿದ್ದ ಕಾರ್ಮಿಕರು 12 ಗಂಟೆ ದುಡಿಯಬೇಕಾಗಿ ಬಂದದ್ದು ಏಕೆ, ಸೆಗಣಿಯ ಕಣಜಕ್ಕೆ ಸೆಗಣಿಯನ್ನು ಏಕೆ ಆಮದು ಮಾಡಿಕೊಳ್ಳಲಾಗುತ್ತಿದೆ, ತೊಗರಿ ಊರು ಏಕೆ ಆತ್ಮಹತ್ಯೆಯ ತಾಣವಾಗುತ್ತಿದೆ. ಬಡ ಮೀನುಗಾರರ ಕೈಗೆ ಸಿಗದ ಮೀನುಗಳು ದೊಡ್ಡ ಕಂಪನಿಗಳ ದೋಣಿಗಳಿಗೆ ಏಕೆ ಸಿಗುತ್ತಿದೆ. ಗೋಡಂಬಿ ಹೆಂಚು ಕಾರ್ಮಿಕರು ಈಗ ಏನಾಗಿದ್ದಾರೆ? ಈ ಮತ್ತು ಇಂತಹ ಇನ್ನೂ ಹಲವಾರು 'ಏಕೆ'ಗಳಿಗೆ ಯಾವ ಮಾಧ್ಯಮ ಇಂದು ಉತ್ತರ ನೀಡುತ್ತಿದೆ?

ನಿಟ್ಟುಸಿರ ಮಧ್ಯೆಯೇ ನಡೆದಾಡುತ್ತಿರುವ ಪತ್ರಕರ್ತ ಪಿ.ಸಾಯಿನಾಥ್ 'ದೆಹಲಿಯ ಫ್ಯಾಷನ್ ಶೋಗೆ 500 ಜನ ವರದಿಗಾರರು ಅಂದೇ ದೆಹಲಿಯ ಬೀದಿಗಳಲ್ಲಿ ತುಂಬಿಹೋಗಿದ್ದ ಕೃಷಿ ಕಾರ್ಮಿಕರ ರ್‍ಯಾಲಿಗೆ ಬೆರಳೆಣಿಕೆಯ ಪತ್ರಕರ್ತರು ಇದ್ದರು' ಎಂಬುದನ್ನು ಬಿಚ್ಚಿಟ್ಟಿದ್ದರು. ವಾರಗಟ್ಟಲೆ ಫ್ಯಾಷನ್ ಶೋ ವರದಿ, ಎರಡು ಪ್ಯಾರಾ ದಾಟದ ಕೃಷಿ ಕಾರ್ಮಿಕರ ರ್‍ಯಾಲಿ ಹೀಗೇಕೆ?

ಎಲ್ಲ ಕಿಟಕಿಗಳಿಂದ ಗಾಳಿ, ಬೆಳಕು ಬರಲಿ ಎಂದಿದ್ದರು ಗಾಂಧೀಜಿ. ಎಲ್ಲಾ ಪತ್ರಿಕೆಗಳಿಂದ ಚಾನೆಲ್‌ಗಳಿಂದ ಗಾಳಿ ಬೆಳಕು ನೀಡುವ ಸುದ್ದಿಗಳು ಬರಬೇಕಿತ್ತು. ಜಾಗತೀಕರಣ ಉಂಟು ಮಾಡುವ ಮೊದಲ ಅಪಾಯವೇ ಆಯ್ಕೆಯ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು. ಬೆಲೆ ಇಳಿಸಿ, ಚಾನೆಲ್ ಮಣಿಸಿ ಅಂತೂ ಆಯ್ಕೆಗೆ ಅವಕಾಶವೇ ಇಲ್ಲದಂತ ಪತ್ರಿಕೆ, ಚಾನೆಲ್ ಸಂಖ್ಯೆಯನ್ನು ಕಡಿಮೆ ಮಾಡುತ್ತದೆ. ಆಗ ಇದ್ದ ಪತ್ರಿಕೆ ಓದಬೇಕು, ಕೊಟ್ಟದ್ದನ್ನು ಮಾತ್ರ ಓದಬೇಕು ಎಂಬ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಜಾಗತೀಕರಣಕ್ಕೆ ಬೇಕಾದದ್ದು ಇದೇ. ಇಂತಹ ಸ್ಥಿತಿಯತ್ತಲೇ ನಾವು ಹೆಜ್ಜೆ ಹಾಕಿದ್ದೇವೆ. ದಾರಿ ದೂರವೇನೂ ಇಲ್ಲ.

ಮಾಧ್ಯಮಗಳು ಸಮಾಜ ಹಾಗೂ ಸರ್ಕಾರದ ನಡುವಿನ ಕೊಂಡಿ ಎನ್ನುತ್ತಾರೆ. ಜನರ ಮನಸ್ಸನ್ನು ನೀತಿ ರೂಪಕರಿಗೆ ತಿಳಿಸುವ ಆ ಮೂಲಕ ಜನರಿಗೆ ಬೇಕಾದ ನೀತಿಯನ್ನು ರೂಪಿಸುವ, ಹೀಗೆ ರೂಪುಗೊಂಡ ನೀತಿಯನ್ನು ಮತ್ತೆ ಜನರಿಗೆ ತಿಳಿಸುವ ಸೇತುವೆಯಾಗಿ ಮಾಧ್ಯಮಗಳು ಕೆಲಸ ಮಾಡುತ್ತಿತ್ತು. ಆದರೆ ಕಾಲ ಬದಲಾಗಿದೆ. ಮಾಧ್ಯಮಗಳು ಈಗ ಈ ಕೆಲಸ ನಿರ್ವಹಿಸುತ್ತಿಲ್ಲವಾದ್ದರಿಂದಲೇ ಸರ್ಕಾರ ಮತ್ತು ಸಮಾಜದ ನಡುವೆ ಗೋಡೆ ಏಳುತ್ತಿದೆ, ಉಸಿರುಗಟ್ಟಿಸುವ ವಾತಾವರಣವಿದೆ.

ಇದು ಈಗಾಗಲೇ ನಮ್ಮ ಮಾಧ್ಯಮಗಳು ಹೆಜ್ಜೆ ಹಾಕಿರುವ ಮುಂದಿನ ದಿನಗಳಲ್ಲಿ ಹಾಕುವ ಹೆಜ್ಜೆಯ ರೀತಿ. ಮಾಧ್ಯಮಕ್ಕೆ ಕವಿದಿರುವ ಈ ಅಂಧಕಾರದ ಮಧ್ಯೆ 'ಐಕ್ಯರಂಗ' ಒಂದು ಮಿಣಿ ಮಿಣಿ ದೀಪ. ರೇಷ್ಮೆ ಗೂಡಿನಲ್ಲೇ ರೈತರು ಸಾಯಬೇಕೆ? ವಿದ್ಯುತ್ ದರ ಏರಿಕೆ ಅಸಹನೀಯ ಹೊರೆ, ತೊಗರಿ ಮಂಡಳಿ ರಚನೆ ಮುಂದೇನು? ಪೆಟ್ರೋಲ್- ಡೀಸೆಲ್ ಬೆಲೆ ಏರಿಕೆ ಅನಗತ್ಯ ಹೊರೆ, ಜನಪರ ಪರ್ಯಾಯ ಕಟ್ಟೋಣ ಬನ್ನಿ, ಸಾರ್ವಜನಿಕ ಉದ್ದಿಮೆ, ಕಾಮಧೇನುವಿನ ಕತ್ತು ಕೊಯ್ಯುವ ಸರ್ಕಾರ, ಬಿಕ್ಕಟ್ಟಿನಲ್ಲಿ ಪ್ಲಾಂಟೇಶನ್ ಉದ್ದಿಮೆ ಬೀದಿಪಾಲಾದ ಕಾರ್ಮಿಕರು, 300 ಕೋಟಿ ಔಷಧಿ ಹಗರಣ ಮುಚ್ಚಿಹಾಕುವ ಹುನ್ನಾರ, ಟೆಲಿಕಾಂ ದರಗಳ ಸಮರ ಗೆದ್ದವರು ಯಾರು?, ರೇಷನ್ ಕಾರ್ಡ್ ಕಿತ್ತುಕೊಳ್ತಾರೋ…, ಗ್ರಾಮೀಣ ಕೃಪಾಂಕ ಮುಂದೇನು? ವರದಕ್ಷಿಣೆಯ ಪೈಶಾಚಿಕ ಅವತಾರಗಳು, ಕರ್ನಾಟಕದ ವಿದ್ಯುತ್‌ರಂಗ ಸಾಗಿದೆ ಎತ್ತ?, ನೀರು ನದಿ ಮಾರಾಟ, ಬರವೋ ಸರ್ಕಾರ ಬರಿಸಿದ ಕ್ಷಾಮವೋ….

ಮನೆಮನೆಯೂ ಕತ್ತಲೆ, ಪ್ರತಿ ಕಣ್ಣು ಕಣ್ಣೀರು… ಎಂಬ ಈ ದಿನಗಳಲ್ಲಿ ಈ ಕತ್ತಲೆಯ ಹಿಂದಿನ ಕಾರಣವನ್ನು ತಿಳಿಸುವ ಕಣ್ಣೀರಿನ ಕಥೆಗಳನ್ನು ಹೇಳುತ್ತಿರುವುದು 'ಐಕ್ಯರಂಗ'.

ಐಕ್ಯರಂಗ ಬಳಗ

ದುಡಿಯುವ ಜನರ ಪ್ರಾಣಮಿತ್ರ ಐಕ್ಯರಂಗ ಜೂನ್ 15 ರಿಂದ ಜುಲೈ 1ರ ತನಕ ಪಾಕ್ಷಿಕವನ್ನಾಚರಿಸಿಕೊಳ್ಳುತ್ತಿರುವ ಬಗ್ಗೆ ತಮಗೆ ತಿಳಿದಿದೆ. ಇದರ ಅಂಗವಾಗಿ ರಾಜ್ಯಾದ್ಯಂತ ವಿಚಾರಸಂಕಿರಣ ಸಮಾವೇಶ, ಸಭೆಗಳು ಜರುಗುತ್ತಿವೆ.

ಗುಲ್ಬರ್ಗಾ : 'ಒಂದು ಕಾಲದಲ್ಲಿ ಪತ್ರಿಕೆಯನ್ನು ಒಳಗೊಂಡ ಮಾಧ್ಯಮ ರಂಗಕ್ಕೆ ಸೇವೆಯೇ ಮುಖ್ಯ ಗುರಿಯಾಗಿತ್ತು. ಆದರೆ ಈಗ ಅದೊಂದು ಲಾಭದಾಯಕ ಉದ್ಯೋಗವಾಗಿದೆ' ಎಂದು ವಿಧಾನ ಪರಿಷತ್ ಮಾಜಿ ಉಪ ಸಭಾಪತಿ ಬಿ.ಆರ್. ಪಾಟಿಲ ವ್ಯಾಖ್ಯಾನಿಸಿದರು.

ಜೂನ್ 22 ರಂದು ಗುಲ್ಬರ್ಗಾದಲ್ಲಿ ನಡೆದ ಐಕ್ಯರಂಗ ಓದುಗರ ಬಳಗ ಏರ್ಪಡಿಸಿದ್ದ 'ಕವಲು ದಾರಿಯಲ್ಲಿ ಮಾಧ್ಯಮ' ಕುರಿತ ವಿಚಾರ ಸಂಕಿರಣದಲ್ಲಿ ಅತಿಥಿಯಾಗಿ ಮಾತನಾಡಿ, ಪತ್ರಿಕೆಗಳಲ್ಲಿ ಬಂದದ್ದೆಲ್ಲ ಸತ್ಯ, ವಾಸ್ತವ ಎಂದು ಒಪ್ಪಿಕೊಳ್ಳುವುದು ಅಪಾಯಕಾರಿ. ಏಕೆಂದರೆ ಪತ್ರಿಕೆಗಳ ಮೂಲಕ ವ್ಯಕ್ತಿಗಳ, ಪಕ್ಷಗಳ ದಿಕ್ಕು ತಪ್ಪಿಸುವ ಕೆಲಸವೂ ನಡೆಯುತ್ತಿದೆ. ಇಂಥ ಪ್ರವೃತ್ತಿಗಳ ಬಗ್ಗೆ ಓದುಗರೇ ಎಚ್ಚರದಿಂದ ಇರಬೇಕು ಎಂದರು.

ದುರ್ಬಳಕೆ

ಯುದ್ಧ ನಡೆಸದೇ ಇಡೀ ವಿಶ್ವವನ್ನು ಮತ್ತು ಸಂಪತ್ತನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಶ್ರೀಮಂತ ದೇಶಗಳು ಮಾಧ್ಯಮವನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂದು ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಆರೋಪಿಸಿದರು.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಪತ್ರಿಕಾ ಮಾಧ್ಯಮ ಬ್ರಿಟೀಷರ ವಿರುದ್ಧದ ಅಸ್ತ್ರವಾಗಿತ್ತು. ಆದರೆ, ಈಗ ಬಳಕೆದಾರರ ಸಂಸ್ಕೃತಿ ಬೆಳೆಸಲು, ಬಡವರ ಹೊಟ್ಟೆ ಮೇಲೆ ಹೊಡೆಯಲು ಬಳಕೆಯಾಗುತ್ತಿದೆ ಎಂದು ಅವರು ಟೀಕಿಸಿದರು.

ಸಾಮಾಜಿಕ ಸಮಸ್ಯೆಗಳಿಗೆ ಪತ್ರಿಕೆಗಳಲ್ಲಿ ಪ್ರಾಮುಖ್ಯ ಸಿಗುತ್ತಿಲ್ಲ ಎಂದು ವಿಷಾಧಿಸಿದ ಅವರು, ಸಮಸ್ಯೆಯ ಮೂಲ ತಿಳಿಸಲು ಮಾಧ್ಯಮಗಳು ಮುಂದಾಗಬೇಕು ಎಂದು ಸಲಹೆ ಮಾಡಿದರು.

ಮಾಧ್ಯಮ ದೀಪ ಇದ್ದಂತೆ. ಅದರಿಂದ ಬೆಳಕೂ ಕೊಡಬಹುದು ಅಥವಾ ಬೆಂಕಿ ಹಚ್ಚಬಹುದು. ಅದು ಏನು ಮಾಡುತ್ತಿದೆ ಎಂಬುದನ್ನು ಓದುಗರೇ ಅರಿತುಕೊಳ್ಳಬೇಕು ಎಂದು ಸಂಕಿರಣ ಉದ್ಘಾಟಿಸಿದ ಪತ್ರಕರ್ತ ರಂಜಾನ ದರ್ಗಾ ಹೇಳಿದರು.

ಕಲ್ಯಾಣದ ಅನುಭವ ಮಂಟಪದಲ್ಲಿ ಮೂಡಿಬಂದ ವಚನಾಮೃತವನ್ನು ಗೋಡೆಬರಹಕ್ಕಿಳಿಸುವುದರ ಮೂಲಕ ಶರಣರು ಜನಪರ ಮಾಧ್ಯಮಕ್ಕೆ ನಾಂದಿ ಹಾಡಿದರು ಎಂದು ಅವರು ತಿಳಿಸಿದರು.

ವಿಶ್ವಾಸಾರ್ಹತೆಗೆ ಧಕ್ಕೆ

ಪತ್ರಿಕೆ ಜವಾಬ್ದಾರಿ ಕಳೆದುಕೊಂಡಾಗ ವಿಶ್ವಾಸಾರ್ಹತೆಗೇ ಧಕ್ಕೆ ಬರುತ್ತದೆ. ಪತ್ರಿಕೆಗಳು ಅನೇಕ ಸಲ ಅತಿರೇಕದ ಸುದ್ದಿಗಳನ್ನು ನೀಡಿ ಜನ ಸಂವೇದನೆಯನ್ನೇ ಕಳೆದುಕೊಳ್ಳುವಂತೆ ಮಾಡುತ್ತಿವೆ ಎಂದು ಅಧ್ಯಾಪಕ ಪ್ರಭು ಖಾನಾಪುರೆ ಹೇಳಿದರು.

ಮಾಧ್ಯಮ ಈಗ ವೃತ್ತಿಯ ಸ್ವರೂಪ ಕಳೆದುಕೊಂಡು ಉದ್ಯಮದ ಸ್ವರೂಪ ಪಡೆದುಕೊಂಡಿದೆ ಎಂದು ಪ್ರತಿಕ್ರಿಯೆ ನೀಡಿದ ಅಧ್ಯಾಪಕ ಆರ್.ಕೆ. ಹುಡಗಿ ವಿಶ್ಲೇಷಿಸಿದರು.

ಆದರೆ ಬೇರೆ ಉದ್ಯಮಕ್ಕೂ ಮಾಧ್ಯಮಕ್ಕೂ ಬಹಳ ವ್ಯತ್ಯಾಸವಿದೆ. ಮಾಧ್ಯಮ ವ್ಯಕ್ತಿಗಳ ಮನಸ್ಸಿನ ಮೇಲೆ ಪ್ರಭಾವ ಬೀರುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು. ಕೆ.ನೀಲಾ ಪ್ರಾಸ್ತಾವಿಕ ಭಾಷಣ ಮಾಡಿದರು. ಬಳಗದ ಸಂಚಾಲಕ ಎಸ್.ಎಸ್.ಮುಳೆಗಾಂವ ನಿರೂಪಣೆ ಮಾಡಿದರು.


ಸೇವೆಯ ಬದಲು ಲಾಭದ ಉದ್ಯೋಗವಾದ ಮಾಧ್ಯಮ

ಐಕ್ಯರಂಗ ಪ್ರಸಾರ ಮಾಸದ ಹಿನ್ನೆಲೆಯಲ್ಲಿ ಈ ವಿಚಾರ ಸಂಕಿರಣವು ಜೂನ್ 22 ರಂದು ಜರುಗಿತು. ಮಾಧ್ಯಮ ಪ್ರತಿನಿಧಿಗಳು, ವಿವಿಧ ಕ್ಷೇತ್ರದ ಗಣ್ಯರು, ಸಂಘಟನೆಗಳ ಮುಖಂಡರು ರಾಜಕೀಯ ನಾಯಕರು ನೂರಾರು ಜನ ಭಾಗವಹಿಸಿದ್ದರು. ಗುಲಬರ್ಗಾ ಜಿಲ್ಲೆಯಾದ್ಯಂತ ಚಂದಾದಾರರನ್ನು ನೋಂದಾಯಿಸಲು ನಿರ್ಧರಿಸಲಾಗಿದ್ದು, ಆ ಕೂಡಲೇ ಚಂದಾ ನೋಂದಣಿಯೂ ನಡೆಯಿತು. ಅದು ಸ್ಫೂರ್ತಿದಾಯಕವಾಗಿ ಮುಂದುವರಿದಿದೆ.

ಬೆಂಗಳೂರಿನಲ್ಲಿ…

ರಾಜಧಾನಿ ಬೆಂಗಳೂರಿ ನಲ್ಲಿಯೂ ಸಹ ಸ್ಥಳೀಯ ಮಟ್ಟದ ಸಮಾವೇಶಗಳು ಜರುಗುತ್ತಿವೆ. ಜೂನ್ 23 ರ ಸಂಜೆ ಶೇಷಾದ್ರಿ ಪುರದ ಕೆನ್ ಕಲಾ ಶಾಲೆಯಲ್ಲಿ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

"ಕವಲು ದಾರಿಯಲ್ಲಿ ಪತ್ರಿಕಾ ಮಾಧ್ಯಮಗಳು" ಎನ್ನುವ ವಿಷಯದ ಮೇಲಿನ ಚರ್ಚೆಯಲ್ಲಿ ಹತ್ತಾರು ಕ್ಷೇತ್ರಗಳ ಅನುಭವಿ ನಾಯಕರು ಪಾಲ್ಗೊಂಡಿದ್ದರು.



ಪುಟ 10 ಕ್ಕೆ

ತುರ್ತುಪರಿಸ್ಥಿತಿಯ ಕ

ಇಂದಿರಾಗಾಂಧಿ ದೇಶದ ಮೇಲೆ ತುರ್ತುಪರಿಸ್ಥಿತಿ ಹೇರಿ 28 ವರುಷಗಳಾಗುತ್ತಿವೆ. ಈ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಉಳಿಸಲು ಜೈಲು ಸೇರಿದ್ದವೆಂದು ಕೊಚ್ಚಿಕೊಳ್ಳುತ್ತಾರೆ ಬಿಜೆಪಿ ನಾಯಕರು. ಆದರೆ ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡುವ ಫ್ಯಾಸಿಸ್ಟ್ ಮಾದರಿ ಅಜೆಂಡಾ ತಲೆಯಲ್ಲಿ ಹೊತ್ತು ಅದರ ಜಾರಿಗೆ ಇಳಿದಿರುವ ಕ್ರಮಗಳು ಮುಂದಿನ ದಿನಗಳಲ್ಲಿ ತುರ್ತುಪರಿಸ್ಥಿತಿಗಿಂತಲೂ ಭೀಕರ ದಮನಕೋರ ವ್ಯವಸ್ಥೆ ಹೇರುವ ಎಲ್ಲಾ ಲಕ್ಷಣಗಳು ತೋರಿದ್ದಾರೆ. ಈ ಸರ್ವಾಧಿಕಾರತ್ವ ತಲೆ ಎತ್ತಿ, ಜನರ ಹಕ್ಕುಗಳನ್ನು ದಮನಿಸುವುದುರ ಮೂಲ ನೆಲೆ ಯಾವುದು ಎಂಬುದನ್ನು ಪ್ರಜಾಪ್ರಭುತ್ವೀಯ ಶಕ್ತಿಗಳ ಹೋರಾಟದ ದಿಕ್ಕನ್ನು ಲೇಖಕರು ಎತ್ತಿ ತೋರಿದ್ದಾರೆ.

ಪ್ರಕಾಶ್ ಕಾರಟ್

ಜೂನ್ 26, 1975 - ಭಾರತದಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಘೋಷಿಸಿದ ದಿನ. 28 ವರ್ಷಗಳ ಹಿಂದೆ ಈ ಘಟನೆ ಭಾರತದ ರಾಜಕೀಯ ಇತಿಹಾಸದಲ್ಲಿ ಸದಾ ಮಹತ್ವದ್ದಾಗಿರುತ್ತದೆ. ಏಕೆಂದರೆ ಸ್ವತಂತ್ರದ ನಂತರ ಮೊದಲ ಬಾರಿಗೆ ಒಂದು ಅಲ್ಪಾವಧಿಯ ಸರ್ವಾಧಿಕಾರಶಾಹಿ ಆಳ್ವಿಕೆಗೆ ಅದು ಹಾದಿ ಮಾಡಿಕೊಟ್ಟಿತು. ತುರ್ತುಪರಿಸ್ಥಿತಿಯ ಹತ್ತೊಂಭತ್ತು ತಿಂಗಳಲ್ಲಿ ವಿರೋಧ ಪಕ್ಷಗಳ ಸಾವಿರಾರು ಮುಖಂಡರು, ಕಾರ್ಯಕರ್ತರನ್ನು ಬಂಧಿಸಿ ಜೈಲಿನಲ್ಲಿಡಲಾಯಿತು. ಸಂವಿಧಾನ ನೀಡಿದ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳನ್ನು ಅಮಾನತುಗೊಳಿಸಲಾಯಿತು. ಸಂಸತ್ತನ್ನು ನಿಷ್ಪ್ರಯೋಜಕಗೊಳಿಸಲಾಯಿತು, ಅಲ್ಲಿ ಮಾಡಿದ ಭಾಷಣಗಳನ್ನು ಸೆನ್ಸಾರ್ ಮಾಡಲಾಯಿತು. ಮಾಧ್ಯಮಗಳ ಮೇಲೆ ಸೆನ್ಸಾರ್ ಶಿಪ್ ಹೇರಲಾಯಿತು. ಕೆಲವು ಮೂಲಭೂತ ಹಕ್ಕುಗಳ ಜ್ಯಾರಿಗಾಗಿ ನ್ಯಾಯಾಲಯದ ಮೊರೆ ಹೋಗುವ ನಾಗರಿಕರ ಹಕ್ಕನ್ನು ಅಮಾನತುಗೊಳಿಸಲಾಯಿತು. ಇವನ್ನೆಲ್ಲಾ ಇಂದಿರಾಗಾಂಧಿಯವರು ಆಂತರಿಕ ಗಲಭೆಗಳಿಂದಾಗಿ ಭಾರತದ ಭದ್ರತೆಗೆ ಬೆದರಿಕೆಬಂದಿದೆ ಎಂಬ ಆಧಾರದಲ್ಲಿ ಮಾಡಿದ್ದರು.

<u>1970ರ ದಶಕದಲ್ಲಿ</u>

ಆಳುವ ಮತ್ತು ಪ್ರತಿಪಕ್ಷದಲ್ಲಿರುವ ಬೂರ್ಜ್ವಾ - ಭೂಮಾಲಕ ಪಕ್ಷಗಳ ನಡುವಿನ ತೀಕ್ಷ್ಣ ಸಂಘರ್ಷದಿಂದಾಗಿ ಪ್ರಜಾಪ್ರಭುತ್ವದ ಮೇಲೆ ಈ ಗಂಭೀರ ಧಾಳಿ ಬಂದಿತ್ತು. ಈ ಸಂಘರ್ಷವೂ ಕೂಡಾ ಬೂರ್ಜ್ವಾ - ಭೂಮಾಲಿಕ ವ್ಯವಸ್ಥೆಯೊಳಗಿನ ಆಳವಾದ ಬಿಕ್ಕಟ್ಟಿನ ಅಭಿವ್ಯಕ್ತಿಯಾಗಿತ್ತು. ಹೀಗೆ ಕತ್ತರಿಸಲ್ಪಟ್ಟ ಪ್ರಜಾಪ್ರಭುತ್ವ ಮತ್ತು ದಮನಕಾರೀ ಆಳ್ವಿಕೆಯ ಪ್ರಯೋಗ ಬಹಳ ದಿನ ನಡೆಯಲಿಲ್ಲ. ಪ್ರಜಾಪ್ರಭುತ್ವ ಹಕ್ಕುಗಳನ್ನು ಹಿಸುಕಿಹಾಕಿದ್ದು ಮತ್ತು ಸುಪಾನ್ ವಿರೋಧ ಕಾರ್ಯಕ್ರಮದಲ್ಲಿ ನಡೆಸಿದ ಅತ್ಯಾಚಾರಗಳು ಒಂದು ಸಾಮಾಜಿಕ ಉತ್ಕ್ರಾಂತಿಯ ಪರಿಸ್ಥಿತಿಗಳನ್ನು ನಿರ್ಮಿಸಿದವು.




ಫ್ಯಾಸಿಸ್ಟ ಮನದೊಳಗೆ ಬಚ್ಚಿಟ್ಟುಕೊಂಡ ಅಜೆಂಡಾ

ಸರ್ವಾಧಿಕಾರಶಾಹಿ ಆಳ್ವಿಕೆಯ ವಿರುದ್ಧ ಜನಗಳ ಆಕ್ರೋಶ ಸ್ಫೋಟಗೊಂಡಿತು, ಇಂದಿರಾಗಾಂಧಿಯವರು ಇದ್ದಕ್ಕಿದ್ದಂತೆ ಘೋಷಿಸಿದ ಮಾರ್ಚ್ 1977ರ ಚುನಾವಣೆಗಳಲ್ಲಿ ಅದು ಅಭಿವ್ಯಕ್ತಗೊಂಡಿತು. ಪ್ರತಿಪಕ್ಷಗಳನ್ನು ಬೆದರಿಸಿದ್ದುದರಿಂದ ಕಾಂಗ್ರೆಸ್ ಸುಲಭವಾಗಿ ಅಧಿಕಾರಕ್ಕೆ ಮರಳಬಹುದೆಂದು ಅವರು ತಪ್ಪು ಲೆಕ್ಕಾಚಾರ ಹಾಕಿದರು. ಅದರ ಬದಲು, ಮೊದಲ ಬಾರಿಗೆ ಕಾಂಗ್ರೆಸನ್ನು ಕೇಂದ್ರದಲ್ಲಿ ಅಧಿಕಾರದಿಂದ ಹೊರದಬ್ಬಲಾಯಿತು. ಜನತಾಪಕ್ಷದ ನೇತೃತ್ವದಲ್ಲಿ ಕಾಂಗ್ರೆಸ್ಸೇತರ ಸಮ್ಮಿಶ್ರ ಸರಕಾರ ಬಂತು. ಒಂದರ್ಥದಲ್ಲಿ ಕಾಂಗ್ರೆಸ್ ಜನಗಳಿಗೆ ಪ್ರಿಯವಾಗಿದ್ದ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಧಾಳಿ ಮಾಡುವ ತನ್ನ ದುಸ್ಸಾಹಸದ ನಿರ್ಣಯದ ನಂತರ ಚೇತರಿಸಿಕೊಳ್ಳಲೇ ಇಲ್ಲ.

<u>ಸರ್ವಾಧಿಕಾರತ್ವದ ಅವಕಾಶ ಜೀವಂತ</u>

ಈಗ ಕಾಲು ಶತಮಾನದ ನಂತರವೂ ಪ್ರಜಾಪ್ರಭುತ್ವಕ್ಕೆ ಬೆದರಿಕೆ ಹಾಗೂ ಸರ್ವಾಧಿಕಾರಶಾಹಿಗೆ ಅವಕಾಶ ಕೊನೆಗೊಂಡಿಲ್ಲ ಎಂಬುದನ್ನು ನಂತರ ಬಂದ ಬೂರ್ಜ್ವಾ - ಭೂಮಾಲಿಕ ಸರಕಾರಗಳ ಸ್ವರೂಪವ ತೋರಿಸಿಕೊಟ್ಟಿದೆ. ತುರ್ತುಪರಿಸ್ಥಿತಿಯ ನಂತರ ನಡೆದ ಸಿಪಿಐ(ಎಂ)ನ ಹತ್ತನೇ ಮಹಾಧಿವೇಶನದ ರಾಜಕೀಯ ನಿರ್ಣಯ ತುರ್ತು ಪರಿಸ್ಥಿತಿಯ ಪರಾಮರ್ಶೆ ಮಾಡುತ್ತಾ ಹೀಗೆ ಎಚ್ಚರಿಸಿತ್ತು. ''ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ನೆರವು ಮತ್ತು ವಿಶ್ವ ಬಂಡವಾಳ ಶಾಹಿ ಮಾರುಕಟ್ಟೆಯ ಮೇಲೆ ಆರ್ಥಿಕತೆ ಹೆಚ್ಚೆಚ್ಚು ಅವಲಂಬನೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಆಹ್ವಾನ ಸರ್ವಾಧಿಕಾರದ ಶಕ್ತಿಗಳನ್ನು ಬಲಪಡಿಸುತ್ತದೆ. ಗುತ್ತೇದಾರಿಗಳ, ದೊಡ್ಡ ಬಂಡವಾಳಶಾಹಿಗಳ ಮತ್ತು ಭೂಮಾಲಕರ ಪ್ರಬಲ್ಯ ಭಾರತೀಯ ಆರ್ಥಿಕವನ್ನು ತನ್ನ ಬಿಗಿಮುಷ್ಟಿಯಲ್ಲಿ ಇಟ್ಟುಕೊಂಡಿರುವವರೆಗೆ ತಮ್ಮ ಆಳ್ವಿಕೆಯನ್ನು ಸಮರ್ಥಗೊಳಿಸಲು ಒಂದಿಲ್ಲೊಂದು ಕೂಟ ಒಂದು ಸರ್ವಾಧಿಕಾರವನ್ನು ಹೇರಲು ಪ್ರಯತ್ನಿಸುತ್ತದೆ. ಒಂದು ನಿರ್ದಿಷ್ಟ ಗುಂಪು ಅಥವಾ ಪಕ್ಷ ಪ್ರಜಾಪ್ರಭುತ್ವಕ್ಕೆ ವಿಧೇಯವಾಗಿರುತ್ತದೆ, ಸರ್ವಾಧಿಕಾರವನ್ನು ಪ್ರತಿರೋಧಿಸಲು ಬದ್ಧವಾಗಿರುತ್ತದೆ ಎಂದು ಭಾವಿಸುವುದು ತಪ್ಪಾಗುತ್ತದೆ"



ತುರ್ತುಪರಿಸ್ಥಿತಿ ಬಿಂಬಿಸುವ ಅಬು ಅಬ್ರಹಂರವರ ವ್ಯಂಗ್ಯಚಿತ್ರ

ಈ ನಿರ್ಣಯದಲ್ಲಿ ನೀಡಿರುವ ಎಚ್ಚರಿಕೆ ಈಗಲೂ ಪ್ರಸ್ತುತ. ಎಪ್ಪತ್ತರ ದಶಕದಲ್ಲಿ ತುರ್ತುಪರಿಸ್ಥಿತಿಯ ಆಳ್ವಿಕೆಯ ವಿರುದ್ಧ ಹೋರಾಟ ಮತ್ತು ಅದನ್ನು ತಿರಸ್ಕರಿಸಿದ್ದು ಜನತೆಯ ಪ್ರಜಾಪ್ರಭುತ್ವ ಪ್ರಜ್ಞೆಯನ್ನು ತೋರಿಸಿಕೊಟ್ಟಿದೆ. ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಮತ್ತು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಯಾವುದೇ ಧಾಳಿಯನ್ನು ಜನತೆ ದೃಢವಾಗಿ ವಿರೋಧಿಸುತ್ತಾರೆ ಎಂದು ಆಳುವ ವರ್ಗಗಳಿಗೆ ನೀಡಿದ್ದ ಎಚ್ಚರಿಕೆಯಾಗಿತ್ತದು. ಆದರೆ ಕಳೆದೆರಡು ದಶಕಗಳಲ್ಲಿ ಬೂರ್ಜ್ವಾ-ಭೂಮಾಲಿಕ ಆಳ್ವಿಕೆಯ ಪ್ರಭಾವದಿಂದಾಗಿ ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳು ಕ್ರಮೇಣ ಸವೆಯುತ್ತಿವೆ, ಇದು ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ಬೆಳವಣಿಗೆಗೆ ಫಲವತ್ತಾದ ನೆಲವನ್ನು ಒದಗಿಸಿದೆ.

<u>ಬಿಜೆಪಿಯ ಸರ್ವಾಧಿಕಾರಶಾಹಿ</u>

ತುರ್ತು ಪರಿಸ್ಥಿತಿ ಹೇರಿಕೆಯ ಪ್ರತೀ ವಾರ್ಷಿಕದಂದೂ ಬಿಜೆಪಿ ಆರ್.ಎಸ್.ಎಸ್. ಕೂಟ ತನ್ನ ತುರ್ತುಪರಿಸ್ಥಿತಿ - ವಿರೋಧಿ ಕಾರ್ಯಗಳನ್ನು ಕೊಚ್ಚಿಕೊಳ್ಳುತ್ತದೆ. ಆದರೆ ಇಂದು ಸರ್ವಾಧಿಕಾರಶಾಹಿಯ ಅಪಾಯ ಈ ಮೂಲದಿಂದಲೇ ಬರುತ್ತಿದೆ ಎಂಬ ಸಂಗತಿಯನ್ನು ಮರೆಮಾಚುವಂತಿಲ್ಲ. ಕಳೆದೆರಡು ವರ್ಷಗಳಿಂದ, 1998ರಿಂದ ಬಿಜೆಪಿ ನೇತೃತ್ವದ ಸರಕಾರ ದೇಶವನ್ನಾಳುತ್ತಿದೆ. ಪ್ರಜಾಪ್ರಭುತ್ವ ವಿರೋಧ, ಸರ್ವಾಧಿಕಾರಶಾಹಿತ್ವ ಆರ್.ಎಸ್.ಎಸ್. ನೊಳಗೆ ಅಂತರ್ಗತವಾಗಿದೆ. ಬಿಜೆಪಿ ಇಂತಹ ಆರ್.ಎಸ್.ಎಸ್.ನ ಒಂದು ಸಾಧನವಷ್ಟೆ. ಅದರ ಫ್ಯಾಸಿಸ್ಟ್ ಮಾದರಿಯ ಸಿದ್ಧಾಂತ ಮಿಲಿಟರಿವಾದವನ್ನು ಬಹುಸಂಖ್ಯಾತರು ಬಲಪ್ರಯೋಗದಿಂದ ಆಳ್ವಿಕೆನಡೆಸುವುದನ್ನು ವೈಭವೀಕರಿಸುತ್ತದೆ. ಹಿಂದುತ್ವ ಸಿದ್ಧಾಂತ ಪ್ರಚಾರಕ್ಕೆ ಬಂದದ್ದು ದೇಶ ಉದಾರೀಕರಣದ ಪ್ರಕ್ರಿಯೆಯನ್ನು ಆರಂಭಿಸಿ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಅನುಕೂಲವಾಗುವಂತೆ ತನ್ನ ಆರ್ಥಿಕ ಧೋರಣೆಗಳನ್ನು ಹೊಂದಿಸಲಾರಂಭಿಸಿದಾಗ. ಅಂತರ್ರಾಷ್ಟ್ರೀಯ ಬಂಡವಾಳ ಮತ್ತು ಅದರ ಜತೆಗೂಡಿದ ದೇಶೀ ದೊಡ್ಡ ಬಂಡವಾಳಿಗರು ತಮ್ಮ ಕೆಲಸಗಳಿಗೆ ಸೂಕ್ತವಾದ ವಾತಾವರಣವನ್ನು ನಿರ್ಮಿಸಲು ಪ್ರಜಾಪ್ರಭುತ್ವವನ್ನು ಹೆಚ್ಚೆಚ್ಚು ಸೀಮಿತಗೊಳಿಸಬೇಕು, ಸಂಕುಚಿತಗೊಳಿಸಬೇಕೆಂದು ಆಗ್ರಹವೊಡ್ಡುತ್ತಿದ್ದಾರೆ. ಸರ್ವಾಧಿಕಾರಶಾಹಿತ್ವದ ಸಾಧ್ಯತೆ ಈ ಎರಡು ಮೂಲಗಳಿಂದ ಬರುತ್ತಿದೆ. ಬಹುಸಂಖ್ಯಾತ ಕೋಮುವಾದ ಮತ್ತು ಉದಾರೀಕರಣ ಧಾಳಿ.

<u>ಪ್ರಜಾಪ್ರಭುತ್ವ ಬುಡಮೇಲು ಯತ್ನ</u>



ಬಿಜೆಪಿ ಕಳೆದ ಐದು ವರ್ಷಗಳಿಂದ ಒಂದು ಸಮ್ಮಿಶ್ರ ಸರಕಾರಕ್ಕ ನೇತೃತ್ವ ನೀಡುತ್ತಿದೆ. ತಾನಾಗಿಯೇ ಸಂಸತ್ತಿನಲ್ಲಿ ಒಂದು ಬಹುಮತ ಪಡೆಯಲು ಅದು ಅಸಮರ್ಥವಾಗಿದೆ. ಈ ನ್ಯೂನ್ಯತೆಯಿದ್ದಾಗ್ಯೂ ಅದು ಆರ್.ಎಸ್.ಎಸ್.ನ ದೀರ್ಘಾವಧಿ ಅಜೆಂಡಾವನ್ನು ಮುಂದೊತ್ತಲು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ. ಹಾಗೆ ಮಾಡುವಾಗ ಅದು ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲೂ ಹಿಂಜರಿಯುವುದಿಲ್ಲ, ತನ್ನ ಅಧಿಕಾರವನ್ನು ಪ್ರಜಾಪ್ರಭುತ್ವ ವಿರೋಧಿ ರೀತಿಯಲ್ಲಿ ಕ್ರೋಢೀಕರಿಸಲು ಸಂವಿಧಾನದ ಅಂಶಗಳನ್ನು ಬಳಸಲೂ ಹಿಂಜರಿಯುವುದಿಲ್ಲ. ರಾಜ್ಯಗಳಲ್ಲಿ ತನ್ನ ರಾಜಕೀಯ ವಿರೋಧಿಗಳ

ಕ್ರೂರ ಕಾಯ್ದೆಗಳು

ತುರ್ತುಪರಿಸ್ಥಿತಿಯ ಕಾಲದಲ್ಲಿ ಮೀಸಾ (MISA) ದಡಿ ಬಂಧನ ಸರ್ವಸಾಮಾನ್ಯವಾಗಿತ್ತು. ಮೀಸಾವನ್ನು, ನಂತರ ಟಾಡಾ (TADA)ವನ್ನು ವಿರೋಧಿಸಿ ಬಿಜೆಪಿ ಆಳರಸರು ಇಂದು ಅದಕ್ಕಿಂತಲೂ ಹೆಚ್ಚು ದಮನಕಾರಿ, ಕರಾಳ ಶಾಸನ ಪೋಟಾ (POTA) ರೂಪಿಸಿದ್ದಾರೆ. ಇದನ್ನು ಪಾಸು ಮಾಡಿಕೊಳ್ಳಲು ಕಳೆದ ವರ್ಷ ವಾಜಪೇಯಿ ಸರಕಾರ ಸಂಸತ್ತಿನ ಜಂಟಿ ಅಧಿವೇಶನ ಕರೆಯುವ ಮಟ್ಟಕ್ಕೂ ಹೋಯಿತು. ಈಗ ಅದನ್ನು ಅಧಿಕಾರದಲ್ಲಿರುವವರು ಇಷ್ಟಪಡದ ಜನಗಳನ್ನು ಜೈಲಿಗೆ ಹಾಕಲು ಬಳಸಲಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಮಾಯಾವತಿಯಾಗಲೀ ಅಥವಾ ತಮಿಳುನಾಡಿನಲ್ಲಿ ಜಯಲಲಿತಾ ಆಗಲಿ ಪೋಟಾವನ್ನು ರಾಜಕೀಯ ವಿರೋಧಿಗಳ ವಿರುದ್ಧ ಬಳಸುತ್ತಿದ್ದಾರೆ. ಬಿಜೆಪಿಗಂತೂ ಪೋಟಾ ಅಲ್ಪಸಂಖ್ಯಾತರ ವಿರುದ್ಧ ಒಂದು ಗಟ್ಟಿ ಅಸ್ತ್ರ. ಇದನ್ನು ಹೇಗೆ ವ್ಯಾಪಕವಾಗಿ ಬಳಸಲಾಯಿತು ಎಂಬುದಕ್ಕೆ ಗುಜರಾತ್ ಸಾಕ್ಷಿ.

<u>ಮಾಧ್ಯಮಗಳಲ್ಲಿಯೂ..</u>

ಬಿಜೆಪಿ ಆಳ್ವಿಕೆಯಡಿ ಸರ್ವಾಧಿಕಾರಶಾಹಿಯ ಲಕ್ಷಣಗಳು ಎಲ್ಲಾ ವಲಯಗಳನ್ನು ಹೊಕ್ಕಿದೆ. ಮಾಧ್ಯಮಗಳ ಮೇಲೆ ಹೆಚ್ಚೆಚ್ಚು ದುಷ್ಟ ಧಾಳಿಗಳು ನಡೆಯುತ್ತಿವೆ. ತೆಹಲ್ಕಾ ಡಾಟ್ ಕಾಮ್ ಆರಂಭಿಸಿದವರನ್ನು ಮತ್ತು ಪತ್ರಕರ್ತರಿಗೆ ಕಿರುಕುಳ ಕೊಟ್ಟು ಅದನ್ನು ಮುಚ್ಚಿಸಲಾಗಿದೆ. ವಿವಿಧ ರಾಜ್ಯ ಸರ್ಕಾರಗಳಿಂದ ಪತ್ರಕರ್ತರು, ಪತ್ರಿಕೆಗಳ ಮೇಲೆ ಹಲವಾರು ಧಾಳಿಗಳು ನಡೆದಿವೆ.

<u>ದುಡಿವವರ್ಗದ ಹಕ್ಕು ದಮನ</u>

ವಿವಿಧ ಸರ್ವಾಧಿಕಾರಶಾಹಿ ಕ್ರಮಗಳನ್ನು, ಪ್ರಯತ್ನವನ್ನು ಬಿಜೆಪಿ ಆಳ್ವಿಕೆ ಮಾಡುತ್ತಿದೆ. ಇವೆಲ್ಲದರ ಒಟ್ಟು ಫಲಿತಾಂಶವೆಂದರೆ ದುಡಿಯುವ ಜನಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಗಂಭೀರವಾಗಿ ಮೊಟಕುಮಾಡುವುದು. ಕಾರ್ಮಿಕರ ಸಂಘಟನಾ ಹಕ್ಕುಗಳನ್ನು ಸೀಮಿತಗೊಳಿಸುವ ಕಾನೂನು ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗುತ್ತಿದೆ. ಈ ನಡುವೆ ವಿಶೇಷ ಆರ್ಥಿಕ ವಲಯಗಳಲ್ಲಿ ವಿದೇಶಿ ಬಂಡವಾಳವನ್ನು ಹೆಚ್ಚಿಸಲು ಕಾರ್ಮಿಕ ಸಂಘಟನಾ ಹಕ್ಕುಗಳನ್ನು ನಿಷೇಧಿಸಲಾಗಿದೆ. ಪ್ರತಿಭಟನೆಯ, ಸಂಘಟನೆಯ ಹಕ್ಕುಗಳನ್ನು ಸೀಮಿತಗೊಳಿಸಲು ಪೊಲೀಸರ ಮಧ್ಯಪ್ರವೇಶವೂ ಹೆಚ್ಚುತ್ತಿದೆ. ಹಲವು ಸಾರ್ವಜನಿಕ ಸ್ಥಳಗಳಲ್ಲಿ ಸಭೆಗಳು, ಮತಪ್ರದರ್ಶನಗಳ ಮೇಲೆ ನಿಷೇಧಾಜ್ಞೆಗಳು ಖಾಯಂ ಸ್ವರೂಪ ಪಡೆಯುತ್ತಿವೆ.


<u>ನ್ಯಾಯಾಂಗದ ತೀರ್ಪುಗಳಲ್ಲಿ</u>

ಉದಾರೀಕರಣದ ವಾತಾವರಣ ಸರಕಾರದ ಎಲ್ಲಾ ಸಂಸ್ಥೆಗಳನ್ನು ವ್ಯಾಪಿಸಿವೆ. ನ್ಯಾಯಾಂಗವೂ ಇದಕ್ಕೆ ಅಪವಾದವಲ್ಲ. ಇತ್ತೀಚಿನ ವರ್ಷಗಳಲ್ಲಿ ಉನ್ನತ ನ್ಯಾಯಾಂಗ ಬಂದ್‌ಗಳನ್ನು ಹರತಾಳಗಳನ್ನು ನಿಷೇಧಿಸಿದೆ. ಕೆಲವು ತೀರ್ಪುಗಳು ಮತಪ್ರದರ್ಶನ ನಡೆಸುವ ಸಮಯದ ಮೇಲೆ ಮಿತಿಹಾಕಿವೆ. ಒಟ್ಟು ಸೇರಿ ಅಧಿಕಾರಿಗಳಿಗೆ ತಮ್ಮ ಬೇಡಿಕೆಗಳನ್ನು ಸಲ್ಲಿಸುವ ಪ್ರಾಥಮಿಕ ಪ್ರಜಾಪ್ರಭುತ್ವ ಹಕ್ಕನ್ನೂ ವಿಪರೀತವಾಗಿ ಮೊಟಕು ಮಾಡಲಾಗುತ್ತಿದೆ. ಕೇರಳ ಹೈಕೋರ್ಟ್ ಇತ್ತೀಚಿನ ಒಂದು ಆರೋಪದಲ್ಲಿ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿ ಸಂಘಟನೆಗಳಿಂದ ರಾಜಕೀಯ ಚಟುವಟಿಕೆಗಳನ್ನು ನಡೆಸುವುದನ್ನು ನಿಷೇಧಿಸಲು ಶಿಕ್ಷಣ ಸಂಸ್ಥೆಗಳ ಆಡಳಿತಗಳಿಗೆ ಅಧಿಕಾರ ನೀಡಿದೆ.

ಕ ಛಾಯೆಗಳು

ದ್ಧ ಸಂವಿಧಾನದ 356ನೇ ಕಲಮನ್ನು ಬಳಸಲು ಕ್ಕಾಗಲಿಲ್ಲ. ಆ ದಿಕ್ಕಿನಲ್ಲಿ ಪ್ರಯತ್ನ ಡಲಿಲ್ಲವೆಂದಲ್ಲ, ಆದರೆ ಅದನ್ನು ಊರ್ಜಿತಗೊಳಿಸಲು ರಾಜ್ಯ ಸಭೆಯಲ್ಲಿ ಬಹುಮತಪಡೆಯಲು ಅದಕ್ಕೆ ಸಾಧ್ಯವಿಲ್ಲದ್ದರಿಂದ ಹಾಗೆ ಮಾಡಲಿಲ್ಲ. ಮೇಲ್ಮನೆಯಲ್ಲಿ ಬಿಜೆಪಿಗೆ ಬಹುಮತವಿದ್ದಿದ್ದರೆ ಬಿಜೆಪಿಯೇತರ ರಾಜ್ಯ ಸರ್ಕಾರಗಳಿಗೆ ಅಪಾಯ ತಟ್ಟುತ್ತಿತ್ತು. ಅಲ್ಲದೆ ಸಂವಿಧಾನವನ್ನು ಮತ್ತೆ ಬರೆಯುವ ಅದರ ಪ್ರಿಯ ಗುರಿಯನ್ನು ಮುಂದೊತ್ತಲಾಗಲಿಲ್ಲ. ಏಕೆಂದರೆ ಅದು ಮೂರನೇ ಎರಡು ಬಹುಮತ ಪಡೆಯುವ ಸಾಧ್ಯತೆಯಿಲ್ಲ. ಹಾಗೆ ಮಾಡಲು ಸಾಧ್ಯವಿದ್ದಿದ್ದರೆ ಬಿಜೆಪಿ ಸಂಸದೀಯ ವ್ಯವಸ್ಥೆಯನ್ನು ಬದಲಿಸಿ ಕ್ಷೀಯ ವ್ಯವಸ್ಥೆಯನ್ನು ತ್ತಿತ್ತು. ಅಗತ್ಯ ಬಲವಿದ್ದಿದ್ದರೆ ಸಂವಿಧಾನದ ಕೆಲಸವನ್ನು ಮರ್ಶಿಸಿದ ಆಯೋಗದ ರಸುಗಳಲ್ಲಿ ತನಗೆ ಕಾದವುಗಳನ್ನಷ್ಟೇ ಸಿಕೊಂಡು ಜ್ಯಾರಿಗೂ ತ್ತಿತ್ತು. ಈಗಾಗಲೇ ರಾಜ್ಯ ನಮಂಡಲಗಳಲ್ಲಿ ಸಭಾ ಸದಸ್ಯರಿಗೆ ಾವಣೆಗೆ ಬಹಿರಂಗ ದಾನಕ್ಕೆ ಅವಕಾಶ ನೀಡುವ ಶಾಸನ ತಂದು ತ್ರ ಮತದಾನದ ನೀತಿಯನ್ನು ಗೊಳಿಸಲಾಗಿದೆ.

ಒಂದು ಕೋಮುವಾದೀ ಗುರಿಯಿರುವ ಿತ ಅಧಿಕಾರ ಚಲಾಯಿಸುವುದು ಹೆಚ್ಚು ಯಕಾರಿ. ಸರಕಾರವೇ ಅಲ್ಪಸಂಖ್ಯಾತರ ದ್ಧ ಮಾರಣಹೋಮ ಪ್ರಯೋಜಿಸಿ ಎಂತಹ ಹುತ ಉಂಟುಮಾಡಬಹುದು ಎಂಬುದನ್ನು ರಾತ್ ತೋರಿಸಿಕೊಟ್ಟಿದೆ. ಉಳಿದ ರಿಕರಂತೆ ಪ್ರಜಾಪ್ರಭುತ್ವ ಹಕ್ಕುಗಳ ದೊಂದಿಗೆ ಅಲ್ಪಸಂಖ್ಯಾತರಿಗೆ ಬದುಕಿನ ಹಕ್ಕು



ಂತೆ ಮಾಡಲಾಗುತ್ತಿದೆ, ಅವರು ಎರಡನೇ ಯ ನಾಗರಿಕರಾಗಲು ಸಿದ್ಧವಿದ್ದರೆ ಮಾತ್ರ ಬಹುದು ಎಂಬ ಪರಿಸ್ಥಿತಿ ತರಲಾಗುತ್ತಿದೆ.

ಯ ಸಂಕುಚಿತವಾದ

ಜೆಪಿ ಪ್ರಜ್ಞಾಪೂರ್ವಕವಾಗಿಯೇ ದೇಶದಲ್ಲಿ ಯ ಸಂಕುಚಿತವಾದ ಮತ್ತು ಅಂಧ ಭಕ್ತಿಯ ವಾತಾವರಣವನ್ನು ಪೋಷಿಸುತ್ತಿದೆ. ಬಿಜೆಪಿ ಆರ್.ಎಸ್.ಎಸ್. ಭಯೋತ್ಪಾದನೆಯ ವಿರುದ್ಧ ಾಟವನ್ನು ವಿಶೇಷವಾಗಿ ಅಮೆರಿಕಾ ಕಸಂಸ್ಥಾನ "ಭಯೋತ್ಪಾದನೆಯ ವಿರುದ್ಧ ವನ್ನು ಸಾರಿದ ನಂತರ ಸರಕಾರದ ಯಂತ್ರವನ್ನು ಬಲಪಡಿಸಲು, ತನ್ನ ದ್ಧವಾಗುವ ಎಲ್ಲರ ವಿರುದ್ಧವೂ ಬಳಸಲು ಪ್ರಯತ್ನಿಸುತ್ತಿದೆ.

ಸರ್ವಾಧಿಕಾರಶಾಹಿಯ ಅಪಾಯ ಪ್ರಜಾಪ್ರಭುತ್ವದ ಮೇಲೆ ನೇರ ಧಾಳಿಯ ರೂಪದಲ್ಲಿ ಮಾತ್ರವೇ ಕಾಣುತ್ತಿರುವುದಲ್ಲ, ಸೈದ್ಧಾಂತಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲೂ ಅಗೋಚರವಾಗಿ ನಡೆಯುತ್ತಿದೆ. ಹಿಂದುತ್ವದ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಶಿಕ್ಷಣ ಸಂಸ್ಥೆಗಳನ್ನು, ಸಂಸ್ಕೃತಿಯನ್ನು ವಿಕೃತಗೊಳಿಸಲು ಮುರಳಿ ಮನೋಹರ ಜೋಷಿ ಮತ್ತು ಅವರ ಬಂಟರು ನಡೆಸುತ್ತಿರುವ ಪ್ರಯತ್ನಗಳು ಬೌದ್ಧಿಕ ಸ್ವಾತಂತ್ರ್ಯಕ್ಕೆ ಮತ್ತು ಪ್ರಜಾಸತ್ತಾತ್ಮಕ ಸಾಂಸ್ಕೃತಿಕ ಮೌಲ್ಯಗಳಿಗೆ ಒಂದು ಗಂಭೀರ ಬೆದರಿಕೆ.. ಈ ಸರ್ವಾಧಿಕಾರಶಾಹಿಯ ಪ್ರಯತ್ನದ ಒಂದು ಪರಿಣಾಮವೆಂದರೆ ಹಿಂದುತ್ವ ಶಕ್ತಿಗಳ ಕಣ್ಣೋಟವನ್ನು ಒಪ್ಪದ ಬುದ್ಧಿ ಜೀವಿಗಳು, ಕಲಾವಿದರು ಮತ್ತು ಸಂಸ್ಥೆಗಳ ಬೇಟೆ.

> ದೊಡ್ಡ ಬಂಡವಾಳಶಾಹಿಗಳ ಮತ್ತು ಭೂಮಾಲಕರ ಪ್ರಬಲ್ಯ ಭಾರತೀಯ ಆರ್ಥಿಕವನ್ನು ತನ್ನ ಬಿಗಿಮುಷ್ಟಿಯಲ್ಲಿ ಇಟ್ಟುಕೊಂಡಿರುವವರೆಗೆ ತಮ್ಮ ಆಳ್ವಿಕೆಯನ್ನು ಸಮರ್ಥಗೊಳಿಸಲು ಒಂದಿಲ್ಲೊಂದು ಕೂಟ ಒಂದು ಸರ್ವಾಧಿಕಾರವನ್ನು ಹೇರಲು ಪ್ರಯತ್ನಿಸುತ್ತದೆ.

ವ್ಯವಸ್ಥೆಯ ಪಾತ್ರ

ಈ ವ್ಯಾಪಕ ಸರ್ವಾಧಿಕಾರಶಾಹಿ ಅಪಾಯದ ಮೂಲ ಬೂರ್ಜ್ವಾ - ಭೂಮಾಲಿಕ ವ್ಯವಸ್ಥೆಯ ಪ್ರಕ್ರಿಯೆಗಳಲ್ಲೇ ಅಡಕವಾಗಿದೆ. ತಮ್ಮ ಅಧಿಪತ್ಯವನ್ನು ಕ್ರೋಢೀಕರಿಸುವ ಧೋರಣೆಗಳನ್ನು ಜ್ಯಾರಿಗೆ ತರಲು ಆಳುವ ವರ್ಗಗಳು ಪ್ರಜಾಪ್ರಭುತ್ವ-ವಿರೋಧಿ, ಜನವಿರೋಧಿ ಕ್ರಮಗಳನ್ನು ಹೆಚ್ಚೆಚ್ಚಾಗಿ ಅನುಸರಿಸುತ್ತಾರೆ. ಆದ್ದರಿಂದಲೇ ಹಿಂದುತ್ವ ಯೋಜನೆಯ ಸರ್ವಾಧಿಕಾರಶಾಹಿತ್ವಕ್ಕೆ ಪೂರಕವಾಗಿ ಆ ಕಣ್ಣೋಟವನ್ನು ಒಪ್ಪಿದ ಆಳುವ ವರ್ಗಗಳ ವಿವಿಧ ಬಣಗಳು ತಮ್ಮ ಅಗತ್ಯಗಳಿಗಾಗಿ ಬಲಗೊಳಿಸುತ್ತದೆ. ಪ್ರಜಾಸತ್ತಾತ್ಮಕ ಸಾಮೂಹಿಕ ರಾಜಕೀಯ ಚಟುವಟಿಕೆಗಳನ್ನು ಕುರಿತಂತೆ ಮಧ್ಯಮ ವರ್ಗಗಳ ವಿಭಾಗಗಳಲ್ಲಿ ವೈಫಲ್ಯ ಹೆಚ್ಚುತ್ತಾ ಹೋಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಜೀವನ, ಪ್ರಜಾಪ್ರಭುತ್ವ ಸಂಸ್ಥೆಗಳು ವಿಘಟನೆಗೊಳ್ಳುತ್ತಿವೆ. ಅಸಮಾನತೆಗಳಲ್ಲಿ ತೀವ್ರ ಹೆಚ್ಚಳದಿಂದಾಗಿ ಉದಾರೀಕರಣ ಪ್ರಕ್ರಿಯೆ ಹುಟ್ಟುಹಾಕಿದ ಅತ್ಯಂತ ಅಸಮಾನ ವ್ಯವಸ್ಥೆಯನ್ನು ಮುಂದುವರೆಸಲು ಉಳ್ಳವರು ಹೆಚ್ಚು ಪ್ರಯತ್ನ ನಡೆಸುತ್ತಾರೆ.

ನಗರ ಮತ್ತು ಗ್ರಾಮೀಣ ದುಡಿಯುವ ಜನವಿಭಾಗಗಳು ವಿಶೇಷವಾಗಿ ಗ್ರಾಮೀಣ ಬಡವರು ಆಳವಾದ ಸಂಕಟಗಳನ್ನು ಅನುಭವಿಸುತ್ತಿರುವಾಗ ಅವರನ್ನು ಅವರ ಹಕ್ಕುಗಳಿಗಾಗಿ ಅಣಿನೆರೆಸುವ, ಸಂಘಟಿಸುವ ಪ್ರತಿಯೊಂದು ಪ್ರಯತ್ನವನ್ನು ವಿರೋಧಿಸಲು, ದಮನಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಬಿಜೆಪಿ ತನ್ನ ಈ ಮಹಾ ಸರ್ವಾಧಿಕಾರಶಾಹಿ ಯೋಜನೆಯನ್ನು ಅನುಸರಿಸುತ್ತಿರುವಾಗಲೇ ಹಲವು ಬೂರ್ಜ್ವಾ ಭೂಮಾಲಿಕ ಪಕ್ಷಗಳು ತಮ್ಮದೇ ಸಣ್ಣ ಸ್ವರೂಪದ ಸರ್ವಾಧಿಕಾರಶಾಹಿ ಆಚರಣೆಗಳ ಮೂಲಕ ಅವರೊಡನೆ ಕೈಜೋಡಿಸುತ್ತದೆ.

ಇತ್ತೀಚಿನ ಬೆಳವಣಿಗೆಗಳು ಪ್ರಜಾಪ್ರಭುತ್ವಕ್ಕೆ ಹೆಚ್ಚೆಚ್ಚು ಅಪಾಯ ಒಡ್ಡುತ್ತಿವೆ ಎಂಬ ಪ್ರಜ್ಞೆ ಭಾರತದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿದ್ದರೂ, ಅಖಿಲ ಭಾರತ ಮಟ್ಟದಲ್ಲಿ ಎಡಶಕ್ತಿಗಳ ದೌರ್ಬಲ್ಯವನ್ನು ಬಳಸಿಕೊಂಡು ಬಿಜೆಪಿ ನೇತೃತ್ವದ ಸರಕಾರ ಮತ್ತಿತರ ಬಲಪಂಥೀಯ ಶಕ್ತಿಗಳು ಪ್ರಜಾಪ್ರಭುತ್ವಕ್ಕೆ ಇನ್ನಷ್ಟು ಬೆದರಿಕೆ ತರುವ ಕ್ರಮಗಳನ್ನು ಮುಂದೊತ್ತುತ್ತಿಧೆ.

ಸ್ವತಃ ಪ್ರಜಾಪ್ರಭುತ್ವ ವಿರೋಧಿ ಧೋರಣೆಗಳ ದಾಖಲೆ ಹೊಂದಿರುವ ಕಾಂಗ್ರೆಸ್ ಈ ನಿಟ್ಟಿನಲ್ಲಿ ಬಿಜೆಪಿಯನ್ನು ಪರಿಣಾಮಕಾರಿಯಾಗಿ ಎದುರಿಸುವ ಸ್ಥಿತಿಯಲಿಲ್ಲ. ಆದ್ದರಿಂದ ತಕ್ಷಣವೇ ಪ್ರಜಾಪ್ರಭುತ್ವದ ಮೇಲೆ ವಿವಿಧ ಸ್ವರೂಪಗಳಲ್ಲಿ ಧಾಳಿಗಳ ವಿರುದ್ಧ ಮತ್ತು ಹಿಂದುತ್ವ - ಆಧಾರಿತ ಸರ್ವಾಧಿಕಾರಶಾಹಿ ಆಳ್ವಿಕೆಯನ್ನು ಹೇರುವ ದೀರ್ಘಾವದಿ ಯೋಜನೆಯ ವಿರುದ್ಧ ಇರುವ ಎಲ್ಲಾ ಶಕ್ತಿ, ಸಂಪನ್ಮೂಲಗಳನ್ನು ಬಳಸಿ ಹೋರಾಟ ನಡೆಸುವುದು ಅತ್ಯಗತ್ಯ. ಇದರಲ್ಲಿ ಸಿಪಿಐ(ಎಂ) ಮತ್ತು ಎಡಶಕ್ತಿಗಳಿಗೆ ಪ್ರಮುಖ ಪಾತ್ರವಿದೆ. ಇದರ ಯಶಸ್ಸಿನಲ್ಲಿ ಎಡಶಕ್ತಿಗಳು ಎಷ್ಟರಮಟ್ಟಿಗೆ ಈ ಹೋರಾಟದಲ್ಲಿ ವ್ಯಾಪಕ ಪ್ರಮಾಣದಲ್ಲಿ ವಿವಿಧ ಶಕ್ತಿಗಳನ್ನು ಅಣಿನೆರೆಸುತ್ತದೆ ಎಂಬುದನ್ನು ಅವಲಂಬಿಸಿದೆ.

ಏಶಿಯಾದ ಎರಡು ಮಹಾನ್ ರಾಷ್ಟ್ರಗಳೂ ನೆರೆಹೊರೆಯವರೂ ಆಗಿರುವ ಭಾರತ ಮತ್ತು ಚೀನಾದ ನಡುವಿನ ಸಂಬಂಧಗಳನ್ನು ಗಟ್ಟಿಗೊಳಿಸುವ ದಿಕ್ಕಿನಲ್ಲಿದೆ ಪ್ರಧಾನಿ ವಾಜಪೇಯಿಯವರ ಚೀನಾ ಭೇಟಿ. ಏಕಧೃವೀ ವ್ಯವಸ್ಥೆಯನ್ನು ಹೇರಬಯಸುವ ಅಮೆರಿಕಾದ ಹವಣಿಕೆಗಳ ಎದುರಿನಲ್ಲಿಯೂ ಎರಡೂ ದೇಶಗಳ ಅಭಿವೃದ್ಧಿಗಾಗಿ ಈ ಸೌಹಾರ್ದ ಸಂಬಂಧ ಮಹತ್ವದ್ದಾಗಿದೆ

ಚೀನಾಕ್ಕೆ ಪ್ರಧಾನಿ ಭೇಟಿ ಸಂಬಂಧಗಳಲ್ಲಿ ಪ್ರಗತಿ

ಭಾರತದ ಪ್ರಧಾನಮಂತ್ರಿಗಳ ಚೀನಾ ಬೇಟಿಯು ಏಷ್ಯಾದ ಎರಡು ಮಹಾನ್ ಮತ್ತು ನೆರೆಯ ದೇಶಗಳ ನಡುವಿನ ಸಂಬಂಧಗಳನ್ನು ಗಟ್ಟಿಗೊಳಿಸುವ ಗಮನಾರ್ಹ ಅಂಶಗಳನ್ನು ಕಂಡಿದೆ. ಪ್ರಥಮ ಬಾರಿಗೆ ಎರಡೂ ದೇಶಗಳು ಜಂಟಿ ಘೋಷಣೆಗೆ ಸಹಿ ಮಾಡಿವೆ. ವ್ಯಾಪಾರ, ವೀಸಾ ನಿರ್ಬಂಧಗಳನ್ನು ಸಡಿಲಗೊಳಿಸುವುದು, ನ್ಯಾಯಾಂಗ ಸಹಕಾರ, ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆಯಂತ ಒಂಬತ್ತು ಒಪ್ಪಂದಗಳಿಗೆ ಸಹಿಮಾಡಲಾಗಿದೆ. ಸಂಬಂಧಗಳ ನೀತಿಗಳು ಮತ್ತು ಸಮಗ್ರ ಸಹಕಾರದ ಮೇಲೆ ಜಂಟಿ ಘೋಷಣೆಯ ಎರಡೂ ದೇಶಗಳ ನಡುವಿನ ಸಂಬಂಧದ ಪ್ರಮುಖ ಹಂತವನ್ನು ತೋರಿಸುತ್ತದೆ.



ಎರಡು ದೇಶಗಳ ಸಮಾಜಿಕ ಆರ್ಥಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವ ಗೆಳೆತನ ಮತ್ತು ಸಹಕಾರ, ಪ್ರದೇಶಿಕವಾಗಿ ಮತ್ತು ಜಾಗತಿಕವಾಗಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳುವುದು ಅಂತರಾಷ್ಟ್ರೀಯ ಮಟ್ಟದಲ್ಲಿ ಬಹುದ್ರುವೀಯತೆಯನ್ನು ಬಲಪಡಿಸುವುದು ಮತ್ತು ಜಾಗತೀಕರಣ ಗುಣಾತ್ಮಕ ಅಂಶಗಳನ್ನು ವೃದ್ಧಿಸುವುದು ಜಂಟಿ ಘೋಷಣೆಯಲ್ಲಿ ಘೋಷಿಸಲಾಗಿದೆ. ಪಂಚಶೀಲ ತತ್ವದ ಆಧಾರದಲ್ಲಿ ಸಹಕಾರ ಮತ್ತು ಎರಡೂ ದೇಶಗಳ ಸಾಮಾನ್ಯ ಹಿತಾಸಕ್ತಿಗಳು ಬಿನ್ನಾಭಿಪ್ರಾಯಗಳಿಗಿಂತ ಮುಖ್ಯವಾಗಬೇಕೆಂದು ಘೋಷಣೆಯಲ್ಲಿ ಹೇಳಲಾಗಿದೆ. "ಎರಡೂ ದೇಶಗಳು ಪರಸ್ಪರ ಅಪಾಯಕಾರಿ" ಎಂಬ ವಾಕ್ಯವು ಚೀನಾವು ಭಾರತದ ರಕ್ಷಣೆಗೆ ಅಪಾಯಕಾರಿ ಎಂಬ ಮಾತನ್ನು ನಿರ್ಮೂಲನಗೊಳಿಸಲು ಸಹಾಯ ಮಾಡಿದೆ. ಗಡಿ ಬಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಲು ಮಾತುಕತೆ ನಡೆಸಲು ಸಮಿತಿಯೊಂದನ್ನು ರಚಿಸಲಾಗಿದ್ದು ಪ್ರಧಾನಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಬ್ರಿಜೇಶ್ ಮಿಶ್ರ ಮತ್ತು ಚೀನಾದ ವಿದೇಶಾಂಗ ವ್ಯವಹಾರಗಳ ಉಪಸಚಿವ ಡೈಬಿಂಗೋರವರನ್ನು ನೇಮಿಸಲಾಗಿದೆ.

ಎರಡು ದೇಶಗಳ ಮುಖಂಡತ್ವದ ನಡುವಿನ ಮಾತುಕತೆಗಳು ಎರಡೂ ದೇಶಗಳ ನಡುವೆ ಸಹಕಾರ ಮತ್ತು ಸಂಬಂಧಗಳನ್ನು ಗಟ್ಟಿಗೊಳಿಸುವ ಬದ್ಧತೆಯನ್ನು ತೋರಿಸಿವೆ. ಸಿಕ್ಕಮ್‌ನ ನಾಥುಲಾ ಸಿಂದಿಯ ಮೂಲಕ ಗಡಿ ವ್ಯಾಪಾರಗಳನ್ನು ಮಾಡಲು ಆಗಿರುವ ಒಪ್ಪಂದವು ಅಂತಹದರಲ್ಲಿ ಒಂದು. ಟಿಬೆಟ್ ಚೀನೀ ಜನತಾ ಗಣತಂತ್ರದ ಭಾಗ ಎಂದು ಭಾರತ ಹೇಳುತ್ತಾ ಬಂದಿರುವಾಗಲೇ ಭಾರತದಲ್ಲಿ ಟಿಬೇಟಿಯನ್ನರು ಚೀನಾ ವಿರೋಧಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಲು ಭಾರತ ಅವಕಾಶ ನೀಡದು ಎಂಬ ಹೇಳಿಕೆಯು ಈ ವಿಚಾರದಲ್ಲಿದ್ದ ತಪ್ಪು ಗ್ರಹಿಕೆಯನ್ನು ಸ್ಪಷ್ಟಪಡಿಸಿಕೊಳ್ಳಲು ಸಹಾಯಮಾಡುತ್ತವೆ.

ಈ ಬೇಟಿಯ ಗಮನಾರ್ಹ ಅಂಶವೆಂದರೆ ಆರ್ಥಿಕ ಸಹಕಾರವನ್ನು ವೃದ್ಧಿಗೊಳಿಸುವ ದೃಷ್ಟಿಯನ್ನು ಸರಳಗೊಳಿಸುವುದು. ಕಳೆದ ವರ್ಷ ಭಾರತ ಮತ್ತು ಚೀನಾ ನಡುವಿನ ವ್ಯಾಪಾರ 5 ಬಿಲಿಯನ್ ಡಾಲರ್‌ಗಳಿದ್ದುದು ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಶೇ 70 ರಷ್ಟು ವೃದ್ಧಿಯಾಗಿದೆ. ಈ ವಿಚಾರದಲ್ಲಿಯೂ ವಾಜಪೇಯಿ ಭೇಟಿ ಮಹತ್ವದ್ದಾಗಿದೆ. ಇಡೀ ಜಗತ್ತಿನ ಮೇಲೆ ತನ್ನ ಯಜಮಾನಿಕೆಯನ್ನು ಹೇರಲು ಮತ್ತು ಏಕದ್ರುವ ಜಗತ್ತನ್ನು ಸೃಷ್ಟಿಸಲು ಅಮೇರಿಕಾ ಪ್ರಯತ್ನಿಸುತ್ತಿರುವ ಈ ಸಂದರ್ಭದಲ್ಲಿ ಭಾರತ ಮತ್ತು ಚೀನಾದ ನಡುವೆ ಸಂಬಂಧಗಳನ್ನು ಗಟ್ಟಿಗೊಳಿಸುತ್ತಿರುವುದು ಅತ್ಯಂತ ಮುಖ್ಯವಾಗಿದೆ. ವಾಜಪೇಯಿಯವರ ಬೇಟಿಯಿಂದ ಭಾರತದ ಹಿತಾಸಕ್ತಿಗೆ ಲಾಭವಾಗಲಿದೆ. ಇದಕ್ಕಾಗಿ ಬಿ.ಜೆ.ಪಿ. ನೇತೃತ್ವದ ಸರ್ಕಾರ ಅಮೇರಿಕನ್ ವಿಶ್ವದೃಷ್ಟಿಯಿಂದ ತಾನು ದೂರವಾಗಬೇಕು. ಭಾರತದ ಹಿತಾಸಕ್ತಿ ಅಡಗಿರುವುದು ಒಂದು ಬಹುದೃವೀಯ ಜಗತ್ತಿನಲ್ಲಿ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಕೊಲೆಗಾರರ ರಕ್ಷಣೆಗೆ ಬಿಜೆಪಿ ಶಾಸಕ – ಸಿಡಿದೆದ್ದ ಜನ

12 ರ ಪ್ರಾಯದ ಹೆಣ್ಣು ಮಗುವಿನ ಕೊಲೆಯಾದಾಗ, ಕೊಲೆಗಾರರ ರಕ್ಷಣೆಗೆ ನಿಂತರು ಸೋಮವಾರಪೇಟೆಯ ಬಿಜೆಪಿ ಶಾಸಕರು. ಸತ್ಯ ಹೊರಬರಲೇಬೇಕೆಂದು ಜನ ಬೀದಿಗಿಳಿದಾಗ ಗೂಂಡಾಗಿರಿ ಹರಿಯಬಿಟ್ಟರು. 'ತತ್ವನಿಷ್ಟ ಪಕ್ಷವೆಂದು ಡಂಗುರ ಹೊಡೆವ ಬಿಜೆಪಿಯ ನಿಜ ಬಣ್ಣ ಬಯಲಾದಾಗ ಘಟನೆ ವರದಿಯಿಲ್ಲಿದೆ...

ಸತ್ಯ

ಕೊರಮ ಜಾತಿಗೆ ಸೇರಿದ ಕೂಲಿಕಾರ್ಮಿಕ ತಿಮ್ಮಯ್ಯ. ಎಂಬವರ ಮಗಳು 12 ರ ಪ್ರಾಯದ ಮಂಜುಳಾ ಸೋಮವಾರಪೇಟೆ ಮಹದೇಶ್ವರ ಬ್ಲಾಕಿನ ಭವ್ಯ ಬಂಗಲೆಯ ಮಾಲೀಕರಾದ ಇಂದಿರಾ ರೈಯವರ ಮನೆಯಲ್ಲಿ ಬಾಲ ಕಾರ್ಮಿಕಳಾಗಿ ಜೀತದಾಳಾಗಿದ್ದು ಮೇ 12 ರಂದು ಅವರ ಮನೆಯಲ್ಲೇ ಮರಣಹೊಂದಿದಳು.

ಆರನೇ ತರಗತಿಯ ಈ ವಿದ್ಯಾರ್ಥಿನಿ ಸಾವನ್ನಪ್ಪುವ ಸಂದರ್ಭದಲ್ಲಿ ಆ ಬಾಲಿಕೆಯ ತಾಯಿ ಮಡಿಕೇರಿ ಸರಕಾರಿ ಆಸ್ಪತ್ರೆಯಲ್ಲಿ ಹೊಟ್ಟೆನೋವಿನ ಕಾರಣ ಶಸ್ತ್ರ ಚಿಕಿತ್ಸೆಗೆಂದು ದಾಖಲಾಗಿದ್ದು ಇಂದಿರಾ ರೈ ಕಡೆಯವರು ದೂರವಾಣಿ ಮೂಲಕ ಆಸ್ಪತ್ರೆಗೆ ಸಾವಿನ ಸುದ್ದಿ ತಿಳಿಸಿದರು. ಮಗಳ ಸಾವಿನ ಸುದ್ದಿ ಕೇಳಿ ಪ್ರಜ್ಞೆ ತಪ್ಪಿ ಬಿದ್ದ ತಾಯಿಯನ್ನು ಆಸ್ಪತ್ರೆಯ ವಾಹನದಲ್ಲೇ ಕರೆದುಕೊಂಡು ಮೃತಳ ತಂದೆ ತಿಮ್ಮಯ್ಯನವರು ಸೋಮವಾರಪೇಟೆಗೆ ಬಂದರು. ಈ ಹೆತ್ತವರೊಂದಿಗೆ ಇಂದಿರಾ ರೈ ಕಡೆಯವರು ಧಾಷ್ಟ್ಯದಿಂದ ವರ್ತಿಸಿದರು. ತಿಮ್ಮಯ್ಯನವರೊಂದಿಗೆ ಯಾರೂ ಸಹಕರಿಸದ ಸಂದರ್ಭದಲ್ಲಿ ಆರ್.ವೈ.ಇ.ಯು. ನಿರ್ವಾಣಪ್ಪ, ಇಂದಿರಾಗಾಂಧಿ ಅಭಿಮಾನಿ ಸಂಘದ ಅಧ್ಯಕ್ಷ ಹೆಚ್.ಎ, ನಾಗರಾಜು, ಚೌಡ್ಲು ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಸತೀಶ್ ಶವಗಾರದ ಬಳಿ ಬಂದು ಸಾವಿನ ಕಾರಣ ಕೇಳಿದರು. ಮೃತಳ ತಂದೆ ತಿಮ್ಮಯ್ಯ "ನನ್ನ ಮಗಳನ್ನು ಕೊಲೆ ಮಾಡಿದ್ದಾರೆ" ಎಂದು ಅಳುವಾಗ ಇಂದಿರಾ ರೈಯವರ ಬಂಟರುಗಳು "ಇದು ಕೊಲೆಯಲ್ಲ. ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಕೊಡುವ ಹತ್ತು ಸಾವಿರ ರೂ. ತೆಗೆದುಕೊಂಡುಹೋಗಿ ಶವ ಸಂಸ್ಕಾರ ಮಾಡಿ" ಎಂದು ದಬಾಯಿಸಿದರು. ಆಗ ಬಂದವರು ತಂದೆಯೊಂದಿಗೆ ಪೊಲೀಸ್ ಠಾಣೆಗೆ ಹೋಗಿ "ಇದು ಆತ್ಮಹತ್ಯೆಯಲ್ಲ. ಇದೊಂದು ಕೊಲೆ ಪ್ರಕರಣವೆಂದು ದಾಖಲಿಸಿ ಕೊಲೆಗೆ ಕಾರಣರಾದವರನ್ನು ಬಂಧಿಸಿ ಬಡ ದಲಿತ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಿ" ಎಂದು ಆಗ್ರಹಿಸಿದರು.

ಪೊಲೀಸರ ಮೇಲೆ ಪ್ರಭಾವ

ಅದೇ ಸಮಯಕ್ಕೆ ಠಾಣೆಗೆ ಬಂದ ಭಾ.ಜ.ಪ. ಶಾಸಕ ಅಪ್ಪಚ್ಚು ರಂಜನ್ "ಇದು ಕೊಲೆಯಲ್ಲ, ಆತ್ಮಹತ್ಯೆ" ಎಂದು ವಾದಿಸತೊಡಗಿದಾಗ ಸಬ್ ಇನ್ಸ್‌ಪೆಕ್ಟರ್‌ರವರು ಕೊಲೆ ಪ್ರಕರಣವೆಂದು ದಾಖಲು ಮಾಡಲು ಹಿಮ್ಮೆಟ್ಟಿದರು. ಜಾತ್ಯಾತೀತ ಜನತಾದಳದ ತಾಲೂಕು ಅಧ್ಯಕ್ಷ ವಿ.ಪಿ. ಶಶಿಧರ್ ಕಾರ್ಯನಿಮಿತ್ತ ನಗರದಲ್ಲಿರುವರೆಂದು ತಿಳಿದ ನಿರ್ವಾಣಪ್ಪ ಮತ್ತಿತರರು ಅವರಿಗೆ ಘಟನೆ ವಿವರಿಸಿ ಸಹಕಾರ ಕೋರಿದರು. ಠಾಣೆಗೆ ಬಂದ ಶಶಿಧರ್ ಪ್ರಕರಣವನ್ನು ಕೊಲೆಯೆಂದು ದಾಖಲಿಸಲು ಒತ್ತಾಯಿಸಿದರೂ ಒಪ್ಪದ ಪೊಲೀಸರ ವರ್ತನೆಯನ್ನು ಪ್ರತಿಭಟಿಸಿ ಠಾಣೆಯ ಎದುರು ರಾತ್ರಿ ಹನ್ನೆರಡು ಗಂಟೆಯವರೆಗೂ ಧರಣಿ ಕುಳಿತರು. ಆಗ ಭಾ.ಜ.ಪ. ನಾಯಕ ಮತ್ತು ಶಶಿಧರ್ ನಡುವೆ ಮಾತಿನ ಚಕಮಕಿ ನಡೆಯಿತು. ಶಾಸಕರ ಕಡೆಯವರು ಧರಣಿ ನಿರತರ ಕಡೆಗೆ ಕಲ್ಲು ತೂರಿದರು.

ಪ್ರತಿಭಟನೆ

ಇಂದಿರಾ ರೈಯವರನ್ನು ಬಂಧಿಸಬೇಕೆಂದು ಮತ್ತು ಶಾಸಕರ ವರ್ತನೆಯನ್ನು ಖಂಡಿಸಿ ಮೇ 25 ರಂದು ಸರ್ವ ನಿರ್ವಾಣಪ್ಪ, ನಾಗರಾಜು ಮತ್ತು ಸತೀಶ್ ನೇತೃತ್ವದಲ್ಲಿ ಪೊಲೀಸ್ ಠಾಣೆಯ ಎದುರು ಧರಣಿ ನಡೆಸಿದ್ದು, ಅವರೊಂದಿಗೆ ಜಿಲ್ಲಾ ಪಂಚಾಯತ್





ಸದಸ್ಯರೂ ಆಗಿರುವ ವಿ.ಪಿ. ಶಶಿಧರ್ ಸೇರಿ ನಾಯಕತ್ವ ನೀಡಿದರು.

ಭಾ.ಜ.ಪ. ಶಾಸಕ ಅಪ್ಪಚ್ಚು ರಂಜನ್ ತನ್ನ ಗೂಂಡಾ ಪಡೆಯೊಂದಿಗೆ ಅಲ್ಲಿಗೆ ಬಂದು ವಾಗ್ವಾದಕ್ಕಿಳಿದು ಧರಣಿ ಕೂತವರ ವಿರುದ್ಧ "ಸೂ.... ಮಗ, ಬೊ.... ಮಗ" ಮುಂತಾದ ಅವರ ನಿತ್ಯದ ರಾಮ ಮಂತ್ರವನ್ನು ಪ್ರಯೋಗಿಸಿದರು ಮತ್ತು ಅವರ ಮೇಲೆ ಹಲ್ಲೆ ನಡೆಸಲು ಮುಂದಾದರು. ಈ ಪಡೆಯಲ್ಲಿ ಎಸ್.ಜಿ.ಮೇದಪ್ಪ, ಎ.ಯಸ್.ಮಲ್ಲೇಶ್ ಮೊದಲಾದ ಭಾ.ಜ.ಪ. ಮುಖಂಡರಿದ್ದರು.

ಪೊಲೀಸರು ಎಂದಿನಂತೆ ಭಾ.ಜ
ಗೂಂಡಾಗಿರಿಯನ್ನು ಬೆಂಬಲಿಸಿ ಧರಣಿ ನಿ
'ನೀವಿಲ್ಲಿಂದ ಎದ್ದು ಹೋಗಿ, ನಿಮಗೆ ರಕ್ಷಣೆ ಕೊ
ಸಾಧ್ಯವಿಲ್ಲ" ಎಂದರು.

ಆಗ ಶಶಿಧರ್ "ನ್ಯಾಯ ಸಿಗುವಲ್ಲಿಯ
ನಾವಿಲ್ಲಿಂದ ಹೋಗುವುದಿಲ್ಲ. ಈ ಭಾ
ಗೂಂಡಾಗಳಿಗೆ ಧೈರ್ಯವಿದ್ದರೆ ನಮ್ಮ ಮೈ ಮು
ಎಂದು ಸವಾಲು ಹಾಕಿದರು. ಶಶಿಧರ್ ನೇ
ಮನೋಸ್ಥೈರ್ಯದೆದುರು ತೆಪ್ಪಗಾದ ಶಾಸಕ
ಸ್ಥಳದಿಂದ ಕಾಲ್ಕಿತ್ತರು.

ಪ್ರಬಲ ಹೋರಾಟ

ಭಾಜಪ ಮುಖಂಡರ ಶ್ರೀಮಂತ
ಧೋರಣೆಯನ್ನು, ಗೂಂಡಾ ಪ್ರವೃತ್ತಿಯ
ಪೊಲೀಸರ ಭಾ.ಜ.ಪ. ಸೇವೆಯನ್ನು ಖಂಡಿಸಿ
ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ
ಸಂಘಟನಾ ಸಮಿತಿ, ಭಾರತ ಪ್ರಜಾಸ
ಯುವಜನ ಫೆಡರೇಶನ್ನಿನ ಸೋಮವಾ
ತಾಲೂಕು ಸಮಿತಿಗಳು ಖಂಡಿಸಿದವು.

ಡಿ.ವೈ.ಎಫ್.ಐ. ತಾಲ್ಲೂಕು ಸಮಿತಿ,
ರೈತ ಸಂಘ, ಕರ್ನಾಟಕ ಜನಾಂದೋಲನ ಸ
ಡಿ.ಎಸ್.ಎಸ್. ಕೃಷಿ ಕಾರ್ಮಿಕ ಸಂಗ್ರಾಮ
ಇಂದಿರಾಗಾಂಧಿ ಅಭಿಮಾನಿಗಳ ಸಂಘ, ಅಂ
ಯುವಕ ಸಂಘ, ಆದಿವಾಸಿ ಸಮರ ಸಂಘ
ರೈತ ಸಂಘ, ಪ್ರಗತಿ ವೇದಿಕೆ ಮು
ಸಂಘಟನೆಗಳು ಒಂದಾಗಿ ಪ್ರಗತಿಪರ ಹ
ವೇದಿಕೆ ರಚಿಸಿ ಭಾ.ಜ.ಪ. ಶಾಸಕರು ಮತ್ತ
ಪಕ್ಷದವರ ದಬ್ಬಾಳಿಕೆಯನ್ನು ವಿರೋಧಿಸಲು
ವಿರುದ್ಧ ಇನ್ನೊಬ್ಬರನ್ನು ಎತ್ತಿ ಕಟ್ಟುವ
ನೀತಿಯನ್ನು ಹಿಮ್ಮೆಟ್ಟಿಸಲು, ಬಡ ಬಾಲಿಕೆ ಮ
ಸಾವಿನ ನಿಷ್ಪಕ್ಷಪಾತ ತನಿಖೆಗಾಗಿ ಒ
ಹೋರಾಡಲು ತೀರ್ಮಾನಿಸಿದರು. ಇದರಂತೆ
6 ರಂದು ಸೋಮವಾರಪೇಟೆಯಲ್ಲಿ ಬೃಹತ
ಮತ್ತು ಬಹಿರಂಗ ಸಭೆ ನಡೆಸಲಾಯಿತು. ಸ
ಡಿ.ವೈ.ಎಫ್.ಐ. ತಾಲ್ಲೂಕು ಸಮಿತಿ ಅಧ್ಯ
ಭರತ್ ಅಧ್ಯಕ್ಷತೆ ವಹಿಸಿದ್ದರು
ಭಾಷಣಕಾರರಾಗಿ ಎ.ಕೆ. ಸುಬ್ಬಯ್ಯ,
ಲೋಬೋ ಮತ್ತು ಅತಿಥಿಗಳಾಗಿ ವಿ.ಪಿ. ಶ
ಭವೇರಪ್ಪ ಮೊದಲಾದವರು ಭಾಷಣ ಮಾ

ಪ್ರಾರಂಭದಿಂದಲೂ ಈ ಕಾಯ
ನಡೆಯದಂತೆ ಮಾಡಲು ಭಾಜಪ ಮಂದಿ
ಯತ್ನಿಸಿ ಬೆದರಿಕೆಯನ್ನೂ ಹಾಕಿದರು. ಅ
ಗೂಂಡಾಗಳನ್ನಾಗಲಿ, ಜಡಿ ಮಳೆಯನ್ನಾಗಲಿ
ಸುಮಾರು ಸಾವಿರ ಜನ ಮೆರವಣ
ಭಾಗವಹಿಸಿದ್ದರು. ನಂತರ ನಡೆದ ಸ
ಸುಮಾರು ಮೂರು ಸಾವಿರ ಜನ ಸೆ
ಭಾಜಪದ 20 ಮಂದಿ ಬದಿಯಲ್ಲಿ ನಿಂತು
ರೈರವರ ಸಾಕು ನಾಯಿಗಳಂತೆ ಕೂಗುತ್ತಿದ್ದರ
ಭಾಜಪದ ನಿರಂತರ ಗೂಂಡಾಗಿರಿ
ಜನದ್ರೋಹಿ ಧೋರಣೆಗಳಿಂದ ಬೇಸತ್ತ ಜ
ಸಂಖ್ಯೆಯಲ್ಲಿ ತಮ್ಮೆಡೆಗೆ ತಿರುಗಿದನ್ನು ಕ
ಜೀವಿಗಳು ಕಾಣದಂತೆ, ಓಡಿ ಹೋದರ

ಒಂಬತ್ತು ವರ್ಷಗಳ ಕಾಲ ಗೂಂ
ಮೂಲಕ ತಮ್ಮ ಎದುರಾಳಿಗಳನ್ನು ತಡೆದು
ಶಾಸಕ ರಂಜನ್ ಅಪ್ಪಚ್ಚು
ಸೋಮವಾರಪೇಟೆಯ ಜನ ಸಿಡಿದೇ
ಮೂಲಕ ಈ ಜಿಲ್ಲೆಯಲ್ಲಿ ಒಂದು
ತೆರೆದಿದ್ದಾರೆ. ಈ ಕಾರ್ಯಕ್ರಮವು
ದಿನಗಳಲ್ಲಿ ರೂಪುಗೊಳ್ಳಬೇಕಾದ ಪ
ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯ ಹೋ
ನಾಂದಿಯಾಗಿದೆ.

ಈ ಕಾರ್ಯಕ್ರಮದ ಬಗ್ಗೆ ಡಿ.ವೈ.ಎ
ತಾಲೂಕು ಸಮಿತಿ ಸಕ್ರಿಯ ಪ್ರಚಾ
ಗಣನೀಯ ಸಂಖ್ಯೆಯಲ್ಲಿ ಸಂಘಟನೆಯ
ಮತ್ತು ಹಿತೈಷಿಗಳು ಕಾರ್ಯಕ್ರ
ಭಾಗವಹಿಸುವಂತೆ ಮಾಡಿದ್ದು ಎದ್ದು ತೋ

ಮನ ಕಲಕಿದ ಘಟನೆ

ಊರ ಅಗಸೆ ಬಾಗಿಲು ದಾಟುವ ಹೊತ್ತಿಗೆ ಸೂರ್ಯ ನೆತ್ತಿಗೇರಿದ್ದ. ಊರಿಗೊಂದು ಕುಸುಮಾ ಟ್ರಾವೆಲ್ಸ್‌ನ ಬಸ್ ಹಾಜರಿ ಕೊಟ್ಟು ಹೋಗುತ್ತದೆ ಎಂಬುದು ಬಿಟ್ಟರೆ ಎಲ್ಲರೂ ನಂಬಿರುವುದು ಮ್ಯಾಂಗನೀಸ್ ಲಾರಿ ಹಾಗೂ ಪಾದ ಪಯಣವನ್ನೇ. ನಾನು ಬಂದಿದ್ದು ಹೀಗೇನೇ.

ಅವ್ವ ಕೈಕಾಲು ತೊಳೆಯಲು ಹೊತ್ತಿನ ಪಡಗದ ನೀರು ಕೊಟ್ಟಳು. ಮುಖಮೈಗೆ ಅಡರಿದ್ದ ಮ್ಯಾಂಗನೀಸ್ ಕೆಂಧೂಳನ್ನು ತೊಳೆದುಕೊಂಡೆ. ಆ ಮಣ್ಣು ಅಂಟಿಕೊಂಡಷ್ಟು ಸುಲಭವಾಗಿಯೇ ತೊಳೆದುಕೊಂಡಾಗಲೂ ಹೋಗಿಬಿಡುತ್ತೆ! ಉಳಿದುಕೊಂಡರೂ ಇರಲಿ ಬಿಡಿ ನಮ್ಮ ಮಣ್ಣೇ ಅಲ್ಲವೇ?

ಮುಂಜಾನೆ ಏನಾದರೂ ತಿಂದಿಯೋ ಇಲ್ಲೋ, ಬಾ ರೊಟ್ಟಿ ತಿನ್ನು ಎಂದಳು ಅವ್ವ. ಹೊಟ್ಟೆ ಹಸಿದಿದ್ದರೂ ನನಗೆ ಕಕ್ಕನನ್ನು (ಚಿಕ್ಕಪ್ಪ) ಮೊದಲು ನೋಡಬೇಕಿತ್ತು. ಅತ್ತ ಹೆಜ್ಜೆ ಹಾಕಿದೆ.

ಕಕ್ಕ ಪುಟ್ಟಪೂರಾ ಹಾಸಿಗೆ ಹಿಡಿದಿದ್ದ. ನಿಜವಾಗಿಯೂ ಹಾಸಿಗೆಗೇ ದೇಹ ಅಂಟಿಕೊಂಡಿದ್ದು, ಬೆನ್ನಿಗಂಟಿದ ಹೊಟ್ಟೆ, ಎಲುಬುಗಳ ಹಂದರದ ಈ ದೇಹ ಅಜಾನಬಾಹು, ತೀಡಿದ ಹುರಿ ಮೀಸೆಯ ಕಕ್ಕನದೇ ಎಂದು ಅನುಮಾನ ಮೂಡಿತು. ನೊಣ ಓಡಿಸುತ್ತಿದ್ದ ಸಣ್ಣವ್ವ(ಚಿಕ್ಕಮ್ಮ) 'ಬಾ ಈಗ ಬಂದ್ಯಾ' 'ಮನುಷ್ಯ ಏನೂ ಉಳಿದಿಲ್ಲಾ ಎಂತೋ ಏನೋ? ಆ ಗಂಡಿ ಈರಭದ್ರನಿಗೇ ಗೊತ್ತು' ಎಂದು ನಿಟ್ಟುಸಿರಿಟ್ಟು ಕಣ್ಣೀರು ತೆಗೆದಳು. ನನಗೆ ದುಃಖ ಉಮ್ಮಳಿಸಿತು. ಆತ ನನ್ನನ್ನು ಎತ್ತಿ ಆಡಿಸಿದ ಹಳೆಯ ನೆನಪುಗಳುಕ್ಕಿ ತಲೆ ಸುತ್ತಿದಂತಾಯಿತು. ಜೀವನದುದ್ದಕ್ಕೂ ಕಷ್ಟಕೋಟಲೆ ಸೋಸಿದ ಸಣ್ಣವ್ವನ ಗತಿ ಏನು ಎಂದು ಚಿಂತಿಸಿತು. ಅವರಿಗಿದ್ದದ್ದು ಮೂರು ಮಕ್ಕಳು. ದೊಡ್ಡಕ್ಕ ಶರಣವ್ವ ನಾನು ಐದು ವರುಷದವನಿರುವಾಗಲೇ ಮಗನನ್ನು ಹೆತ್ತು - ಬಾಣಂತಿ ರೋಗಕ್ಕೆ ಆಕೆ ಬಲಿಯಾಗಿದ್ದಳು. ಇದ್ದ ಇಬ್ಬರು ಗಂಡು ಮಕ್ಕಳು ಭಾಗವಾಗಿ ದೂರವಾಗಿದ್ದರು. ತಮ್ಮ ಕಟ್ಟೇಗೌಡ ಈತನೂ ಅವರನ್ನು ಹತ್ತಿರ ಸೇರಿಸುವ ಮನುಷ್ಯನೇನು ಅಲ್ಲ. ..... ವ್ಯವಸಾಯ ಸಾಲದೇ ಗುಡ್ಡಕ್ಕೆ ದುಡಿಯಲು ಹೋಗಿ ದಾಂಡೇಲಿಯ ಡಿಗ್ಗಿ ಮೈನ್ಸ್‌ನಲ್ಲಿ ಸೆಕ್ಯುರುಟಿಯಾಗಿದ್ದ! ಈಗ ಉಳಿದಿರುವುದು ಈ ಮನೆ, ಒಂದಿಷ್ಟು ಹೊಲ. ಆರೈಕೆಗೆ ಸಣಕಲು ಸಣ್ಣವ್ವ...

"ಸಾಂತ ಬಂದಾನ್ನೋಡು... ಗುರುಸಾಂತ..." ಗಟ್ಟಿಯಾಗಿ ಕೂಗಿ ಹೇಳಿದಳು ಸಣ್ಣವ್ವ "ಆ್ಞ... ಎಂದು ಕಣ್ಣು ತೆರೆದು ಮಗ್ಗಲು ಹೊರಳಿಸಿ ನನ್ನನ್ನು ನೋಡಿ ಎದ್ದು ಕೂಡ್ರಲು ಯತ್ನಿಸಿದನಾದರೂ ಮೇಲೇಳಲಾಗಲಿಲ್ಲ. ಮೈಯಲ್ಲಿ ತ್ರಾಣ ಇಲ್ಲ. ಸ್ವಾದೀನವೂ ಇಲ್ಲ. ಕೈಕಾಲು ಹೊರಳಾಡಿದವಷ್ಟೆ. 'ತನ್ನದು ಇಷ್ಟೇ' ಎಂದರಿತ ಕಕ್ಕ ಕೊನೆಗೆ 'ನನ್ನ ಪಾಲಿಗಿಷ್ಟೇ. ಏನೂ ಮಾಡಲಾಗಲಿಕ್ಕಿಲ್ಲ' ಎಂದು ಮೇಲಕ್ಕೆ ಕೈಯಾಡಿಸಿದ. ನಾನು ಸ್ವಲ್ಪ ಹೊತ್ತಿದ್ದು ಸಣ್ಣವ್ವನ ಜೊತೆ ಮಾತನಾಡಿ ಮನೆಗೆ ವಾಪಸಾದೆ. ಬರುವ ಮೊದಲು 50 ರೂಪಾಯಿ ಕೊಟ್ಟು ಏನಾದರೂ ಕೊಡಿಸು ಎಂದೆ (ನಾನೂ ವಾಪಸು ಬೆಂಗಳೂರು ಮುಟ್ಟಬೇಕಿತ್ತು) .ಮನೆಯಲ್ಲಿ ಉಂಡು, ಕೆಲ ಗೆಳೆಯರನ್ನು ಮಾತನಾಡಿಸಿ ಹೊಸಪೇಟೆಗೆ ಹೊರಡಲೆಂದು ರೋಡಿನತ್ತ ಹೊರಟೆ. ನಡುವೆ ನಮ್ಮ ಶಾಲೆಯ ಹಳೇ ಮೇಸ್ಟ್ರು ಸಣ್ಣಗವ್ಯ್ಯ ನೋರು ಸಿಕ್ಕರು. 'ಸಾಲಿ ಅಯ್ನೋರಿಗೆ' ನಮಸ್ಕಾರ ಮಾಡಿ ಮಾತನಾಡಿಸಿದೆ. ಕಕ್ಕನನ್ನು ನೋಡಲು ಬಂದಿದ್ದೆ ಎಂದೆ. "ಅಯ್ಯೋ... ಪಂಪನಗೌಡ ಉಳಿಯೋದು ಬಹಳ ಕಷ್ಟ. ನಮಗಿಂತ ಚಿಕ್ಕೋನು. ಏನು ಮಾಡೋದು ಬಡತನ. ಬ್ಯಾರೇ ಬ್ಯಾನೆ ಏನೂ ಇಲ್ಲ. ಸರಿಯಾಗಿ ತಿನ್ನಾಕೇ ಇಲ್ಲ... ಏನು ಮಾಡೋದು ಹಣೆಬರಹ ! ಇದ್ದಷ್ಟು ದಿವ್ಸ ಇದ್ದು ಸಂತೆ ಮುಗ್ಸಿಕೊಳ್ಳೋದೆ" ಎಂದು ಅವರೂ ಕೈ ತಿರುವಿದರು. ಈ ಮಾತು ನನ್ನಲ್ಲಿ ಶಾಕ್ ತಂತು. ಬಹಳ ಗಾಢವಾಗಿ ಚಿಂತೆಗಿಟ್ಟುಕೊಂಡಿತು. ಕನಿಷ್ಟ ಪೌಷ್ಟಿಕಾಂಶಗಳ ಆಹಾರವೂ ಇಲ್ಲದೇ ಇರೋದು ಇಂತಹ ಸ್ಥಿತಿ ತಲುಪಿಸಿದೆಯಲ್ಲಾ! ಎಂದುಕೊಳ್ಳುವಾಗಲೇ ಚಿಕ್ಕಪ್ಪನಿಗೆ ಹಣ್ಣು, ಹಂಪಲು, ಒಳ್ಳೆ ಊಟ, ಔಷಧಿ ಕೊಟ್ಟರೆ ಗೆಲುವಾಗುತ್ತಾನಲ್ಲವೇ? ಒಂದು ಪರಿಹಾರ ಸಿಕ್ಕಿತಲ್ಲಾ' ಎಂದು ಖುಷಿಯಾಯಿತು. ಒಡನೆಯೇ ಯಾರು ಕೊಡಿಸೋದು ಎಂದು ಮನಸ್ಸು ಕುಗ್ಗಿ ಹೋಯಿತು. ಹಾಗೇ ಮುಖ ಕೆಳಗೆ ಹಾಕಿ ಮೈನ್ಸ್ ಲಾರಿ ಹತ್ತಿ ಊರಲ್ಲೇ ಮನಸ್ಸು ನೆಟ್ಟು ಹೊರಟೆ.

ಬೆಂಗಳೂರಿಗೆ ವಾಪಸಾಗಿ ಎಂಟು ದಿನಗಳಾಗಿರಲಿಲ್ಲ. (1988 ರ ಫೆಬ್ರವರಿ 1 ರಿಂದ ಎಸ್‌ಎಫ್‌ಐ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಬೆಂಗಳೂರು ರಾಜ್ಯ ಕೇಂದ್ರಕ್ಕೆ ಬಂದಿದ್ದೆ. ವಾಸ್ತವ್ಯ ಶಾಸಕರ ಭವನ 233 ರಲ್ಲಿ. ಒಂದು ಅರ್ಥದಲ್ಲಿ ಅದೇ ಕಾರ್ಯನಿರ್ವಹಣಾ ಕಛೇರಿ). ಎಲ್.ಹೆಚ್. ನ ರೂಂಗೆ ಮಧ್ಯಾಹ್ನ ಹೊಸಪೇಟೆಯಿಂದ ಅಕ್ಕ ಫೋನ್ ಮಾಡಿದ್ದರು. "ಚಿಕ್ಕಪ್ಪ ತೀರಿಕೊಂಡನೆಂದು, ನಾಳೆ ಬೆಳಗ್ಗೆ ಮಣ್ಣು ಮಾಡ್ತಾರೆ, ಬರ್ತಿಯಾ" ಎಂದು ಕೇಳಿದಳು. "ನೋಡುತ್ತೇನೆ" ಎಂದೆ. ನೋಡಲು ಬೇಕಿದ್ದುದು ಕಾಸು ಅಷ್ಟೇ. ಅಂಗಿಯ ಜೇಬಿನೊಳಗೆ ಕೈಬಿಟ್ಟೆ. ಜೇಬು ತುಂಬಿದ್ದರೂ ಚೀಟಿಗಳ ನಡುವೆ ಸಿಕ್ಕಿದ್ದು ಎರಡು ರೂಪಾಯಿ ನೋಟು! ಅಲ್ಲಿ ನೋಡಲಿಕ್ಕೆ ಏನೂ ಉಳಿದಿರಲಿಲ್ಲ. ಆದ್ದರಿಂದ ಮಹಡಿಯಿಂದ ಕಂಡಿದ್ದು ಖಾಲಿ ಆಕಾಶವಷ್ಟೇ. ಗಂಟೆ ಮೂರಾಗಿದ್ದರಿಂದ ಏನಾದರೂ ತಿನ್ನಬೇಕಿತ್ತು. ಶಾಸಕರ ಭವನದ ಹೊರ ವಲಯದ ಕ್ಯಾಂಟೀನಿನ ಚಿತ್ರಾನ್ನ ತಿನ್ನೋದೇ- ಬಿಡೋದೆ ಎಂದು ತಾಕಲಾಟದಲ್ಲಿ ಮೆಟ್ಟಿಲು ಇಳಿದೆ....

• • •

ಇದಾದ ವರುಷದೊಳಗೆ ಸಣ್ಣವ್ವ - ನಾಗಮ್ಮನು ತೀರಿಕೊಂಡಿದ್ದರು. ಆಕೆಯ ಜೀವ ಅಪಹರಿಸಿದ್ದು ಟಿ.ಬಿ. ಖಾಯಿಲೆ! ಟಿ.ಬಿ. ಖಾಯಿಲೆಯಿಂದ ಸಾಯಬೇಕಿಲ್ಲ ಎನ್ನುತ್ತಿತ್ತು ಸರ್ಕಾರ. ವೈದ್ಯಕೀಯ ಜಗತ್ತಿನಲ್ಲಿ ಇದಕ್ಕೆ ಔಷಧಿ ಉಂಟು - ಸಾವು ಅನಿವಾರ್ಯವೇನೂ ಅಲ್ಲ. ನಿಜ, ಒಂದೆರೆಡು ತಾಸಿನಲ್ಲಿ ತಲುಪಬಹುದಾದ ಬಳ್ಳಾರಿ ಮೆಡಿಕಲ್ ಕಾಲೇಜ್, ಸಂಡೂರು ಮಹಾ ರಾಜರ ಅರಮನೆ ಪಕ್ಕದ ಸರ್ಕಾರಿ ಆಸ್ಪತ್ರೆ ತಲುಪುವ ತ್ರಾಣ ಇರ ಬೇಕಲ್ಲ. 'ತ್ರಾಣ' ಇಲ್ಲವಾದರೆ ಪ್ರಾಣವೂ ಇಲ್ಲ! ಅಲ್ಲವೇ?

– ಎಸ್.ವೈ.ಗುರುಶಾಂತ್

ಬಳ್ಳಾರಿ ಜಿಲ್ಲೆಯ ಹರಗಿನ ದೋಣಿಯಲ್ಲಿ ಹಸಿವಿನಿಂದಾಗಿಯೇ ಕೂಲಿಕಾರ ಹೊನ್ನೂರಪ್ಪ ಸತ್ತುಹೋಗಿದ್ದಾನೆ. ಭೀಕರ ಬರಕ್ಕೆ, ಸರ್ಕಾರಗಳ ನಿರ್ಲಕ್ಷ್ಯತನ, ಜನದ್ರೋಹಿ ದುಷ್ಟ ನೀತಿಗಳಿಗೆ ಬಲಿಯೀತ! ಈ ಸಂದರ್ಭದ ಒಟ್ಟು ಚಿತ್ರಣವನ್ನು ನಿಯೋಗದೊಂದಿಗೆ ಖುದ್ದಾಗಿ ಭೇಟಿ ನೀಡಿ ವರದಿ ಮಾಡಿದ್ದಾರೆ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಕಾರ್ಯದರ್ಶಿ ಯು.ಬಸವರಾಜು

ಹಸಿವಿನಿಂದ ಹರಗಿಡೋಣಿ ಕೂಲಿಕಾರನ ಸಾವು

ಇದು ಸಾವಲ್ಲ ?

ಯು.ಬಸವರಾಜು

ಸತತ 3ನೇ ವರ್ಷಕ್ಕೆ ಕಾಲಿಡುತ್ತಿರುವ ಬರಗಾಲ, ಆರಂಭದಲ್ಲಿಯೇ ತನ್ನ ಭೀಕರತೆಯನ್ನು ತೆರೆದು ತೋರಿದೆ. ಮುಂಬರುವ ದಿನಗಳ ಕರಾಳತೆಯನ್ನು ಬಿಚ್ಚಿಟ್ಟಿದೆ! ಬಳ್ಳಾರಿ ಜಿಲ್ಲೆಯ ಹರಗಿನ ಡೋಣಿ ಗ್ರಾಮದ ಹರಿಜನ ಕೂಲಿಕಾರ 58 ವರ್ಷದ ಹೊನ್ನೂರಪ್ಪ ಬರದ ರುದ್ರ ನರ್ತನಕ್ಕೆ ಬಲಿಯಾದ ದುರ್ದೈವಿಯಾಗಿದ್ದಾನೆ.

ಮಾಹಿತಿ ತಂತ್ರಜ್ಞಾನ- ವಿಜ್ಞಾನ ಅತ್ಯಂತ ಎತ್ತರಕ್ಕೆ ಬೆಳೆದು ನಿಂತಿರುವ 21 ನೇ ಶತಮಾನದ ಆಧುನಿಕ ಸಮಾಜದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೊಣೆಗೇಡಿತನಕ್ಕೆ ತುತ್ತಾದ ಹಸಿದ ಕೂಲಿಕಾರನ ದಯನೀಯ ಸಾವು ನಾಗರೀಕ ಜಗತ್ತನ್ನು ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿದೆ.

ಕಾಂಗ್ರೆಸ್(ಐ) ಅಧ್ಯಕ್ಷರಾದ ಸೋನಿಯಾ ಗಾಂಧಿ ಹಾಗೂ ಬಿ.ಜೆ.ಪಿ.ಯ ಸುಷ್ಮಾ ಸ್ವರಾಜ್ ಸ್ಪರ್ಧೆಗಿಳಿಯುವ ಮೂಲಕ ಕಳೆದ ಪಾರ್ಲಿಮೆಂಟ್ ಚುನಾವಣೆಯ ವೇಳೆಯಲ್ಲಿ ಜಗತ್ತಿನ ಗಮನ ಸೆಳೆದ ಬಳ್ಳಾರಿ ಜಿಲ್ಲೆಯು ಮರಳಿ ಈ ವಿಷಾದನೀಯ ಘಟನೆಯ ಮೂಲಕ ಬೆಳಕಿಗೆ ಬಂದಿದೆ.

ಕಾಂಗ್ರೆಸ್ ಅಧ್ಯಕ್ಷರನ್ನು ಪಾರ್ಲಿಮೆಂಟಿಗೆ ಆಯ್ಕೆ ಮಾಡಿ ಕಳುಹಿಸಿದ ಕ್ಷೇತ್ರದಲ್ಲೀಗ ಬಣಗುಡುತ್ತಿರುವುದು ಮಸಕಾದ ಛಾಯೆ! ಇಲ್ಲಿ ಸೋತರೂ ಸುಷ್ಮಾ ಸ್ವರಾಜ್ ಕೇಂದ್ರ ಮಂತ್ರಿಯಾಗಿದ್ದಾರೆ. ವರಮಹಾಲಕ್ಷ್ಮಿ ಪೂಜೆಗೆ ಪ್ರತಿವರ್ಷ ಬಳ್ಳಾರಿಗೆ ಭೇಟಿ ನೀಡುತ್ತಿದ್ದಾರೆ. ಇವರು ಮತ್ತು ಇವರ ಪಕ್ಷಗಳು ಸುರಿದ ಮಣಗಟ್ಟಲೆ ಭರವಸೆಗಳು, ಅಲ್ಲದೆ ಕೇಂದ್ರ ಮತ್ತು ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿರುವ ಇವರ ಪಕ್ಷಗಳು ಬರವನ್ನು ಎದುರಿಸಲು ಪ್ರತಿನಿತ್ಯ ರೀಮುಗಟ್ಟಲೇ ಪೇಪರುಗಳಲ್ಲಿ ಟನ್ನುಗಟ್ಟಲೇ ಕಾರಿಕೊಳ್ಳುವ ಪರಿಹಾರವೂ.. ಈ ಯಾವುದೂ ಹೊನ್ನೂರಪ್ಪನನ್ನು ಉಳಿಸಲಿಲ್ಲ.

ಇದುವರೆವಿಗೂ ಈ ಪ್ರದೇಶದ ಶಾಸಕರು ಈಗ ಸಂಪುಟ ದರ್ಜೆಯ ಸಚಿವರಾದ ಅಲ್ಲಂ ವೀರಭದ್ರಪ್ಪನವರಾಗಲೀ ಪಂಚಾಯತ್ ಸಚಿವರಾದ ದಿವಾಕರ ಬಾಬುರವರಾಗಲಿ ಮತ್ತು ಜಿಲ್ಲೆಯ ಉಸ್ತುವಾರಿ ಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಸಚಿವರೂ ಆದ ಘೋರ್ಪಡೆಯವರಾಗಲಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ ಭೇಟಿ ನೀಡುವ ಕನಿಷ್ಠ ಸೌಜನ್ಯವನ್ನು ತೋರದಿರುವುದು ಖಂಡನೀಯ.

ಸರ್ಕಾರದ ಪರವಾಗಿ ಭೇಟಿ ನೀಡಿದ ಜಿಲ್ಲಾ ಪಂಚಾಯತ್ ನಿರ್ವಾಹಕ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಇವರಿಗೆ ಹೊನ್ನೂರಪ್ಪನ ಸಾವು ಹಸಿವಿನಿಂದ ಆದ ಸಾವಲ್ಲವಂತೆ; ಅದು ಸಹಜ ಸಾವಂತೆ! ಪಾಪಾ!! ಅಧಿಕಾರಿಗಳು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲಾದೀತೆ!?

ಹೋಗಲಿ.. ವಿಧಾನಸೌಧದಲ್ಲಿರುವ ವಿರೋಧ ಪಕ್ಷದ ನಾಯಕರುಗಳಿಗೇನಾಗಿದೆ? ಅವರ ಕಿವಿಗೆ ಬೀಳಲಿಲ್ಲವೆ, ಹರಿಜನ ಫಕೀರಪ್ಪನ ಕುಟುಂಬದ ಆರ್ತನಾದ? ಅಥವಾ ಇಂತಹ ಸಾವುಗಳಿಗೆ ನಮ್ಮದೂ ಪಾಲಿದೆಯೆಂದು ಸಂಕೋಚವೆ..! ಕೇಂದ್ರದಲ್ಲಿ ನಾವು ತಾನೆ ಸರ್ಕಾರ ಎಂಬ ಅಳುಕೇ? ಯಾವುದು ಸರಿ? ಹೇಗಿದೆ? ಇವರು ನಮ್ಮ ಜನ ಪ್ರತಿನಿಧಿಗಳು; ಇದು ನಮ್ಮ ಸರ್ಕಾರ!

ಹರಗಿನ ದೋಣಿ ಕರ್ಮಕಾಂಡ

ಬಳ್ಳಾರಿ ನಗರದಿಂದ ಕೇವಲ 48 ಕಿ.ಮೀ ದೂರದಲ್ಲಿರುವ ಹರಗಿನ ಡೋಣಿ 500 ಮನೆಗಳಿರುವ ಗ್ರಾಮ. 4000 ಎಕರೆಗಿಂತಲೂ ಅಧಿಕವಾದ ಫಲವತ್ತಾದ ಮಸಾರಿ (ಕೆಂಪು) ಭೂಮಿ ಬೇಸಾಯಕ್ಕೆ ಲಭ್ಯವಿದೆ. 2-3 ಬಾರಿ ಮಳೆ ಸುರಿದರೂ ಸಾಕು ಅದ್ಭುತವಾದ ಫಸಲು ನೀಡುವ ಭೂಮಿ. ಗ್ರಾಮದ ಬೇಸಾಯದ ಭೂಮಿಯಲ್ಲಿ 100 ಕೊಳವೆ ಬಾವಿಗಳಿಂದ ಶೇ.5 ಭಾಗ ಮಾತ್ರವೇ ನೀರಾವರಿ ಹೊಂದಿದೆ. ಅಂತರ್ಜಲ ಬತ್ತುವ ಮೂಲಕ ಕೊಳವೆ ಬಾವಿಗಳಿಂದ ಈ ವರ್ಷ ಕೆಲವೇ ಕೆಲವು (50-60 ಎಕರೆ) ಭೂಮಿ ಮಾತ್ರವೇ ಬಿತ್ತನೆ ಹೊಂದಿದೆ. ಹೆಚ್ಚಿನ ಪಂಪ್‌ಗಳು 'ಆನ್' ಮಾಡಿದ 5-6 ನಿಮಿಷ ನೀರು ಬಾರದೇ ನಂತರ ಸ್ವಲ್ಪ ಬರುವುದು ಮತ್ತು ನಿಲ್ಲುವುದು... ಹೀಗೆ ಕಣ್ಣಾಮುಚ್ಚಾಲೆಯಾಟದಲ್ಲಿ ತೊಡಗಿವೆ.

ಮೇವಿನ ತೀವ್ರ ಅಭಾವ ಗ್ರಾಮದಲ್ಲಿದೆ. ಈ ವರ್ಷ ಇಲ್ಲಿಯವರೆಗೆ ಈ ಒಂದೇ ಗ್ರಾಮದಲ್ಲಿ 250ಕ್ಕೂ ಹೆಚ್ಚು ಜಾನುವಾರುಗಳು ಕಸಾಯಿ ಖಾನೆಗೆ ಸಾಗಿವೆ.

ಹರಿಜನ ಕಾಲೋನಿಯಿಂದ ಆಯ್ಕೆಯಾದ ಗ್ರಾಮ ಪಂಚಾಯ್ತಿ ಸದಸ್ಯ ಸಣ್ಣರಂಗಪ್ಪನ 4 ಹರೆಯದ ಹೋರಿಗಳು (ಎತ್ತುಗಳು) ತಲಾ 5000 ರೂ.ಗಳಿಗಿಂತಲೂ ಹೆಚ್ಚಿಗೆ ಬೆಲೆ ಬಾಳುವಂತಹವುಗಳು ಕಳೆದೆರಡು -ಮೂರು ದಿನದ ಹಿಂದೆ ಕೇವಲ 3.5 ಸಾವಿರ ರೂಪಾಯಿಗೆ ಕಸಾಯಿ ಖಾನೆ ದವಡೆಗೇರಿವೆ.

ಕಳೆದ ವರ್ಷ ಬಿದ್ದ ಒಂದು ಮಳೆಗೆ ಬಿತ್ತನೆಯಾದ 3 ಸಾವಿರ ಎಕರೆ ಪ್ರದೇಶದಿಂದ ಕೇವಲ 440 ಚೀಲ ನವಣೆ ಉತ್ಪಾದನೆ ಬಂದಿದೆ. ಬಿತ್ತಿದವರ ಕೂಲಿಯೂ ಬರಲಿಲ್ಲ.

ಭೂಮಿಯನ್ನು ಬಿಟ್ಟರೆ 100 ಜನರಷ್ಟು ಕೂಲಿಕಾರರಿಗೆ ಗ್ರಾಮದ ಪಶ್ಚಿಮಕ್ಕಿರುವ ಮ್ಯಾಂಗನೀಸ್ ಅದಿರನ್ನು ಗರ್ಭದೊಳುದುಗಿಸಿಕೊಂಡಿರುವ ಗುಡ್ಡಗಳ ಸಾಲು ಕಳೆದ 2 ತಿಂಗಳ ಹಿಂದಿನವರೆಗೆ ಆಧಾರವಾಗಿತ್ತು.

ಸಮೃದ್ಧವಾದ ಮ್ಯಾಂಗನೀಸ್ ಅದಿರನ್ನು ಗಣಿಗಳ ಮೂಲಕ ಹೊರತೆಗೆದು ಹಲವು ಬಂಡವಾಳದಾರರು, ಈಗಿನ ಪರಿಸರದ ಮಂತ್ರಿ ಅಲ್ಲಂ ವೀರಭದ್ರಪ್ಪನವರ ಕುಟುಂಬದವರು ಸೇರಿ ನೂರಾರು ಕೋಟಿ ಹಣವನ್ನು ಬಳಿದುಕೊಂಡಿದ್ದಾರೆ. ಈ ಭಾಗದ ಕೂಲಿಕಾರರನ್ನು ಮೂಳೆ ಚಕ್ಕಳ ಮಾಡಿ ಇದೀಗ ಗಣಿಗಳಲ್ಲಿ ಆಧುನಿಕ ಯಂತ್ರಗಳನ್ನು ಬಳಸಲು ಮುಂದಾಗಿ ಇವರನ್ನು ಬೀದಿಗೆಸೆದಿದ್ದಾರೆ.

ಮ್ಯಾಂಗನೀಸ್ ಇರುವ ಬೆಟ್ಟಗಳು ಮತ್ತು ಅವುಗಳಿಂದಾದ ಹರಿವುಗಳಲ್ಲಿ ಮಳೆಗಾಲದಲ್ಲಿ ನೀರು ಸಂಗ್ರಹವಾಗಿ ಭೂಮಿಯ ಪದರುಗಳಲ್ಲಿಳಿದು ಅಂತರ್ಜಲ ನಿರ್ಮಾಣಗೊಳ್ಳುತ್ತಿತ್ತು. ಅಲ್ಲಲ್ಲಿ ಕಟ್ಟಿದ ಚೆಕ್ ಡ್ಯಾಂಗಳು ಸ್ವಲ್ಪ ಮಟ್ಟಿಗಾದರೂ ಸಹಾಯಕವಾಗಿದ್ದವು. ಇದೀಗ ಮ್ಯಾಂಗನೀಸ್ ಧೂಳು ಚೆಕ್ ಡ್ಯಾಂಗಳ ಹರಿವುಗಳಲ್ಲಿ ತುಂಬಿ ಮಳೆ ನೀರು ಭೂಮಿಯ ಪದರುಗಳಿಗೆ ಜಿನುಗದಂತೆ ತಡೆದು ಮುಂದೆ ಸಾಗಿಸಿ ಅಂತರ್ಜಲ ಕ್ರೋಢೀಕರಣಕ್ಕೆ ತೊಂದರೆಯೊಡ್ಡುತ್ತಿದೆ.

ಗಣಿಗಳಲ್ಲಿ ಸ್ಫೋಟಿಸುವ ಸ್ಫೋಟಕಗಳ ಶಬ್ದಕ್ಕೆ ಬೋರೋವೆಲ್‌ಗಳು ಭೂಮಿಯೊಳಗೆ ಹುದುಕಿ, ನೀರು ಮೇಲೆತ್ತಲು ತೊಂದರೆ ನೀಡುವುದೆಂಬ ದೂರು ಇಲ್ಲಿನ ಬೋರ್‌ವೆಲ್ ರೈತರ ಅಳಲಾಗಿದೆ.

ಕೂಲಿಕಾರಳಾದ ಹರಿಜನ ಹೊನ್ನೂರಮ್ಮನೇ, ಹೊನ್ನೂರಪ್ಪನ ಮನೆಯ ಯಜಮಾನತಿ. ಈ ದಂಪತಿಗಳಿಗೆ 3 ಗಂಡು ಮಕ್ಕಳು- ಇಬ್ಬರು ಹೆಣ್ಣು ಮಕ್ಕಳು.

ಈ ದಂಪತಿಗಳ ಜೊತೆ ಹಿರಿಮಗ ಈಗ ಮನೆಯೆಂಬ ಹಂದಿಗೂಡಿನಂತೆಯೇ ಇರುವ ಗುಡಿಸಲಿನಲ್ಲಿ ವಾಸಿಸುತ್ತಿದ್ದಾನೆ. ಈತನ ಹೆಸರು ಹುಲುಗಪ್ಪ, ವಯಸ್ಸು 22 ಮಾತ್ರವೇ. ಬುದ್ಧಿ ಅಷ್ಟೇನು ಬೆಳೆದಿಲ್ಲ. ಸ್ವಲ್ಪ ಮಟ್ಟಿಗೆ ಮಾನಸಿಕ ಅಸ್ವಸ್ಥ. ದುಡಿದು ಮನೆಗೇನು ತರಲಾರ. ಆದರೆ ಯಾರಾದರೂ ಹಗುರ ಕೆಲಸ ಹೇಳಿದರೆ ಮಾಡಿ, ಕೊಟ್ಟದ್ದನ್ನು ತರುವುದಷ್ಟೇ ಈತನಿಂದ ಈ ಕುಟುಂಬಕ್ಕೆ ಸಿಗುವ ಸಹಾಯ.

ಇನ್ನು ಎರಡನೇ ಮಗ ದೇವಪ್ಪ (ದ್ಯಾವಣಾ). ಈತನು ದೂರದ ಬಳ್ಳಾರಿ ಕೆಲಸಕ್ಕಾಗಿ ಹೊಗುತ್ತಾನೆ. 15-20 ದಿನಗಳಿಗೊಮ್ಮೆ ಮನೆ ಕಡೆ ತಲೆಹಾಕುವುದು. ಈತನು ಬಳ್ಳಾರಿಯಲ್ಲಿ ಹಮಾಲರಿಗೆ ಸಹಾಯಕವಾಗಿ, ಅವರು ಕರೆದಾಗ ದುಡಿಯುವ ಕೆಲಸಗಾರ. ಸರಾಸರಿ ವಾರಕ್ಕೆ 100 ರೂ ದುಡಿಯುತ್ತಾನೆ. ದಿನಾಲು ಊರಿಗೆ ಹೋಗಿ ಬಂದರೆ ಬಸ್ ಛೇಸ್ ವಾರಕ್ಕೆ 105 ರೂ ಹಾಳಾಗುತ್ತದೆ. ಹೀಗಾಗಿ ಬಳ್ಳಾರಿಯಲ್ಲೇ ಪರಿಚಿತ- ಸ್ಥಳದಲ್ಲಿ ವಾಸ, ದುಡಿಮೆಯಲ್ಲೇ ಊಟ ತಿಂಡಿ.

ಇನ್ನು ಕಿರಿಯವನು ಬಳ್ಳಾರಿ ಹೋಟೆಲಿನಲ್ಲಿ ಮುಂತಾದೆಡೆ ಕೆಲಸ ಸಿಕ್ಕಾಗ ಸಿಕ್ಕಷ್ಟು ದುಡಿಯುವವ.

ಆದಾಗ್ಯೂ ಇವರು ಉಂಡರೆಷ್ಟು - ದುಡಿದರೆಷ್ಟು ತಮ್ಮದನ್ನು ನೋಡಿಕೊಳ್ಳಲು ಪಡಬಾರದ ಪಡಪಾಟಲು ತೆತ್ತಿದ್ದೇ ಹೆಚ್ಚು. ಮನೆಗೆ ನೆರವಾಗುವುದಿಲ್ಲ. ಇವರು ಹೊನ್ನೂರಮ್ಮನನ್ನು ಏನು ಕೇಳಲಿಲ್ಲವೆಂಬುದೇ ಅಥವಾ ಹೆಚ್ಚಿನದೇನನ್ನೂ ಕೇಳಲಿಲ್ಲವೆಂಬುದೇ ಇವರು ಮಾಡಿದ ನೆರವಾಗಿದೆ.

ಹೀಗಾಗಿ ಈ ಮನೆಗಿದ್ದ ದುಡಿಮೆಯ ಆಧಾರ ಹೊನ್ನೂರಮ್ಮ ಮಾತ್ರವೇ. ಅವರೂ ಹೊಲಗಳಲ್ಲಿ ಕೂಲಿ ಕೆಲಸಕ್ಕೆ ಹೋಗುವುದು. ಕಳೆದ 2-3 ವರ್ಷಗಳ ಬರದ ದಿನಗಳಲ್ಲಿ ಸಿಕ್ಕ ದುಡಿಮೆಗಳೆಷ್ಟು? ಕೈಗೆ ಬಂದದ್ದೆಷ್ಟು. ಬದುಕಿಗಾಗಿ ಪಡಬಾರದ ಪಡಪಾಟಲು ಅನ್ನಕ್ಕಾಗಿ- ತುಂಡು ಹೊಟ್ಟೆಗಾಗಿ ಮನೆ ಮನೆ ಅಲೆದದ್ದೇ ಹೆಚ್ಚು. ಅಜುಬಾಜಿನ ಪಕ್ಕದವರು-ಬಂಧುಗಳು ಅವರೆಲ್ಲರದು ಇಷ್ಟಲ್ಲದಿದ್ದರೂ ಇವರಿಗಿಂತ ಬಹಳವೇನು ಭಿನ್ನ ಅಲ್ಲಾ. ಇವರಲ್ಲಿ ಕೆಲವರಿಗೆ 100 ಜನ ಕಳೆದ 1-2 ತಿಂಗಳ ಹಿಂದೆ ಗಣಿಗಳಲ್ಲಿ ಕೆಲಸವಿತ್ತು. ಇದರಿಂದ ಇವರು ಪ್ರತಿವಾರವೂ ಗ್ರಾಮಕ್ಕೆ 30 ಸಾವಿರದಷ್ಟು ಆಧಾಯವನ್ನು ತರುತ್ತಿದ್ದರು. ಈಗ ಇವರು ಕೆಲಸ ಮಾಡುತ್ತಿದ್ದ ಗಣಿಯನ್ನು ಮುಚ್ಚಲಾಗಿದೆ. ಇದರ ಮಾಲೀಕರು 2-3 ತಿಂಗಳ ವೇತನ ನೀಡದೇ ಪರಾರಿಯಾಗಿದ್ದಾರೆ.

ಈ ಹರಿಜನ ಕೂಲಿಕಾರರಿಗೆ ಇನ್ನೀಗ ಸಾಲ ಕೊಡುವವರೂ ಇಲ್ಲ. ಈ ಕುಟುಂಬಗಳು ಈಗಾಗಲೇ ಸಾಲ ಮಾಡಿಕೊಂಡು ಗಂಭೀರ ಪರಿಸ್ಥಿತಿ ಎದುರಿಸುತ್ತಿವೆ. ಪರಿಣಾಮವಾಗಿ ಇಂತಹವರಿಂದ ಸಿಗುವ ಸಹಾಯ ಎಷ್ಟಿದ್ದೀತು ಮತ್ತು ಎಷ್ಟು ದಿನಗಳಿದ್ದೀತು.

ಕಳೆದ 2 ವರ್ಷಗಳ ಅವಧಿಯಲ್ಲಿ ನಮ್ಮ ಘನ ಸರ್ಕಾರ ನಡೆಸಿದ ಬರಗಾಲ ಕಾಮಗಾರಿ 2-3 ಬಾರಿ ಮಾತ್ರವೇ. ಅದೂ ಕೂಡ ಪ್ರತಿಬಾರಿ 3-4 ದಿನಗಳದ್ದೇ ಮಾತ್ರವೇ.

ಈ ವರ್ಷ ಅಳುತ್ತಾ ಬರುವ ಕೊಳವೆ ಬಾವಿ ನೀರಿಗೆ ಬಿತ್ತನೆಯಾದದ್ದು 50-60 ಎಕರೆಯಾರು ವಿದ್ಯುತ್ ಅಭಾವಕ್ಕೆ- ನೀರಿನ ತೊಂದರೆಗೆ ತುತ್ತಾಗುವ ಸಾಧ್ಯತೆಯೇ ಹೆಚ್ಚಾಗಿದೆ.

ಇನ್ನು ಶಿವ-ಶಿವಾ ಎಂದು ತಣ್ಣನೆ ನೀರು ಕುಡಿದು ಮಲಗೋಣವೆಂದರೆ ಒಳ್ಳೆಯ ಕುಡಿಯುವ ನೀರಿಗಾಗಿ 5 ಕಿ.ಮೀ ದೂರ ಸಾಗಬೇಕು. ಹತ್ತಿರದಲ್ಲಿ ಲಭ್ಯವಿರುವ ಗುಟುಕ- ನೀರು ಫ್ಲೋರೈಡ್ ವಿಶಮಿಶ್ರಣದಿಂದ ಕಲುಷಿತಗೊಂಡಿದೆ.

ಹರಗಿನ ಡೋಣಿಯ ಇಂತಹ ಧಾರುಣ ವಾತಾವರಣದಲ್ಲಿ ಕೂಲಿಕಾರ ಮಹಿಳೆ ಹೊನ್ನೂರಮ್ಮ ಕುಟುಂಬವನ್ನು ಹೇಗೆ ರಕ್ಷಿಸಿಯಾಳು? ಕಲುಷಿತ ನೀರು- ಮ್ಯಾಂಗನೀಸ್ ಧೂಳಿನಂಶದಿಂದ ಕೂಡಿದ ಗಾಳಿಯಷ್ಟು ದಿನ ಹೊನ್ನೂರಮ್ಮನಿಗೆ ನೆರವಾದವು. ದುಡಿದುಡಿದು ಮೂಳೆ ಚಕ್ಕಳವಾಗಿದ್ದ ಹೊನ್ನೂರಪ್ಪನನ್ನು ಉಳಿಸಿಯಾವು? 48 ರ ಹೊನ್ನೂರಮ್ಮನನ್ನು 60-70 ರ ಮುದಿತನಕ್ಕೆ, ಅಪೌಷ್ಠಿಕತೆಗೆ ದೂಡದೇ ಹೇಗೆ ಬಿಟ್ಟಾವು?

ಸಿಪಿಐ(ಎಂ) ಖಂಡನೆ

ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಯು.ಬಸವರಾಜ್, ಯು.ಎಸ್ ಶಿವಶಂಕರ್ ನೇತೃತ್ವದಲ್ಲಿ ಕೆ.ಗಾದಿಲಿಂಗಪ್ಪ, ಹೆಚ್.ಎಂ.ವಿಶ್ವನಾಥಸ್ವಾಮಿ 6 ಜನರ ನಿಯೋಗವೊಂದು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ ಬರದ ಬವಣೆಗೆ ತುತ್ತಾಗಿ ಹಸಿವಿನಿಂದ ಸಾವಿಗೀಡಾದ ಹೊನ್ನೂರಪ್ಪನ ಕುಟುಂಬಕ್ಕೆ ಕೇಂದ್ರ- ರಾಜ್ಯ ಸರ್ಕಾರಗಳು 5 ಲಕ್ಷ ರೂ.ಗಳ ಪರಿಹಾರ ನೀಡಬೇಕೆಂದು ಒತ್ತಾಯಿಸಿದೆ.

ಗ್ರಾಮದಲ್ಲಿ ಹಾಗೂ ಜಿಲ್ಲೆಯಾದ್ಯಂತ ಪ್ರತಿಯೊಂದು ಗ್ರಾಮ ಪಂಚಾಯ್ತಿ ಕೇಂದ್ರದಲ್ಲಿ ಮೇವಿನ ಬ್ಯಾಂಕ್ ತೆರೆಯಲು ಮತ್ತು ಪ್ರತಿಗ್ರಾಮದಲ್ಲಿ ಕನಿಷ್ಠ 1 ತಿಂಗಳಷ್ಟಾದರೂ ಬರಗಾಲ ಕಾಮಗಾರಿ ನಡೆಸಲು ಹಾಗೂ ಸರ್ಕಾರದ ಯಾವುದೇ ಕಾಮಗಾರಿಯಲ್ಲಿ ಯಂತ್ರ ನಿಷೇಧಿಸಲು ಒತ್ತಾಯಿಸಿದೆ.



ಸರ್ಕಾರದ ಮಧ್ಯ ಪ್ರವೇಶ !

ಹೊನ್ನೂರಪ್ಪನ ಸಾವಿನ ನಂತರ 1 ಲಕ್ಷ ರೂಪಾಯಿ ಅನುದಾನದಲ್ಲಿ ಗ್ರಾಮದಲ್ಲಿ ತುರ್ತಾರಿ ಕಾಮಗಾರಿ ಆರಂಭಿಸಿದೆ. 650 ಜನ ಕೂಲಿಕಾರರು ಭಾಗಿಯಾಗಿದ್ದಾರೆ. 1 ಲಕ್ಷ ರೂಪಾಯಿ ಕೇವಲ 3 ದಿನ ಕೆಲಸ ಕೊಡಬಹುದಾಗಿದೆ.

ಹಸಿವಿನ ಸಾವಾಗಿ ಸರ್ಕಾರ ಸ್ಪಂದಿಸಿತು. ಉಳಿದೆಡೆ ಕಾಮಗಾರಿ ನಡೆಯಲು ಹಸಿವಿನ ಸಾವುಗಳು ಘಟಿಸಬೇಕೆ?

ಹೊರಮೂಲ ಸಂಸ್ಕರಣೆ ರಾಜಕೀಯ


ಈಗ ವ್ಯಾಪಾರ ವಲಯದಲ್ಲಿ ಹೊಸದೊಂದು ಪರಿಭಾಷೆ ಜಾರಿಗೆ ಬಂದಿದೆ. ಬಿಸಿನೆಸ್ ಪ್ರೊಸೆಸ್ ಔಟ್ ಸೋರ್ಸಿಂಗ್ (ಬಿ.ಪಿ.ಓ) ಉದ್ದಿಮೆಗಳು ಹಲವು ಸಂಸ್ಕರಣಾ ಕೆಲಸವನ್ನು ತಮ್ಮಲ್ಲಿಯೇ ಮಾಡುವ ಬದಲು ಬೇರೆಯವರಿಂದ ಮಾಡಿಸುವುದು. ಈ ಸಂಸ್ಕರಣೆ ಮಾಡುವಲ್ಲಿ ಬಹಳ ಸ್ಪರ್ಧೆ ಇರುವುದರಿಂದ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಕೆಲಸ ಆಗುತ್ತದೆ ಎಂಬುದು ಬಂಡವಾಳಿಗರ ಅಂಬೋಣ. ಇದು ಈಗಾಗಲೇ ಹಲವು ವರ್ಷಗಳಿಂದ ಅಸ್ತಿತ್ವದಲ್ಲಿದ್ದರೂ ಈಗ ಅದರ ಪ್ರಮಾಣ ಬಹಳೇ ದೊಡ್ಡದಾಗುತ್ತಿದೆ. ಕಂಪ್ಯೂಟರ್ ಮತ್ತು ಸಂಬಂಧಿತ ಉದ್ದಿಮೆಗಳಿಂದ ಹಿಡಿದು ಹಣಕಾಸಿನ ವಲಯದವರೆಗೆ ಇದರ ವ್ಯಾಪ್ತಿ ಹರಡುತ್ತಿದೆ.

ಇದರಲ್ಲಿ ಬಂಡವಾಳಿಗರಿಗೆ ಅದರಲ್ಲೂ ವಿಶೇಷವಾಗಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ವಿಶೇಷ ಆಸಕ್ತಿ. ವೇತನಗಳು ಕಡಿಮೆ ಇರುವ ಮೂರನೇ ಜಗತ್ತಿನ ದೇಶಗಳಲ್ಲಿ ಹಲವು ಸಂಸ್ಕರಣೆಗಳನ್ನು ಮಾಡಿಸಿ ತಮ್ಮ ವ್ಯಾಪಾರ ಕುದುರಿಸಿಕೊಳ್ಳುವುದು ಅವರಿಗೆ ಸುಲಭ.

ಇಂತಹ ವಿಧಾನದಿಂದ ಅಮೆರಿಕದಂತಹ ದೇಶಗಳಲ್ಲಿ ಉದ್ಯೋಗಗಳು ಕಡಿಮೆಯಾಗಿವೆ. ತಮ್ಮ ಜನಗಳಿಗೆ ಹೊಡೆತ ಬಿದ್ದಿದೆ ಎಂಬ ಹುಯಿಲು ಅಮೆರಿಕದ ಹಲವು ರಾಜ್ಯಗಳಲ್ಲಿ ಎದ್ದಿವೆ. ಕೆಲವು ರಾಜ್ಯಗಳು ಈ ಹೊರಮೂಲ ಸಂಸ್ಕರಣೆ ಕೂಡದು ಎಂದು ಈಗಾಗಲೇ ಕಾನೂನುಗಳನ್ನು ಮಾಡಿಬಿಟ್ಟಿವೆಯಂತೆ. ಇದೀಗ ಸರ್ಕಾರಿ ವಲಯದಲ್ಲಿ ಚರ್ಚೆಯ ವಿಷಯ.

ವಾಜಪೇಯಿ ಸರ್ಕಾರದ ಮಂತ್ರಿ ಮಹೋದಯರುಗಳು ಇಂತಹ ಕಾನೂನು ಅಮೆರಿಕದ ಕೇಂದ್ರ ಸರ್ಕಾರದಿಂದ ಬರದಿರುವಂತೆ ಗೋಗರೆಯ ತೊಡಗಿದ್ದಾರಂತೆ. ತನ್ನ ಲಾಭವನ್ನೇ ನೋಡುವ ಅಭ್ಯಾಸದಲ್ಲಿರುವ ಅಮೆರಿಕದ ಸರ್ಕಾರ ಇವರ ಮಾತುಗಳನ್ನು ಕೇಳೀತೆ?

ಭಾರತದ ಸಂದರ್ಭದಲ್ಲೇ ಇಂತಹ ಸಂಸ್ಕರಣೆಯ ಸ್ಪರ್ಧೆಯಲ್ಲಿ ತೊಡಗಿರುವ ಹಲವು ಕಂಪನಿಗಳು ರಾತ್ರೋರಾತ್ರಿ ಬೆಲೆಗಳನ್ನು ಏರುಪೇರು ಮಾಡಿ ಪರಾರಿಯಾಗಿಬಿಡಬಹುದೆಂಬ ಭಯವೂ ಹಲವು ಕಡೆ ಕಂಡುಬಂದಿದೆ.



ಮಾಹಿತಿ ತಂತ್ರಜ್ಞಾನ ಮತ್ತು ಸಂಪರ್ಕ ಇಲಾಖೆ ಈಗಾಗಲೇ ಈ ರಾತ್ರೋರಾತ್ರಿ ಇಂತಹ ಕೆಲಸ ಮಾಡುವ (ಬೆಲೆ ಏರಿಸುವ ಇಳಿಸುವ) ಕಂಪನಿಗಳ ಬಗ್ಗೆ ಎಚ್ಚರಿಕೆ ನೀಡಿದೆ.

ಒಂದು ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ಬದಲಾವಣೆಯಾದರೆ ಅದು ಎಂತಹ ಅಲ್ಲೋಲಕಲ್ಲೋಲ ಉಂಟು ಮಾಡುತ್ತದೆ ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ

ವೆಪ್ಸಿ ಕುಡಿದ ನೌಕರನನ್ನು ಮನೆಗೆ ಕಳುಹಿಸಿದ ಕೋಕಾ ಕೋಲಾ!

ಕೋಕ ಕೋಲಾ ಮತ್ತು ಪೆಪ್ಸಿ ಕಂಪನಿಗಳ ನಡುವೆ ವೈಷಮ್ಯ ಎಂತಹದ್ದು ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ. ಅಮೆರಿಕದ ಈ ಎರಡು ಬಹುರಾಷ್ಟ್ರೀಯ ಕಂಪನಿಗಳು ಜಗತ್ತನ್ನೆ ತಮ್ಮ ರಣರಂಗವನ್ನಾಗಿ ಮಾಡಿಕೊಂಡಿರುವುದು ಗೊತ್ತಿರುವ ವಿಷಯುವೇ. ಆದರೆ ಅವುಗಳೊಳಗಿನ ದ್ವೇಷ ತೀರ ಅಸಹ್ಯಕರವಾದದ್ದು. ಕೆಲಸಗಾರರಿಗೆ ಅತ್ಯಂತ ನೋವಿನದ್ದು.

ಕಳೆದ ಹನ್ನೆರಡು ವರ್ಷಗಳ ಕಾಲ ಕೋಕಕೋಲಾ ಕಂಪನಿಗಾಗಿ ರಿಕ್ ಬ್ರನ್ಸನ್ ಎಂಬ ಕೆಲಸಗಾರ ಕೆಲಸ ಮಾಡುತ್ತಿದ್ದ

ಈ ಕೆಲಸಗಾರ ಪೆಪ್ಸಿ ಕುಡಿಯುತ್ತಿದ್ದ ಎಂದು ಯಾರೋ ವರದಿ ಮಾಡಿದರಂತೆ. ಕೋಕಕೋಲ ತಡಮಾಡಲೇ ಇಲ್ಲ. ರಿಕ್‌ನನ್ನು ಕೆಲಸದಿಂದ ತೆಗೆದು ಹಾಕಿ ಮನೆಗೆ ಕಳುಹಿಸಿತು.


ಹೇಗಿದೆ !?

ನೀರು, ವಿದ್ಯುತ್ ದರ ಏರಿಸಿ: ಕೇಂದ್ರದ ಸೂಚನೆ

ನೀರು, ವಿದ್ಯುತ್ ಎರಡೂ ಮೂಲಭೂತ ಅವಶ್ಯಕತೆಗಳು. ಸರ್ಕಾರಗಳು ಇವನ್ನು ಅವಶ್ಯ ಪ್ರಮಾಣದಲ್ಲಿ ಜನರಿಗೆ ಪೂರೈಸುವುದು ಸಾಧ್ಯವಾಗಿಲ್ಲ. ಹೀಗಿದ್ದರೂ ಪದೇ ಪದೇ ಇವುಗಳ ಬೆಲೆಗಳನ್ನು ಏರಿಸುವಲ್ಲಿ ಸರ್ಕಾರಗಳು ಹಿಂದೆ ಬಿದ್ದಿಲ್ಲ

ಈಗ ಕೇಂದ್ರದ ಯೋಜನಾ ಆಯೋಗ ರಾಜ್ಯ ಸರ್ಕಾರಗಳಿಗೆ ನೀರು ಮತ್ತು ವಿದ್ಯುತ್ ಬೆಲೆಗಳನ್ನು ಏರಿಸುವಂತೆ ಸೂಚನೆ ನೀಡಿದೆಯಂತೆ. ಈ ವಲಯಗಳ ಸುಧಾರಣೆಗೆ ಅವಶ್ಯ ಸಂಪನ್ಮೂಲ ಸಂಗ್ರಹಿಸುವ ಆವಶ್ಯಕತೆಯಿದೆ. ಆದ್ದರಿಂದ ಬೆಲೆ ಏರಿಸಿ ಎಂದು ಅದು ಸೂಚಿಸಿದೆ.

ಈ ವಲಯುಗಳನ್ನು ಇನ್ನೂ ಹೆಚ್ಚು ಉದಾರೀಕರಿಸಿ ಖಾಸಗೀಯವರಿಗೆ ಅವಕಾಶ ನೀಡುವುದು ಅದರ ಉದ್ದೇಶ. ಖಾಸಗಿ ಬಂಡವಾಳಿಗರು ಈ ವಲಯಕ್ಕೆ ಬಂದಾಗ ಬೆಲೆಗಳು ತೀರ ಕಡಿಮೆ ಇದ್ದರೆ ಅವರು ಲಾಭ ಮಾಡಿಕೊಳ್ಳುವುದು ಹೇಗೆ? ಆದ್ದರಿಂದ ಅವರ ಅನುಕೂಲಕ್ಕಾಗಿ ಬೆಲೆ ಏರಿಸುವುದು ಇದರ ಹಿಂದಿನ ಉದ್ದೇಶ ಎಂಬುದು ಸ್ಪಷ್ಟವಾಗಿಯೇ ಇದೆ ಅಲ್ಲವೆ?



ಕೆಲಸ ಕಳೆದುಕೊಂಡ ಕಾರ್ಮಿಕರು

ಭಾರತದ ಔದ್ಯಮಿಕ ವಲಯ ಅಲ್ಲೋಲಕಲ್ಲೋಲವಾಗಿದೆ. ಇದರ ಪರಿಣಾಮ ಕಾರ್ಮಿಕರ ಮೇಲೆ ಆಗಿದೆ. ಬಿಐಎಫ್ಆರ್‌ನ ಪ್ರಕಾರ ದೇಶದಲ್ಲಿ 1451 ಉದ್ದಿಮೆಗಳು (ದೊಡ್ಡ ಉದ್ದಿಮೆಗಳು) ಕಳೆದ ಮೂರು ವರ್ಷಗಳಲ್ಲಿ ರೋಗಗ್ರಸ್ತವಾಗಿವೆ.

ಸಾಲು	ರೋಗಗ್ರಸ್ತ ಉದ್ದಿಮೆಗಳು	ಮುಚ್ಚಿದ ಉದ್ದಿಮೆಗಳು	ಕಾರ್ಮಿಕರ ಸಂಖ್ಯೆ	ಕೆಲಸ ಕಳೆದು ಕೊಂಡವರ ಸಂಖ್ಯೆ
2000-01	429	127	259564	13487
2001-02	463	151	216216	11849
2002-03	559	652	136412	859

ಐಕ್ಯರಂಗ ಬಳಗ....

ಪುಟ 5 ರಿಂದ

ವಿಚಾರ ಸಂಕಿರಣದ ಉದ್ಘಾಟನೆಯನ್ನು ನೆರವೇರಿಸಿದವರು, ನಾಡಿನ ಖ್ಯಾತ ಬಂಡಾಯ ಸಾಹಿತಿಗಳು ಹಾಗೂ ವಿಧಾನ ಪರಿಷತ್ ಸದಸ್ಯರೂ ಆಗಿರುವ ಡಾ। ಎಲ್. ಹನುಮಂತಯ್ಯನವರು ವಿಷಯ ಮಂಡಿಸಿ, ಚರ್ಚೆಗೆ ಪ್ರೇರೇಪಿಸಿದವರು. ಐಕ್ಯರಂಗದ ಸಂಪಾದಕರಾಗಿರುವ ಎಸ್.ವೈ. ಗುರುಶಾಂತ್ ಅವರು ಬಿ.ಇ.ಎಫ್.ಐನ ರಾಜ್ಯ ಉಪಾಧ್ಯಕ್ಷರಾದ ರತ್ನಾಕರ್ ಶೆಣೈ ಪ್ರಾಸ್ತಾವಿಕ ಭಾಷಣದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಶೇಷ ಚರ್ಚೆಗಳು ಜರುಗಿ ವಿಚಾರ ಸಂಕಿರಣದ ಸ್ಥಳದಿಂದಲೇ ಚಂದಾಗಳನ್ನು ನೊಂದಾಯಿಸುವ ಕೆಲಸ ಪ್ರಾರಂಭವಾಯಿತು.

ಕೃಷ್ಣರಾಜಪುರದಲ್ಲಿ ಇಂಥದೇ ಮತ್ತೊಂದು ಸಭೆ

ಕೃಷ್ಣರಾಜಪುರದಲ್ಲಿ ಜುಲೈ 26 ರಂದು ಸಿ.ಪಿ.ಎ.ಸಿ. ಹಾಲಿನಲ್ಲಿ ನಡೆಯಿತು. ಪ್ರಸಕ್ತ ಮಾಧ್ಯಮ ಪಾತ್ರ ಮತ್ತು ಐಕ್ಯರಂಗದ ಅಗತ್ಯದ ಬಗ್ಗೆ ಸಂಪಾದಕರಾದ ಎಸ್.ವೈ. ಗುರುಶಾಂತ್ ವಿವರಿಸಿದರು. ಸಭೆಯಲ್ಲಿ ನೂರಾರು ಓದುಗರು ಹಿತೈಷಿಗಳು ಭಾಗವಹಿಸಿ ಮುಕ್ತವಾಗಿ ಸಂವಾದದಲ್ಲಿ ತೊಡಗಿದರು. ಪತ್ರಿಕೆಯ ಪ್ರಸಾರ ಹೆಚ್ಚಿಸುವ ಕಾರ್ಯಯೋಜನೆ ರೂಪಿಸಲಾಯಿತು. ಸಭೆಯಲ್ಲಿ ಜಯರಾಂ, ಗೌರಮ್ಮ, ಡೆನೀಸ್, ವಾರಿಯರ್, ದಲಿತ ಚಳುವಳಿ ನಾಯಕ ದೊಡ್ಡಯಲ್ಲಪ್ಪ ಮುಂತಾದವರು ಭಾಗವಹಿಸಿ ಮಾತವಾಡಿದರು. ಸಂಚಾಲಕರಾದ ಗೋಪಿನಾಥ್ ಕೋದಂಡರಾಮ್ ಸ್ವಾಗತಿಸಿ - ವಂದಿಸಿದರು.

ಮಂಗಳೂರಿನಲ್ಲಿ ಐಕ್ಯರಂಗ ಬಳಗದ ಸಭೆ

ಜೂನ್ 21 ರಂದು ಮಂಗಳೂರಲ್ಲಿ ವಿಶೇಷ ಆಹ್ವಾನಿತರ ಸಭೆ

ಮಂಗಳೂರಿನಿಂದ ಹೊರಡುತ್ತಿದ್ದ ಐಕ್ಯರಂಗ ಪತ್ರಿಕೆ ಇಂದು ರಾಜ್ಯ ಕೇಂದ್ರದಿಂದ ಉತ್ತಮ ರೀತಿಯಲ್ಲಿ ಹೊರಬರುತ್ತಿದ್ದು ದುಡಿಯುವ ವರ್ಗದ ಜನರ ಧ್ವನಿಯಾಗಿ ವ್ಯಾಪಕ ಪ್ರಸಾರ ಹೊಂದಿದ್ದು ಇನ್ನಷ್ಟು ಪ್ರಸಾರ ಹೆಚ್ಚಿಸಬೇಕೆಂದು ಎಲ್ಲರಲ್ಲೂ ವ್ಯಕ್ತವಾಯಿತು. ಜಾಗತೀಕರಣದ ಧಾಳಿ ಪತ್ರಿಕೋಧ್ಯಮದ ಮೇಲೆಯೂ ಆಗಿದ್ದು ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಬಗ್ಗೆ ಅರಿವು ಮೂಡಿಸಲು, ವಿಚಾರ ಮಂಥನ ಮಾಡಲು ಹೋರಾಟನಡೆಸಲು ಐಕ್ಯರಂಗದಂತಹ ಪತ್ರಿಕೆ ಅನಿವಾರ್ಯ ಎಂದು ಭಾಗವಹಿಸಿದ ಎಲ್ಲರೂ ಅಭಿಪ್ರಾಯ ಪಟ್ಟರು.


ಐಕ್ಯರಂಗ ಪತ್ರಿಕೆಯ ಬರಹ, ಪ್ರಚಾರ ಇತ್ಯಾದಿ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆಗಳನ್ನು ನೀಡಿದರು.

ಐಕ್ಯರಂಗ ಪತ್ರಿಕೆಯ ಸಂಪಾದಕ ಎಸ್.ವೈ. ಗುರುಶಾಂತ್‌ರವರು ಮಾತನಾಡುತ್ತಾ ದುಡಿಯುವ ಜನರ ಪ್ರಾಣಮಿತ್ರ 'ಐಕ್ಯರಂಗ' ಇಡೀ ರಾಜ್ಯದ ಶೋಷಿತ ಜನರ, ಸಾಮಾಜಿಕ ನ್ಯಾಯದಿಂದ ವಂಚಿತರಾದ ಜನರ, ದಲಿತ ಚಳುವಳಿಯ ಬಗ್ಗೆ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಆಳುವ ವರ್ಗದ ಜನ ವಿರೋಧಿ ನೀತಿಗಳ ಬಗ್ಗೆ ಜನಾಂದೋಲನ ರೂಪಿಸಿಕೊಂಡು ಬೆಳೆದುನಿಂತಿರುವ ಪತ್ರಿಕೆಯ ಬರಹಗಳ ಬಗ್ಗೆ ಬೆಳಕುಚೆಲ್ಲಿ ಐಕ್ಯರಂಗ ಪತ್ರಿಕೆಯ ಪ್ರಸಾರ ಹೆಚ್ಚಿಸಲು ಸಹಕಾರ ಕೋರಿದರು.

ಐಕ್ಯರಂಗ ಬಳಗದ ವಸಂತ ಆಚಾರಿ ಸ್ವಾಗತಿಸಿ, ಕೆ. ಯಾದವಶೆಟ್ಟಿ ವಂದಿಸಿದರು.

'ಐಕ್ಯರಂಗ' ಪತ್ರಿಕೆ ಬಳಗದ ದ. ಕ. ಜಿಲ್ಲೆ, ಮೈದಾನ ರಸ್ತೆ, ಮಂಗಳೂರು -1 ರಿಂದ ಕಾರ್ಯನಿರ್ವಹಿಸಲಿದ್ದು ಪತ್ರಿಕೆಗೆ ವರದಿ, ಬರಹ ಕಳುಹಿಸುವವರು, ಪತ್ರಿಕೆಯ ಬಿಡಿ ಪ್ರತಿ ಚಂದಾ ಪಡೆಯುವವರು ಈ ಕಚೇರಿಗೆ ಸಂಪರ್ಕಿಸಬಹುದು. ವಸಂತ ಆಚಾರಿ, ಸಂಚಾಲಕರು, ಐಕ್ಯರಂಗ ಬಳಗ, ಫೋನ್ : 2422163.

ಮೈಸೂರು : ಮೈಸೂರಿನಲ್ಲಿಯೂ ಜೂನ್ 27 ರಂದು ಬಳಗದ ಸಭೆ ಸೇರಿ ಪ್ರಸಾರ ಹೆಚ್ಚಿಸಲು ಕಾರ್ಯಯೋಜನೆ ರೂಪಿಸಿದೆ.



ಜಾಗತೀಕರಣ ಆಂದೋಲನ ಮತ್ತು ಔಷಧಿ

ಜಾಗತೀಕರಣ ಔಷಧಿ ಕ್ಷೇತ್ರದ ಮೇಲೆ ಉಂಟು ಮಾಡಿದ ಪರಿಣಾಮಗಳನ್ನು ವಿವರಿಸಿದ್ದಾರೆ ಖ್ಯಾತ ಜನವೈದ್ಯರಾದ ಡಾ. ಪ್ರಕಾಶ್ ಸಿ.ರಾವ್‌ರವರು

ಇಂದು ಜಾಗತೀಕರಣ ಪ್ರಕ್ರಿಯೆ ಭಾರತದ ಅರ್ಥ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಇದೇ ಜಾಗತೀಕರಣ ವ್ಯವಸ್ಥೆ ಆರೋಗ್ಯ ಕ್ಷೇತ್ರದ ಮೇಲೆ ಉಂಟುಮಾಡಿದ ಪರಿಣಾಮವನ್ನು ತಿಳಿಯೋಣ

ಸಾರ್ವಜನಿಕ ಆರೋಗ್ಯ ಸೇವೆಯನ್ನು ಕಡಿಮೆ ಮಾಡುತ್ತಿದೆ, ಆರೋಗ್ಯ ಸೇವೆಗಳನ್ನು ಖಾಸಗೀಕರಣಗೊಳಿಸುತ್ತಿದೆ.

ಸರ್ಕಾರ ಜನಾರೋಗ್ಯದ ಜವಾಬ್ದಾರಿಯನ್ನು ಕಡಿಮೆ ಮಾಡುವಂತೆ ಕ್ರಮೇಣ ಕೈಬಿಡುವಂತೆ ಆದೇಶಿಸುತ್ತಿದೆ.

ಆರೋಗ್ಯ ನೀತಿ ಐ.ಎಂ.ಎಫ್, ವಿಶ್ವ ಬ್ಯಾಂಕ್ ಆದೇಶದಂತೆ ರೂಪುಗೊಳ್ಳುತ್ತಿದೆ.

ಸಾರ್ವಜನಿಕ ಸಂಸ್ಥೆಗಳಲ್ಲಿ ಸೇವಾ ಶುಲ್ಕ ವಿಧಿಸಿ ಅದು ಬಡವರಿಗೆ ತಲುಪದಂತೆ ಮಾಡಲಾಗಿದೆ

ಇದರ ಪರಿಣಾಮವಾಗಿ

ಸಾಕ್ರಾಮಿಕ ರೋಗಗಳ ಹೆಚ್ಚಳ

ಪೌಷ್ಟಿಕ ಕೊರತೆಯುಂಟಾಗುವ ರೋಗಗಳ ಹೆಚ್ಚಳ

ಔಷಧಿ ಬೆಲೆಗಳ ಹೆಚ್ಚಳ

ಝಿಂಕ್ (ಸತುವು)

90 ರ ದಶಕದಲ್ಲಿ ಅನೇಕ ಕಂಪನಿಗಳು ಸತುವಿನ ಕ್ಯಾಪ್ಸೂಲ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದವು. ಯಥಾಪ್ರಕಾರ ಈ ಔಷಧಿಗಳನ್ನು ಮಾರಲು ಎಲ್ಲಾ ತರಹದ ಸುಳ್ಳುಗಳನ್ನು ಸೃಷ್ಟಿ ಮಾಡಲಾಯಿತು. ಸಾಮಾನ್ಯವಾಗಿ ವೈದ್ಯರು ಔಷಧಿ ಕಂಪನಿಗಳ 'ಕ್ಲೇಂ'ಗಳನ್ನು ನಿಜ ಎಂದು ನಂಬುತ್ತಾರೆ. ಇದಲ್ಲದೆ ಈ ಔಷಧಿ ಕಂಪನಿಗಳಿಗೆ ಔಷಧಿ ನಿಯಂತ್ರಣದ ಸಹಾಯ ಹಸ್ತವೂ ದೊರಕಿತು. ಇದರ ಬಗ್ಗೆ ಅಗತ್ಯಮಾಹಿತಿ ತಿಳಿಯೋಣ.

ಝಿಂಕ್ ದೇಹದ ಬೆಳವಣಿಗೆಗೆ ಅಗತ್ಯ. ಝಿಂಕ್ ಕೊರತೆ ಇದ್ದಲ್ಲಿ ಮಾತ್ರ ಔಷಧಿ ರೂಪದಲ್ಲಿ ಅದು ಪರಿಣಾಮಕಾರಿ ಝಿಂಕ್ ಕ್ಯಾಪ್ಸೂಲ್‌ಗಳನ್ನು ಆರೋಗ್ಯ ಸುಧಾರಿಸಲು ಉಪಯೋಗಿಸುವ ಅಗತ್ಯವಿಲ್ಲ. ಆದ್ದರಿಂದ ಝಿಂಕ್ ಕ್ಯಾಪ್ಸೂಲ್‌ಗಳನ್ನು ವೈದ್ಯರ ಆದೇಶದಂತೆಯೇ ಉಪಯೋಗಿಸಿರಿ.

ಗರ್ಬಿಣಿ ಮಹಿಳೆ ಹಾಗೂ ಭ್ರೂಣದ ಆರೋಗ್ಯತೆಗೆ ಝಿಂಕ್ ಕ್ಯಾಪ್ಸೂಲ್ ರೂಪದಲ್ಲಿ ಉಪಯೋಗಿಸುವ ಅಗತ್ಯವಿಲ್ಲ. ಮಾರುಕಟ್ಟೆಯಲ್ಲಿ ದೊರಕುವ ಝಿಂಕ್ ಕ್ಯಾಪ್ಸೂಲ್‌ಗಳು


ಕೈನಿಟೋನ್ ಪ್ಲಸ್, ಟ್ರೈಕಾಲ್ ಡಿ ಬೆಕೋ ಝಿಂಕ್, ಬೀಪ್ಲೆಕ್ಸ್ ಝೀ ಸ್ಟ್ರೆಸ್-ಝಡ್ ಎನ್ ಝವಿಟ್

ಪ್ಯಾಲೆಸ್ಟೇನರ ಕೊಲೆಗಡುಕ ಶಾರೋನ್ ನಿನಗೆ ಪ್ರವೇಶವಿಲ್ಲ !

ಶರತ್ ಚಂದ್ರ

ಇಸ್ರೇಲಿ ಪ್ರಧಾನಿ ಶಾರೋನ್ ಭಾರತಕ್ಕೆ ಕೆಲವೇ ವಾರಗಳಲ್ಲಿ ಭೇಟಿ ನೀಡುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಈ ಭೇಟಿ ಭಾರತದ ಪ್ರಜಾಪ್ರಭುತ್ವ, ಸ್ವತಂತ್ರ ವಿದೇಶಾಂಗ ನೀತಿಗೆ ನಾಚಿಕೆಗೇಡಿನ ವಿಷಯ. ಇದು ಹಲವು ದಶಕಗಳ ಕಾಲ ಪ್ಯಾಲೆಸ್ಟೇನ್ ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲಿಸಿದ ಭಾರತದ ನೀತಿಗೆ ದ್ರೋಹ ಮಾಡುವ ಕ್ರಮ. ಪ್ರಧಾನಿ ಶಾರೋನ್ ಸ್ವತಃ ಪ್ಯಾಲೆಸ್ಟೇನ್ ನಿರಾಶ್ರಿತ ಕ್ಯಾಂಪ್‌ನಲ್ಲಿ ನರಮೇಧದ ಆರೋಪಿ.

ಬಿಜೆಪಿ-ಎನ್‌ಡಿಎ ಸರ್ಕಾರ ಬಂದಾಗಿನಿಂದ ಭಾರತ ಸರ್ಕಾರ ಇಸ್ರೇಲಿನತ್ತ ವಾಲುತ್ತಿದೆ. ಹಿಂದೆ ಪ್ಯಾಲೆಸ್ಟೇನ್ ಸ್ವಾತಂತ್ರ್ಯ ಸ್ವಯಂ ನಿರ್ಧಾರ ಹಕ್ಕನ್ನು ಇಸ್ರೇಲ್ ದಶಕಗಳ ಕಾಲ ತುಳಿತಕ್ಕಿರುವ ಹಿನ್ನೆಲೆಯಲ್ಲಿ ಇಸ್ರೇಲ್ ಜತೆ ಮೊದಲ ದಶಕಗಳಲ್ಲಿ ರಾಜತಾಂತ್ರಿಕ ಸಂಬಂಧ ಸಹ ಇರಲಿಲ್ಲ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಎಲ್ಲಾ ಅಂತರ್ರಾಷ್ಟ್ರೀಯ ಸಂಘಟನೆಗಳಲ್ಲಿ ಭಾರತ ಪ್ಯಾಲೆಸ್ಟೇನ್ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸುತ್ತಾ ಬಂದಿದೆ.



ಇಸ್ರೇಲಿ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಖಂಡಿಸುತ್ತಾ ಬಂದಿತ್ತು. ಆದರೆ ಈಗ ಅದೆಲ್ಲಾ ತಲೆಕೆಳಗಾಗಿದೆ. ಇಸ್ರೇಲಿ ಪ್ರಧಾನಿ ಶಾರೋನ್‌ಗೆ ಭಾರತದ ಭೇಟಿಗೆ ಆಹ್ವಾನ ಈ ನೀತಿಗೆ ದ್ರೋಹದ ಪರಕಾಷ್ಠೆ.

ಇತ್ತೀಚೆಗೆ ಭಾರತದ ಮುಖ್ಯ ಭದ್ರತಾ ಸಲಹೆಗಾರ ಬ್ರಿಜೇಶ್ ಮಿಶ್ರಾ ನ್ಯೂಯಾರ್ಕ್‌ನಲ್ಲಿ ಅಮೆರಿಕನ್ ಜ್ಯೂಯಿಶ್ ಕಮಿಟಿಯ ವಾರ್ಷಿಕ ಸಭೆಯಲ್ಲಿ ಭಾಗವಹಿಸಿದ್ದು, ಅಲ್ಲಿ ಭಾರತ - ಅಮೆರಿಕ-ಇಸ್ರೇಲಿ ಕೂಟ ರಚನೆಗೆ ಕರೆ ನೀಡಿದ್ದು ಭಾರತದ ಈವರೆಗಿನ ಘೋಷಿತ ವಿದೇಶಿ ನೀತಿಗೆ ದ್ರೋಹವೆ. ಪ್ರಜಾಪ್ರಭುತ್ವ-ಸ್ವಾತಂತ್ರ್ಯ-ಸಮಾನತೆಯನ್ನು ಎಲ್ಲಾ ದೇಶಗಳಲ್ಲಿ ಬಯಸುವ, ಬೆಂಬಲಿಸುವ ಭಾರತದ ಸ್ವತಂತ್ರ ವಿದೇಶಾಂಗ ನೀತಿಗೆ ಇದರಿಂದ ಅರ್ಥವಿಲ್ಲದಂತಾಗಿದೆ.

ಕೋಮುವಾದಿ-ಫ್ಯಾಸಿಸ್ಟ್ ನಂಟು

ಬಿಜೆಪಿ ಸರ್ಕಾರ ಇಸ್ರೇಲ್ ಜತೆ ನಿಕಟ ಸಂಬಂಧ ಹೊಂದಿ, ಕೂಟ ರಚಿಸಲು ತುದಿಗಾಲಲ್ಲಿ ತೊರೆಯುವುದಕ್ಕೆ ಬಲವಾದ ಕಾರಣಗಳಿವೆ. ಮೊದಲನೆಯದು ಇಸ್ರೇಲಿನ ಆಳುವ ಪಕ್ಷ ಲಿಕುಡ್ (ಕಳೆದ ಹಲವು ವರ್ಷಗಳಿಂದ ಅಧಿಕಾರದಲ್ಲಿದೆ) ಬಿಜೆಪಿ ಸಹ ಕೋಮುವಾದಿ-ಫ್ಯಾಸಿಸ್ಟ್ ಸಿದ್ಧಾಂತ ಹೊಂದಿರುವ ಪಕ್ಷ. ದೇಶದ ಎಲ್ಲಾ ಸಮಸ್ಯೆಗಳಿಗೆ ಅಲ್ಪಸಂಖ್ಯಾತ ಮುಸ್ಲಿಮರು ಕಾರಣ. ಅವರನ್ನು ಹೊರಹಾಕಿಸಿಬಿಟ್ಟರೆ ಎಲ್ಲಾ ಸಮಸ್ಯೆ ಪರಿಹಾರವಾಗಿ ಬಿಡುತ್ತದೆ ಎಂದು ಜನರನ್ನು ಮರುಳು ಮಾಡಿರುವುದರ ಮೇಲೆ ಆಧಾರಿತವಾಗಿದೆ ಇವರ ರಾಜಕೀಯ. ಬಿಜೆಪಿ ಮತ್ತು ಅದರ ಹಿಂದಿನ ಅವತಾರ ಜನಸಂಘ-ಇವುಗಳಿಗೆ ಲಿಕುಡ್ ಮತ್ತು ಇಸ್ರೇಲಿ ಪ್ರಭುತ್ವ ಮಾದರಿಯಾಗಿತ್ತು. ಇಡೀ ಜಗತ್ತೇ ಇಸ್ರೇಲನ್ನು ಖಂಡಿಸುತ್ತಿರುವಾಗ ಇವರು ಅದನ್ನು ಹೊಗಳುತ್ತಿದರು.

ಅಮೆರಿಕದ ತಾಳಕ್ಕೆ ಕುಣಿತ

ಇಸ್ರೇಲ್ ಅಮೆರಿಕ ಅತ್ಯಂತ ನಿಕಟ (ಬಹುಶಃ ಏಕಮಾತ್ರ) ಸಹಚರ ದೇಶ ವಿಶ್ವದಲ್ಲಿ. ಇಸ್ರೇಲ್ ಜತೆ ವ್ಯೂಹಾತ್ಮಕ ದೂರಗಾಮಿ ಸಂಬಂಧ ಹೊಂದಿದರೆ, ಅಮೆರಿಕ-ಇಸ್ರೇಲಿ ಕೂಟ ಸೇರುವುದು ಸುಲಭವಾಗುವುದು ಎಂದು ಬಿಜೆಪಿ ಸರ್ಕಾರದ ಹುಣಿಕೆ. ಅಮೆರಿಕ ಚೀನಾ-ರಶ್ಯಾಗಳಿಗೆ ವಿರುದ್ಧವಾಗಿ ಇಂತಹ ಒಂದು ಕೂಟದ ರಚನೆಯ ಉದ್ದೇಶ ಹೊಂದಿದ್ದು ಆ ಬಗ್ಗೆ ಭಾರತದ ಮೇಲೆ ಒತ್ತಡ ಹೇರುತ್ತಿದೆ. ಇಂತಹ ಕೂಟದಲ್ಲಿ ಭಾರತದಂತಹ ದೊಡ್ಡ ದೇಶವಿದ್ದರೆ ಆ ಕೂಟಕ್ಕೆ ಘನತೆಯೂ ಬರುತ್ತದೆ. ಕಾರ್ಯಾಚರಣೆಗೂ ಸುಲಭವಾಗುತ್ತದೆ ಎಂಬುದು ಅಮೆರಿಕದ ಹುಣಿಕೆ. ಅಮೆರಿಕದ ಈ ತಾಳಕ್ಕೆ ಬಿಜೆಪಿ ಸರ್ಕಾರ ಕುಣಿಯುತ್ತಿದೆ. ಅಮೆರಿಕ-ಭಾರತ-ಇಸ್ರೇಲ್ ಮೂವರಿಗೂ ಮುಸ್ಲಿಂ. ಮೂಲಭೂತವಾದ ಭಯೋತ್ಪಾದನೆ ಮುಖ್ಯ ಶತ್ರು ಎಂದು ಅಡ್ವಾಣಿ-ಬ್ರಿಜೇಶ್‌ಗಳು ಹೇಳೋಕ್ಕೆ ಶುರು ಮಾಡಿದ್ದಾರೆ. ಪ್ಯಾಲೆಸ್ಟೇನಿ ಸ್ವಾತಂತ್ರ್ಯ ಹೋರಾಟವನ್ನು ಕಾಶ್ಮೀರಿ ಭಯೋತ್ಪಾದಕತೆ ಜತೆ ತಪ್ಪಾಗಿ ತಳಕು ಹಾಕಲಾಗುತ್ತಿದೆ.

ಇಸ್ರೇಲಿ ಪ್ರಧಾನಿ ಶಾರೋನ್ ಭಾರತ ಭೇಟಿ

ಘನಿಷ್ಟವಾಗುತ್ತಿರುವ ಮಿಲಿಟರಿ ಸಂಬಂಧ

ಈಗಾಗಲೇ ಇಸ್ರೇಲ್ ಜತೆ ಮಿಲಿಟರಿ ಸಂಬಂಧ ಘನಿಷ್ಟವಾಗಿದೆ. ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ, ಅದರಲ್ಲೂ ಕಾರ್ಗಿಲ್ ಯುದ್ಧದ ಸಮಯದ ನಂತರ ಇಸ್ರೇಲ್ ಮಿಲಿಟರಿ ಸರಕುಗಳ ವ್ಯಾಪಾರ ಏರಿದೆ. ಈಗ ಇಸ್ರೇಲ್ (ರಶ್ಯಾದ ನಂತರ)ಭಾರತದ ಜತೆ ಮಿಲಿಟರಿ ವಾಣಿಜ್ಯ ಹೊಂದಿರುವ ಎರಡನೇ ಅತಿದೊಡ್ಡ ದೇಶ. ಕಾರ್ಗಿಲ್ ಯುದ್ಧದ ಸಮಯದಲ್ಲಿ ಹಲವಾರು ಆಧುನಿಕ ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಬಹಳ ಕಡಿಮೆ ಸಮಯದಲ್ಲಿ ಸರಬರಾಜು ಮಾಡಿತು. ಯಾವುದೇ ಯುದ್ಧದಲ್ಲಿ ತೊಡಗಿರುವ ದೇಶಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವುದು ಅಂತರ್ರಾಷ್ಟ್ರೀಯ ಕಾನೂನಿಗೆ ವಿರುದ್ಧ. ಇಸ್ರೇಲ್ ಎಂದೂ ಯಾವುದೇ ಅಂತರ್ರಾಷ್ಟ್ರೀಯ ಕಾನೂನುಗಳ ಬಗ್ಗೆ ತಲೆ ಕೆಡೆಸಿಕೊಂಡಿಲ್ಲ. ಎಲ್ಲಾ ಹಂತಗಳಲ್ಲಿ ಇಸ್ರೇಲ್ ಜತೆ ಮಿಲಿಟರಿ ಸಮಾಲೋಚನೆ, ತರಬೇತಿ ನಡೆಯುತ್ತಿದೆ. ಇತ್ತೀಚೆಗೆ ಭಾರತದ ನಾಲ್ಕು ಬಟಾಲಿಯನ್ (ಸುಮಾರು 3 ಸಾವಿರ ಸೈನಿಕರು) ವಿಶೇಷ ಭಯೋತ್ಪಾದಕ ನಿಗ್ರಹಣ ತರಬೇತಿಗೆ ಇಸ್ರೇಲಿಗೆ ತೆರಳಿದ್ದಾರೆ.

ಇಸ್ರೇಲ್ ಈಗಲೂ ಅಂತರ್ರಾಷ್ಟ್ರೀಯ ಅಸ್ಪೃಶ್ಯ ದೇಶ

ಇದರಲ್ಲಿ ತಪ್ಪೇನು ಎಂದಿರಾ! ಇಸ್ರೇಲ್ ಈಗಲೂ ಅದರ ಪ್ರಭುತ್ವ ಭಯೋತ್ಪಾದಕ ಕೋಮುವಾದಿ-ಫ್ಯಾಸಿಸ್ಟ್ ಸ್ವರೂಪದಿಂದಾಗಿ ಅಂತರ್ರಾಷ್ಟ್ರೀಯವಾಗಿ 'ಅಸ್ಪೃಶ್ಯ' ಎಂದು ಪರಿಗಣಿಸಲ್ಪಡುವ ದೇಶ. ಅಮೆರಿಕ ಬಿಟ್ಟರೆ ಯಾವ ದೇಶವೂ ಇಸ್ರೇಲ್ ಜತೆ ಘನಿಷ್ಟ ಸಂಬಂಧ ಬಯಸುವುದಿಲ್ಲ. ಯುರೋಪಿಯನ್ ಒಕ್ಕೂಟ ಸಹ. ಇಸ್ರೇಲ್ ಅಪರಾಧಿಗಳನ್ನು ಬಂಧಿಸಿ ವಿಶ್ವಸಂಸ್ಥೆ ಭದ್ರತಾ ಸಮಿತಿ, ಮತ್ತಿತರ ಸಂಘಟನೆಗಳು ಕೈಗೊಂಡ ನಿರ್ಣಯಗಳ ದೊಡ್ಡ ಪಟ್ಟಿಯೇ ಇದೆ. ಖಂಡನೆಗೆ ಒಳಪಡಿಸುವ ಮತ್ತು ಜಾರಿಯಾಗದಿರುವ ವಿಶ್ವಸಂಸ್ಥೆಯ ನಿರ್ಣಯಗಳನ್ನು ತನ್ನ ವಿರುದ್ಧ ಹೊಂದಿರುವ ದೇಶಗಳಲ್ಲಿ ಇಸ್ರೇಲ್ ಮೊದಲನೆಯದು. ಇತ್ತೀಚೆಗೆ ಜಿನಿವಾದಲ್ಲಿ ನಡೆದ ಮಾನವ ಹಕ್ಕು ಕಮಿಶನ್ (ವಿಶ್ವಸಂಸ್ಥೆಯ ಅಂಗಸಂಸ್ಥೆ) ಆದರ ಕಾರ್ಯ ಕಲಾಪಗಳ ಮೂರನೇ ಒಂದು ಭಾಗ ಮೀಸಲಾಗಿಟ್ಟಿದ್ದದ್ದು ಇಸ್ರೇಲನ್ನು ಖಂಡಿಸಿ ಎಂಟು ನಿರ್ಣಯಗಳನ್ನು ಪಾಸು ಮಾಡಿತು. ಖಂಡನೆಗೆ ಒಳಗಾಗುವ ಬೇರೆ ಯಾವ ದೇಶದ ಮೇಲೂ ಒಂದಕ್ಕಿಂತ ಹೆಚ್ಚು ನಿರ್ಣಯಗಳಿರಲಿಲ್ಲ. ಹೀಗಿದೆ ಇಸ್ರೇಲ್‌ನ ಕ್ರಿಮಿನಲ್ ರೆಕಾರ್ಡ್!

ರಕ್ತ ಸಿಕ್ತ ಕೈಗಳ ಶಾರೋನ್! ಇಲ್ಲಿ ಪ್ರವೇಶವಿಲ್ಲ!!

ಭಾರತಕ್ಕೆ ಭೇಟಿ ನೀಡುತ್ತಿರುವ ಶಾರೋನ್ ಕೈಗಳು ಪ್ಯಾಲೆಸ್ಟೇನ್ನರ ರಕ್ತದಿಂದ ಒದ್ದೆಯಾಗಿವೆ. 1953 ರಲ್ಲಿ ಕಿಬಿಯಾ ಎಂಬ ಪಶ್ಚಿಮ ದಂಡೆಯ ಹಳ್ಳಿಯಲ್ಲಿ 69 ಜನರ ನರಮೇಧದಲ್ಲಿ ಶಾರೋನ್ ಸ್ವತ ಭಾಗಿಯಾಗಿದ್ದ. 1982 ರಲ್ಲಿ ಬೀರುತ್ ನಗರದ ಬಳಿಯ ಪ್ಯಾಲೆಸ್ಟೇನ್ ನಿರಾಶ್ರಿತ ಕ್ಯಾಂಪುಗಳಲ್ಲಿ ಸುಮಾರು 3500 ಪ್ಯಾಲೆಸ್ಟೇನ್ನರ ನರಮೇಧದಲ್ಲಿ ಶಾರೋನ್ ಪಾತ್ರಕ್ಕೆ ಆತನನ್ನು ಬೆಲ್ಜಿಯಂ ಕೋರ್ಟ್ ಒಂದರಲ್ಲಿ 'ಯುದ್ಧ ಅಪರಾಧಿ' ಎಂದು ಆಪಾದಿಸಲಾಗಿದೆ. ಕೇಸು ನಡೆಯುತ್ತಿದೆ. ಲಿಕುಡ್ ಪಕ್ಷದಿಂದ ಇಸ್ರೇಲಿ ಪ್ರಧಾನಿಯಾದ ಮೂವರು ಪ್ರಧಾನಿಗಳ ಮೇಲೆ (ಶಾರೋನ್ ಸ್ವತಃ, ಬೆಗಿನ್, ಶಮೀರ್) ಇಂತಹ 'ಯುದ್ಧ ಅಪರಾಧ'ಗಳ ಆಪಾದನೆಗಳಿವೆ.

ಇಂತಹ ದೇಶದ ಇಂತಹ ಪ್ರಧಾನಿ ಭಾರತಕ್ಕೆ ಭೇಟಿ ನೀಡುವುದು ನಾವು ಅವರನ್ನು ಅತಿಥಿಗಳಾಗಿ ಸನ್ಮಾನ ಮಾಡುವುದು ಅಪಮಾನಕರ. 'ಶಾರೋನ್ ಹಿಂದೆ ಹೋಗು' ಎಂದು ಇಡೀ ದೇಶ ಒಕ್ಕೊರಲಿನಿಂದ ಕೂಗಬೇಕಾಗಿದೆ.

ಐನ್‌ಸ್ಟೀನ್ ಬೆಗಿನ್ ಅಮೆರಿಕ ಭೇಟಿ ವಿರೋಧಿಸಿದಾಗ....

ಏನೇ ಇರಲಿ ವಿದೇಶಿ ನಾಯಕರ ಭೇಟಿ ವಿರೋಧಿಸುವುದು ಅಸಹಜ, ಅಸಭ್ಯ, ಅನಾಗರಿಕತೆ ಅಲ್ಲವೆ ಎನ್ನಬಹುದು! ಸಾಮಾನ್ಯವಾಗಿ ಹೌದು. ಆದರೆ ಇಸ್ರೇಲ್ ಮತ್ತು ಲಿಕುಡ್ ಪಕ್ಷದ ಫ್ಯಾಸಿಸ್ಟ್ ನಾಯಕರ ಸಂದರ್ಭದಲ್ಲಿ ಅಲ್ಲ. ಇದಕ್ಕೆ ಚಾರಿತ್ರಿಕ ಪೂರ್ವ ಉದಾಹರಣೆ ಸಹ ಇದೆ. 1948 ರಲ್ಲಿ ಆಗಿನ ಲಿಕುಡ್ ಪಾರ್ಟಿ ನಾಯಕ ಬೆಗಿನ್ ಅಮೆರಿಕದಲ್ಲಿ ಪಕ್ಷಕ್ಕೆ ನಿಧಿ ಸಂಗ್ರಹಿಸಲು ಭೇಟಿ ನೀಡಲು ನಿರ್ಧರಿಸಿದಾಗ ಸ್ವತಃ ಜ್ಯೂ ಆಗಿದ್ದ ಐನ್‌ಸ್ಟೀನ್ ಮತ್ತು 30 ಇತರ ಪ್ರಸಿದ್ಧ ಜ್ಯೂ ಮೂಲದ ಬುದ್ಧಿಜೀವಿಗಳು ವಿರೋಧಿಸಿದ್ದರು. ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಪ್ರಕಟಿಸಲಾದ ಈ ಪತ್ರದಲ್ಲಿ ಬೆಗಿನ್ ಪಕ್ಷವನ್ನು 'ನಾಜಿ ತರಹದ ಪಾರ್ಟಿ' ಎಂದು ಕರೆದು, ಅರಿಗೆ ಯಾವುದೇ ಧನ ಸಹಾಯ ಮಾಡಬಾರದು, ಅವರ ಸಮಾರಂಭಗಳನ್ನು ಬಹಿಷ್ಕರಿಸಬೇಕು ಎಂದು ಮನವಿ ಮಾಡಿದ್ದರು. ಡೆರ್ ಯಾಸಿನ್ ಎಂಬ ಹಳ್ಳಿಯಲ್ಲಿ 240 ಅರಬರ ನರಮೇಧ ಮಾಡಿದ ಪಕ್ಷ ಇದು ಎಂದು ಅವರ ಕಾರಣವಾಗಿತ್ತು. ಈಗಿನ ಶಾರೋನ್ ಅಪರಾಧದ ಪ್ರಮಾಣ ಅದಕ್ಕೆ ಹೋಲಿಸಿದರೆ ದೈತ್ಯಾಕಾರದ್ದು.

'ಹಸಿವು ಕಾಯದು' ಜಿ-8 ನಲ್ಲಿ ಲೂಲಾ

ಇತ್ತೀಚಿಗೆ ಯುರೋಪಿನಲ್ಲಿ ನಡೆದ ಜಿ-೮ ಶೃಂಗಸಭೆ ಬಗ್ಗೆ ಹಿಂದೆ ಐಕ್ಯರಂಗದಲ್ಲಿ ಓದಿದ್ದೀರಿ. ಅಲ್ಲಿ ಮೂರನೇ ಜಗತ್ತಿನ ೧೫ ದೇಶಗಳ ನಾಯಕರನ್ನು (ನಮ್ಮ ಪ್ರಧಾನಿ ಸೇರಿ) ಆಮಂತ್ರಿಸಲಾಗಿತ್ತು. ಬ್ರೆಜಿಲ್‌ನ ಅಧ್ಯಕ್ಷರು ಮಾಡಿದ ಮಹತ್ವದ ಭಾಷಣದಿಂದ ಆಯ್ದು ಕೆಲ ಭಾಗಗಳನ್ನು ಇಲ್ಲಿ ಕೊಡಲಾಗಿದೆ. ಲುಲಾ ಅವರು ತೀವ್ರ ಪ್ರಭಾವ ಬೀರಿದ ನಾಯಕರಾಗಿದ್ದರು ನಮ್ಮ ಪ್ರಧಾನಿ ಯಾವುದೇ ಪರಿಣಾಮ ಬೀರದೇ ಹೋದರು ಎಂಬ ವರದಿಯಿದೆ.

"ಸಾಮಾಜಿಕ ಸುಸ್ಥಿರತೆಯಿಲ್ಲದೆ ಆರ್ಥಿಕ ಬೆಳವಣಿಗೆ ಸಾಧ್ಯವಿಲ್ಲ ಎಂದು ಜಗತ್ತಿನಾದ್ಯಂತ ಕೋಟ್ಯಾಂತರ ಜನರು ಎದುರಿಸುತ್ತಿರುವ ಬಡತನ, ಕಂಗಾಲುತನ ನೋಡಿದರೆ ತಿಳಿಯುತ್ತದೆ. ಇವೆರಡೂ ಇಲ್ಲದೆ ನಾವು ಇರುವ ಜಗತ್ತು ಸುಭದ್ರವಾಗಿರುವುದು ಸಾಧ್ಯವಿಲ್ಲ. ಆಕ್ರೋಶ, ಅಪರಾಧ, ಅದರಲ್ಲೂ ಮಾದಕ - ದ್ರವ್ಯಗಳ ವ್ಯವಹಾರ ಮತ್ತು ಭಯೋತ್ಪಾದನೆ ಹುಟ್ಟಿ ಬೆಳೆಯುವುದು ಇಂತಹ ಸಾಮಾಜಿಕ ಅಸಮಾನತೆಯ ಸನ್ನಿವೇಶದಲ್ಲೇ..."

"ಹಸಿವು ಕಾಯದು. ಹಸಿವಿನ ಸಮಸ್ಯೆಯನ್ನು ಅತ್ಯಂತ ತುರ್ತಿನಿಂದ ಮತ್ತು ಸಾಮಾಜಿಕ ಸಂಘಟನಾ ಕ್ರಮಗಳಿಂದ ಎದುರಿಸಬೇಕಾಗಿದೆ....."

"ಆಧುನಿಕ ಚರಿತ್ರೆಯನ್ನು ನೋಡಿದರೆ..... ಬೆಳವಣಿಗೆ ಸಮಗ್ರ ಸಾಮಾಜಿಕ ಸುಧಾರಣೆಗಳಿಂದ ಮಾತ್ರ ಆರಂಭವಾಗಬಲ್ಲುದು. ಇಂತಹ ಸಾಮಾಜಿಕ ಸುಧಾರಣೆಗಳು ಲಕ್ಷಾಂತರ ಜನರನ್ನು ಉತ್ಪಾದನೆ, ಬಳಕೆ ಮತ್ತು ನಾಗರಿಕತ್ವಕ್ಕೆ ಎಳೆತರುತ್ತದೆ. ಇದು ದೀರ್ಘ ಮತ್ತು ಹೊಸ ಆರ್ಥಿಕ ಚಲನಶೀಲತೆಯನ್ನು ಉಂಟುಮಾಡುತ್ತದೆ. 1930ರ ದಶಕದಲ್ಲಿ ಅಮೆರಿಕದಲ್ಲಿ ಮತ್ತು ಯುರೋಪಿನಲ್ಲಿ ಎರಡನೇ ಮಹಾಯುದ್ಧ ನಂತರ ಆದದ್ದು ಇದೇ.

"ನಾವು (ಬ್ರೆಜಿಲ್‌ನಲ್ಲಿ) ಅಂತರ್ರಾಷ್ಟ್ರೀಯವಾಗಿ ಸ್ಪರ್ಧಾತ್ಮಕವಾಗಿರಲು ಬಹಳಷ್ಟು ತ್ಯಾಗ ಮಾಡಿದ್ದೇವು. ಆದರೆ ಸಬ್ಸಿಡಿಗಳ ಯುದ್ಧ ಮತ್ತು ಇತರ ರಕ್ಷಣಾತ್ಮಕ ಕ್ರಮಗಳ ಸಾಗರದಲ್ಲಿ ನಿಜವಾದ ಸ್ಪರ್ಧೆಗೆ ಎಲ್ಲಿದೆ ಜಾಗ. ನಿಜವಾಗಿಯೂ ನಮಗೆ ದಕ್ಕಿದ್ದು 'ವಾಣಿಜ್ಯ ಬಹಿಷ್ಕಾರ'.

"ಹಸಿವು ಇಂದು ಸಹಿಸಲಾಗದ ಮಟ್ಟ ಮುಟ್ಟಿದೆ. ಈ 'ಸಾಂಕ್ರಾಮಿಕ'ವನ್ನು ಹೋಲಾಡಿಸಲು ಸಾಧ್ಯವಿದೆ ಎಂದು ನಮಗೆಲ್ಲರಿಗೂ ಗೊತ್ತಿದೆ. ಪೋರ್ಟೋ ಅಲೆಗ್ರೆ (ವಿಶ್ವಸಾಮಾಜಿಕವೇದಿಕೆ) ಮತ್ತು ದಾವೋಸ್ (ವಿಶ್ವ ಆರ್ಥಿಕ ವೇದಿಕೆ)ಗಳಲ್ಲಿ ನಾನು ಹಲವು ಪ್ರಸ್ತಾವಗಳನ್ನು ಇಟ್ಟಿದ್ದೆ. ಎಲ್ಲರ ಹಸಿವನ್ನು ಹಿಂಗಿಸಲು ವಿಶ್ವನಿಧಿ ಸಂಗ್ರಹಿಸಬೇಕು. ಅದರ ಜತೆ ಜತೆ ಹಸಿವಿಗೆ ಕಾರಣವಾದ ಸಾಮಾಜಿಕ ಸಂಘಟನೆಯ ಕಾರಣಗಳಿಗೆ ಪರಿಹಾರ ಹುಡುಕಬೇಕು. ಬ್ರೆಜಿಲ್‌ನಲ್ಲಿ ಇದನ್ನು ನಾವು ಈಗಾಗಲೇ ಆರಂಭಿಸಿದ್ದೇವೆ. ಇದನ್ನು ವಿಶ್ವದ ಮಟ್ಟದಲ್ಲಿ ಮಾಡಲು ಹಲವು ಕ್ರಮಗಳು ಸಾಧ್ಯವಿದೆ.. ಒಂದು ಉದಾಹರಣೆ ಅಂತರ್ರಾಷ್ಟ್ರೀಯ ಶಸ್ತ್ರಾಸ್ತ್ರ ವಾಣಿಜ್ಯದ ಮೇಲೆ ತೆರಿಗೆ ವಿಧಿಸಿ ಅದನ್ನು ವಿಶ್ವ ಹಸಿವು ನಿಧಿಗೆ ಸೇರಿಸುವುದು. "ನಾವು (ಬ್ರೆಜಿಲ್‌ನಲ್ಲಿ) ಸಾಮಾಜಿಕ ಅಸಮಾನತೆ ಮತ್ತು ಬಡತನ ಎದುರಿಸುವ ರಾಜಕೀಯ ನಿಶ್ಚಯ ತೋರಿಸಿದ್ದೇವೆ.

ಸಿನಿಮಾ

ಚಿತ್ತ ಸ್ವಾಸ್ಥ್ಯ ಕೆಡಿಸುವ 'ಭೂತ್'

ದೆವ್ವ-ದೇವರುಗಳ ಬಗ್ಗೆ ಭಯ-ಭಕ್ತಿ ಇರುವವರು ಈ ಚಿತ್ರವನ್ನು ನೋಡುವುದರಿಂದ ಕಳೆದುಕೊಳ್ಳುವುದೇನಿಲ್ಲ, ದಕ್ಕಿಸಿಕೊಳ್ಳುವುದು ಮಾತ್ರ ಮನದ ತುಂಬಾ ಭಯ-ಭೀತಿಗಳನ್ನು ಮಾತ್ರ.

ಬಹು ಅಂತಸ್ತಿನ ಅಪಾರ್ಟ್‌ಮೆಂಟ್ ಅದು. ದಂಪತಿಗಳಿಬ್ಬರು ಹೊಸದಾಗಿ ಬಾಡಿಗೆಗೆ ಬರುತ್ತಾರೆ ಅಲ್ಲಿಗೆ. ಇಬ್ಬರಿಗೂ ಬಹಳ ಇಷ್ಟವಾಗುತ್ತದೆ ಅವರ ಬಾಡಿಗೆ ಮನೆ. ಆದರೆ ಗಂಡ ಒಂದು ವಿಷಯವನ್ನು ತನ್ನ ಪತ್ನಿಯಿಂದ ಮುಚ್ಚಿಟ್ಟಿರುತ್ತಾನೆ ! ಅದು ಅದೇ ಮನೆಯ ಯುವತಿಯೊಬ್ಬಳು ಮಹಡಿಯಿಂದ ಬಿದ್ದು ಸತ್ತಿದ್ದು! ಹೆಂಡತಿಗೆ ವಿಷಯ ತಿಳಿಯುತ್ತದೆ, ಭ್ರಮೆಗಳು ಅವಳ ಬೆನ್ನು ಹತ್ತುತ್ತವೆ! ಆಗ ಭೂತದ ಆಗಮನವಾಗುತ್ತದೆ!

ಆ ಮನೆಯಲ್ಲಿ ಯಾರೋ ಸುಳಿದಾಡಿದ ಹಾಗೆ ಆಗುತ್ತದೆ. ಅವಳ ಬೆನ್ನ ಹಿಂದೆ ನಿಂತಂತೆಯೇ ಭಾಸವಾಗುತ್ತದೆ. ಕೊನೆಗೆ ಮಲಗಿರುವಾಗ ಎದುರಿಗೇ ನಿಂತು ದಿಟ್ಟಿಸುತ್ತಾಳಾಕೆ! ಯಾರಾಕೆ? ಭಯ ಭೀತಳಾಗಿ ಭ್ರಾಂತಿಗೊಳಗಾಗುವ ಹೆಂಡತಿಯನ್ನು ವೈದ್ಯರಲ್ಲಿ ಕರೆದೊಯ್ದಾಗ ಯಾವುದೋ ಒಂದು ಮನಸ್ಸಿಗೆ ಸಂಬಂಧಿಸಿದ ಖಾಯಿಲೆಯ ಲಕ್ಷಣವೆಂದು ಹೇಳಿ ಮನಶಾಸ್ತ್ರಜ್ಞರಿಗೆ ತೋರಿಸುವಂತೆ ಸಲಹೆ ನೀಡುತ್ತಾರೆ. ವೈದ್ಯರು ಪರೀಕ್ಷಿಸಿ ಚಿಕಿತ್ಸೆ ಆರಂಭಿಸುವುದಾಗಿ ತಿಳಿಸುತ್ತಾರೆ. ಆದರೆ....

ಆ ರಾತ್ರಿ ಇನ್ನೊಂದು ಅವಘಡ ನಡೆದೇ ಬಿಡುತ್ತದೆ. ನಿದ್ದೆಯಿಂದೆದ್ದ ಆಕೆ ಹೊರಗಿನ ಕಾವಲುಗಾರನ ಕತ್ತು ಮುರಿದು ಭೀಕರವಾಗಿ ಹತ್ಯೆ ಮಾಡಿ ಮತ್ತೆ ಬಂದು ಮಲಗುತ್ತಾಳೆ! ಇದನ್ನು ಗಮನಿಸಿದ ಗಂಡ ಕಂಗಾಲಾಗುತ್ತಾನೆ. ಆಕೆ ತನ್ನನ್ನೇ ಕೊಲ್ಲಲು ಬಂದಂತೆ ಭಾಸವಾಗುತ್ತದೆ. ಅಂತದ್ದೇ ಪರಿಸ್ಥಿತಿ ಎದುರಾಗುತ್ತದೆ. ಆವೇಶಕ್ಕೊಳಗಾದ ಆಕೆ ಆತನ ಮೇಲೆ ಹಲ್ಲೆ ಮಾಡಲೆತ್ನಿಸಿದಾಗ ಆತ ಮತ್ತು ಮನೆ ಕೆಲಸದಾಕೆ ಸೇರಿ ಆಕೆಯನ್ನು ಕಟ್ಟಿ ಹಾಕುತ್ತಾರೆ. ಅವಳ ವಿಚಿತ್ರ ಕಿರುಚಾಟ-ನರಳಾಟವನ್ನು ಕಂಡು ಕೆಲಸದಾಕೆ ಗಾಬರಿಯಾಗುತ್ತಾಳೆ. ಆ ಧ್ವನಿ ಯಾರದ್ದೆಂದು ಗುರುತಿಸುತ್ತಾಳೆ. ಅದು ಮತ್ತಾರದ್ದಲ್ಲ, ಹಿಂದೆ ಸತ್ತಿದ್ದ ಅದೇ ಮನೆಯ ಯುವತಿಯದು!


ಇದು ವೈದ್ಯರಿಂದ ನೆಟ್ಟಗಾಗುವಂತದ್ದಲ್ಲ ಎನ್ನುವ ಕೆಲಸದಾಕೆಯ ಅಭಿಪ್ರಾಯವನ್ನು ಒಪ್ಪಿ ಆತ ಒಬ್ಬ ದೈವಿಕ ಶಕ್ತಿಯ, ಇಂತಹದ್ದನ್ನು ಸರಿಮಾಡುವ ಹೆಂಗಸೊಬ್ಬಳನ್ನು ಕರೆ ತರುತ್ತಾನೆ. ಈಕೆಯನ್ನು ಪರೀಕ್ಷಿಸಿದ ಆಕೆ ಯುವತಿಯ ಆತ್ಮ ಇವಳನ್ನು ಮೆಟ್ಟಿಕೊಂಡಿರುವುದರ ಕಾರಣವೇನೆಂದು ಹೇಳುತ್ತಾಳೆ!

ನೆರೆಮನೆಯಾತ ಆ ಯುವತಿಯನ್ನು ಬಲಾತ್ಕರಿಸುವ ಸಂದರ್ಭದಲ್ಲಿ ಈಕೆ ಸಾವಿಗೀಡಾಗಿರುತ್ತಾಳೆ. ಇದನ್ನು ನೋಡಿದ ಆಕೆ ಮಗನನ್ನು ಸಹ ಕಾವಲುಗಾರನ ಸಹಾಯದಿಂದ ನೆರೆಮನೆಯಾತ ಕೊಂದಿರುತ್ತಾನೆ. ಇದಕ್ಕೆ ಪ್ರತಿಕಾರ ತೀರಿಸಿಕೊಳ್ಳಲು ಆ ಯುವತಿ ಈಕೆಯ ಮೈಮೇಲೆ ಬಂದು, ಇದೇ ಕಾರಣವಾಗಿ ಕಾವಲುಗಾರನನ್ನು ಕೊಂದಿರುತ್ತಾಳೆ.

ಇದೊಂದು ಖಾಯಿಲೆಯ ಲಕ್ಷಣವೆಂದು ಚಿಕಿತ್ಸೆ ನೀಡಲು ಮುಂದಾದ ವೈದ್ಯರನ್ನು ಪತಿ ನಿರಾಕರಿಸುತ್ತಾನೆ. ತನ್ನ ಪತ್ನಿಯ ಮೈಮೇಲೆ ದೆವ್ವ ಬಂದಿದೆಯೆಂದೇ ಭಾವಿಸುತ್ತಾನೆ. ದೈವಿಕ ಹೆಂಗಸನ್ನು ಪೂರ್ಣವಾಗಿ ನಂಬುತ್ತಾನೆ. ಮತ್ತು ಆಕೆ ತನ್ನದೇ ಆದ ವಿಧಾನಗಳಿಂದ ಆಕೆಯ ಮೈಮೇಲೆ ಬಂದಿರುವ ದೆವ್ವವನ್ನು ಬಿಡಿಸುತ್ತಾಳೆ. ಇದು 'ಭೂತ್' ಚಿತ್ರದ ಕಥೆಯ ಸಾರಾಂಶ.

ದೆವ್ವ-ದೇವರುಗಳ ಬಗ್ಗೆ ಭಯ-ಭಕ್ತಿ ಇರುವವರು ಈ ಚಿತ್ರವನ್ನು ನೋಡುವುದರಿಂದ ಕಳೆದು ಕೊಳ್ಳುವುದೇನಿಲ್ಲ, ದಕ್ಕಿಸಿಕೊಳ್ಳುವುದು ಮಾತ್ರ ಮನದ ತುಂಬಾ ಭಯ-ಭೀತಿಗಳನ್ನು ಮಾತ್ರ.

ಜನರನ್ನು ಸಿನಿಮಾ ಮಂದಿರಕ್ಕೆ ಸೆಳೆಯುವಂತಹ ಎಲ್ಲಾ ಪಟ್ಟುಗಳನ್ನು ಕರಗತ ಮಾಡಿಕೊಂಡಿರುವ ರಾಮಗೋಪಾಲ ವರ್ಮಾ ಯಶಸ್ವಿ ಚಿತ್ರಗಳ ನಿರ್ದೇಶಕ. ಯಾವುದೇ ಚಿತ್ರ ನಿರ್ಮಾಣಕ್ಕೆ ಇಳಿದಾಗ ಅದಕ್ಕಾಗಿ ಸಾಕಷ್ಟು ಪೂರ್ವ




ತಯಾರಿ ಮತ್ತು ಆ ವಿಷಯದ ಬಗ್ಗೆ ಅಧ್ಯಯನ ಇವರ ಯಶಸ್ಸಿನ ಗುಟ್ಟು. ಅದಕ್ಕೆ ಉದಾಹರಣೆಗಳು 'ಕಂಪನಿ', 'ಸತ್ಯಾ', 'ರಂಗೀಲಾ' ಇತ್ಯಾದಿ ಚಿತ್ರಗಳು.


ಈ ಬಾರಿಯೂ ವರ್ಮಾರ ಈ 'ಭೂತ್' ಚಿತ್ರ ಪ್ರಚಂಡ ಯಶಸ್ಸು ಕಂಡಿದೆ. ಆದರೆ ಈ ಚಿತ್ರ ಅತ್ಯಂತ ಅವೈಜ್ಞಾನಿಕವಾಗಿದೆ. ವೈಜ್ಞಾನಿಕ ಯುಗದಲ್ಲಿ ದೆವ್ವ ಮೈಮೇಲೆ ಬರುವುದು ನಿಜವೆಂದೇ ಬಿಂಬಿಸಲು ಹೊರಟಿರುವ ವರ್ಮಾರವರು ಜನರನ್ನು ಮೂಢನಂಬಿಕೆಗಳ ಪ್ರಪಾತಕ್ಕೆ ತಳ್ಳಿದ್ದಾರೆ. ದೆವ್ವ-ಭೂತಗಳ ಕತೆಯೆಂದರೆ ಎಂತಹವರಿಗೂ ಕುತೂಹಲವೇ. ಮಕ್ಕಳೂ ಕೂಡ ಭಯವಾದರೂ ಸರಿ ದೆವ್ವದ ಕಥೆ ಕೇಳಲೇ ಬಯಸುತ್ತಾರೆ. ಈ ಮನೋಭಾವವನ್ನೇ ವರ್ಮಾರವರು 'ಕ್ಯಾಶ್' ಮಾಡಿಕೊಳ್ಳಲೊರಟಿದ್ದಾರೆ. ಅದರಲ್ಲಿ ಯಶಸ್ವಿಯೂ ಆಗಿದ್ದಾರೆ. ಆದರೆ ಈ ಬ... ಅಂಧಶ್ರದ್ಧೆಗಳ ಬಗ್ಗೆ ನಂಬಿಕೆಯಿರುವ ಜನರ ಮೇ... ಬೀರುವ ಪರಿಣಾಮ ಅಪಾರ. ಅಂತಹವರು ... ಮುಂದೆ 'ದೆವ್ವ ಮೈಮೇಲೆ ಬರುವುದಕ್ಕೆ' ಚಿತ್ರವನ್ನು ಉದಾಹರಣೆಯಾಗಿ ನೀಡಿಯಾರ...

ಚಿತ್ರದ ಒಂದು ಹಂತದಲ್ಲಿ ವೈದ್ಯರು ಪ್ರವೇ... ಇದು ಮನೋರೋಗದ ಲಕ್ಷಣವೆಂದು ಗುರು... ಚಿಕಿತ್ಸೆಯ ಅಗತ್ಯದ ಬಗ್ಗೆ ಹೇಳುವಾಗ ... ಸರಿಯಾದ ಜಾಡಿನಲ್ಲಿ ಸಾಗುತ್ತಿದೆ ಎ... ಭಾವಿಸುವಾಗಲೇ ನಾಯಕ ವೈದ್ಯರನ್ನು ಧಿಕ್ಕ... ಭೂತ ಇರುವುದನ್ನು ಒಪ್ಪಿ ಮಂತ್ರಶಕ್ತಿಯನ್ನು ... ಅವರ ಮೇಲೆ ಅವಲಂಬಿಸುತ್ತಾನೆ. ... ವೈಜ್ಞಾನಿಕ ಮನೋಭಾವವುಳ್ಳ, ಇಂತಹ ಭ್ರಮೆ... ಬಗ್ಗೆ ಅರಿವಿರುವ ಪ್ರಜ್ಞಾವಂತರಿಗೆ ಭಾರೀ ನಿ... ತರುತ್ತದೆ. ಇದು ಸಾಲದೆಂಬಂತೆ ತಂತ್ರಜ್ಞಾ... ಅವಿಷ್ಕಾರವಾದ ಧ್ವನಿ ವ್ಯವಸ್ಥೆಯ... ಪರಿಣಾಮಕಾರಿಯಾಗಿ ಬಳಸಿಕೊ... ನೋಡುಗರ ಹೃದಯ ಬಡಿತ ಏರಿಸುತ್ತ... ಚಿತ್ರಮಂದಿರದ ವಿವಿಧ ದಿಕ್ಕುಗಳಿಂದ ಅಪ್ಪಳ... ಶಬ್ದವು ಎಂತಹ ಗಟ್ಟಿಗುಂಡಿಗೆಯವರ... ನಡುಗಿಸುತ್ತದೆ.

ಒಟ್ಟಿನಲ್ಲಿ ಇದು ಜನರ ಚಿತ್ತಸ್ವಾಸ್ಥ್ಯ... ಕೆಡಿಸುವಂತಹ ಚಿತ್ರ. ಸಮಾಜದ ದಿಕ್ಕು ತಪ್ಪಿ... ವಾಸ್ತವಗಳನ್ನು ಅರಿಯಲು ಅವಕಾಶಕ್ಕೊ... ಜನರನ್ನು ಭ್ರಾಂತಿ-ಭ್ರಮೆಗಳಿಗೆ ನೂ... ಯತ್ನವಾಗಿದೆ.

- ಎಂ. ರಾ...





ರಾಜ್ಯದ ದುಡಿವ ಜನರ ಹಲವು ದಿನಗಳ ಬಯಕೆಯಂತೆ ಸೂರಿ ಯವರ ಬದುಕು, ಹೋರಾಟಗಳ ಬಗೆಗಿನ ವಿಶೇಷ ಸಂಚಿಕೆ ಈಗ ಹೊರಬಂದಿದೆ. ದುಡಿಯುವ ವರ್ಗಕ್ಕೆ ಹೋರಾಟದ ಕಿಚ್ಚು ಹಚ್ಚಿ ಅವರ ಬಾಳಿಗೆ ಬೆಳಕು ನೀಡಲು ಬಾಳಿನುದ್ದಕ್ಕೂ ಅವಿರತ ಯತ್ನ ನಡೆಸಿ ಸೂರ್ಯನಂತೆ ಕಂಗೊಳಿಸಿ ನಮ್ಮೆಲ್ಲರಿಂದ ಮರೆಯಾದ ಸೂರಿಯವರ ಈ ಸಂಚಿಕೆಯ ಹೆಸರೇ ಕೆಂಪು ಸೂರಿ' ಯ. ಕೆಂಪು ಸೂರ್ಯನಿಗೆ ಕೆಂಬಣ್ಣದ ಗುಲಾಬಿಗಳ ರಾಶಿಯನ್ನೇ ಅರ್ಪಿಸುವಂತ ವರ್ಣಮಯ ಚಿತ್ರದ ಮುಖಪುಟ ವಿನ್ಯಾಸ ಒಂದು ಆಕರ್ಷಣೀಯ.

ಸಂಚಿಕೆಯ ಪುಟ ತಿರುವುತ್ತಾ ಹೋದಂತೆಲ್ಲಾ ಸೂರಿಯವರ ಹೋರಾಟದ ಬದುಕು ತೆರೆದುಕೊಳ್ಳುತ್ತದೆ. ಅವರ ಬಾಲ್ಯ, ವಿಧ್ಯಾಭ್ಯಾಸ, ವಿದ್ಯಾರ್ಥಿ ಜೀವನದಲ್ಲೇ ಸ್ವಾತಂತ್ರ್ಯ ಚಳುವಳಿಗೆ ದುಮುಕಿದ್ದು, ಜೈಲುವಾಸ, ವಿದ್ಯಾರ್ಥಿ ಸಂಘಟನೆ ಕಟ್ಟಿದ್ದು, ಕಮ್ಯುನಿಸ್ಟ್ ಪಕ್ಷದ ಆಕರ್ಷಣೆಗೆ ಒಳಗಾಗಿದ್ದು, ಕಾರ್ಮಿಕ ಚಳುವಳಿಗೆ ದುಮುಕಿದ್ದು ಮತ್ತೆ ಮತ್ತೆ ಜೈಲು, ಗೂಂಡಾ ದಾಳಿ, ಪೋಲೀಸ್ ದಾಳಿಯನ್ನು ದಿಟ್ಟತನದಿಂದ ಎದುರಿಸಿ ನಿಂತಿದ್ದು, ಭೂಗತವಾಸ, ಮುಂತಾಗಿನ ಚರಿತ್ರೆಯ ಪುಟಗಳು ತೆರೆದುಕೊಂಡಿವೆ. ಶಾಸಕರಾಗಿ ವಿಧಾನ ಸಭೆಯ ಒಳಗೆ, ಅಲ್ಲದೆ ಹೊರಗೆ ನಡೆಸಿದ ಜನಪರ ಹೋರಾಟಗಳು ಹೀಗೆ ಅವರ ಬದುಕಿನ ಚಿತ್ರಣವನ್ನು ಹಲವರು ನೆನಪಿನ ಖಜಾನೆಯಿಂದ ತಮ್ಮದೇ ಶೈಲಿಯಲ್ಲಿ ಬಿಡಿಸಿಟ್ಟಿದ್ದಾರೆ. ಕುಟುಂಬ ಮತ್ತು ಚಳುವಳಿ ವಿಷಯ ಬಂದಾಗ ಸೂರಿಯವರ ಮೊದಲ ಪ್ರಾಧಾನ್ಯತೆ ಚಳುವಳಿಗೆ ಎಂದು ಹೇಳುವ ಸೂರಿಯವರ ಕುಟುಂಬದವರ ಸಂದರ್ಶನವೂ ಇಲ್ಲಿದೆ.

ಸಿಪಿಐ(ಎಂ)ನ ಹಿರಿಯ ಮುಖಂಡರಾದ ಜಿ.ಎನ್. ಜ್, ವಿ.ಜೆ.ಕೆ ನಾಯರ್, ಕೆ.ಆರ್. ಶ್ರೀಯಾನ್, ನಿತ್ಯಾನಂದ ಸ್ವಾಮಿ, ಎಂ.ಎನ್.ಉಗ್ರಪ್ಪ, ಎಸ್.ವೈ. ಗುರುಶಾಂತ್ ಇವರು ಸೂರಿಯವರ ತಮ್ಮ ಒಡನಾಟಗಳ ಬಗೆಗಿನ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟಿದ್ದಾರೆ.

ಸೂರಿಯವರ ಬದುಕಿನ ಬಗೆಗಿನ ಈ ಸಂಚಿಕೆ ಬರೆದದ್ದು ಅತ್ಯಲ್ಪ. ಹೇಳದೇ ಉಳಿದಿದ್ದು ಅಪಾರ. ಸ್ವತಃ ಸೂರಿಯವರು ಎಂದೂ ದಿನಚರಿ ಬರೆದು ಇಟ್ಟವರಲ್ಲ. ತಮ್ಮ ಅಪ್ರತಿಮ ಹೋರಾಟಗಳ ಬಗ್ಗೆ ಬರೆದವರೂ ಅಲ್ಲ. ಅದಕ್ಕೆ ಅವರಿಗೆ ಸಮಯ ಇರಲಿಲ್ಲವೋ ಅಥವಾ ಅದು ಅವರಿಗೆ ಮುಖ್ಯವೆನಿಸಲಿಲ್ಲವೋ ತಿಳಿಯದು. ಸದಾಕಾಲ ಪಕ್ಷದ ಕೆಲಸ, ಸಂಘಟನೆಯ ಕೆಲಸದಲ್ಲೇ ತಲ್ಲೀನ. ಕೆಲ ಸಂಗಾತಿಗಳು ಸೂರಿಯವರನ್ನೇ ನೇರವಾಗಿ ಅವರ ಜೀವನ ಚರಿತ್ರೆಯ ಬಗ್ಗೆ ಕೇಳಿದ್ದುಂಟು. ಆದರೆ ಅವರಿಗೆ ಅಂತಹ ಸಮಯ ಒದಗಿ ಬರಲೇ ಇಲ್ಲ. 17 ವರ್ಷಗಳ ಹಿಂದೆ ಒಮ್ಮೆ 'ಐಕ್ಯರಂಗ' ಜಿ.ಎನ್.ನಾಗರಾಜ್‌ರವರು ಮಾಡಿದ ಸಂದರ್ಶನದ ಸಂದರ್ಭದಲ್ಲಿ ಮಾತ್ರ ಸೂರಿಯವರು ತಮ್ಮ ಜೀವನದ ಬಗ್ಗೆ ಒಂದಿಷ್ಟು ಹೇಳಿಕೊಂಡಿದ್ದರು. 'ನೀವು ಕಮ್ಯುನಿಸ್ಟರಾದದ್ದು ಹೇಗೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಾ ತಮ್ಮ ಜೀವನದ ಪುಟಗಳಲ್ಲಿ ಕೆಲವನ್ನು ತೆರೆದಿಟ್ಟಿದ್ದರು. ಇದೊಂದು ಲೇಖನ ಬಿಟ್ಟರೆ ಉಳಿದೆಲ್ಲವೂ ಅವರನ್ನು ಹತ್ತಿರದಿಂದ ಬಲ್ಲ ಜೊತೆಯಾಗಿ ಹೋರಾಡಿದ, ಹಲವು ಸಂಗಾತಿಗಳು ತಮ್ಮ ನೆನಪಿನಾಳದಿಂದ ತೆಗೆದ ಹಲವು ಸಂದರ್ಭಗಳನ್ನು ಉಲ್ಲೇಖಿಸಿದ್ದಾರೆ.

ಸೂರಿಯವರ ಹೋರಾಟಗಳನ್ನು ನೆನಪಿಸಿಕೊಂಡವರು ಹಲವರು ಮೈಕೊ, ಐ.ಟಿ.ಸಿ., ವಿಕ್ರಾಂತ್ ಟೈರ್ಸ್, ತಾತಾಗುಣಿ ಎಸ್ಟೇ... ಕೋಲಾರ ಚಿನ್ನದ ಗಣಿ, ಸಾರ್ವಜನಿಕ ವಲಯ... ಹಲವು ಕಾರ್ಖಾನೆಗಳ, ಹೋಟೆಲ್ ಕಾರ್ಮಿ... ಹೋರಾಟಗಳಲ್ಲಿ, ಆಟೋ ಚಾಲಕರ ನಡು... ರೈತ ಚಳುವಳಿ, ಕೋಮು ಸೌಹಾ... ಕಾರ್ಯಕ್ರಮಗಳಲ್ಲಿ ಸೂರಿಯವರು ... ನಾಯಕತ್ವದ ಬಗ್ಗೆ, ಚಳುವಳಿಗಳಲ್ಲಿ ಅನು... ನೋವು, ನಲಿವುಗಳ ಬಗ್ಗೆ ಅದರಲ್ಲಿ ಭಾಗವಹಿ... ಸಂಗಾತಿಗಳು ತಮ್ಮದೇ ಶೈಲಿಯಲ್ಲಿ ಲೇ... ಬರೆದಿದ್ದಾರೆ.

ಇಷ್ಟಾದರೂ ಸೂರಿಯವರ ಬದು... ಹೋರಾಟಗಳ ಕುರಿತು ತಿಳಿದದ್ದು ಅಲ್ಪ... ಉಳಿದಿದ್ದೇ ಹೆಚ್ಚು ಎಂಬುದರಲ್ಲಿ ಅನುಮಾನ... ಆದ್ದರಿಂದ ಅವುಗಳನ್ನು ಹೆಕ್ಕಲು, ವಿಶ್ಲೇಷಿ... ಹಲವು ಪ್ರಯತ್ನಗಳು ಸತತ ನಡೆಯುತ್ತ... ಇರಬೇಕಿದೆ. ಅದೊಂದು ಸಂಶೋಧನಾ ಕೇಂದ್ರ... ವಿಶ್ವ ವಿದ್ಯಾಲಯದ ವಿಭಾಗಗ... ಮಾಡಬಹುದಾದಷ್ಟು ದೊಡ್ಡ ಕೆಲಸ. ಈ ಸ... ಆರಂಭದ ಒಂದು ಹೆಜ್ಜೆ ಅಷ್ಟೆ. (ಆ ದಿಶೆ... ಕಾಂ.ಸೂರಿ ಸ್ಮಾರಕ ಟ್ರಸ್ಟ್ ಹಲವಾರು ಯೋ... ರೂಪಿಸಿದೆ)

ಒಟ್ಟಿನಲ್ಲಿ ಹೇಳುವುದಾದರೆ, ಇದೊ... ಸಂಗ್ರಹ ಯೋಗ್ಯ ಸ್ಮರಣ ಸಂಚಿಕೆ. ಕರ್ನಾ... ಬೆಳವಣಿಗೆಯ ಕುರಿತು ಅವಲೋಕನಕ್ಕೆ, ... ಚಿಂತನೆಯುಳ್ಳ ದುಡಿಯುವ ಜನರ ಚಳುವಳಿ... ಬಾಗವಹಿಸುವ ಎಲ್ಲರೂ ಓದಲೇಬೇ... ಪುಸ್ತಕವಿದು. 100 ಪುಟಗಳ ಈ ಸಂಚಿಕೆಯ... 25 ರೂ. ತಡವೇಕೆ ಕೂಡಲೇ ಪಡೆದುಕೊ... ಇಟ್ಟುಕೊಳ್ಳಿ.

ಸೂರಿ ನೆನಪು

ಜುಲೈ1 ಕ್ಕೆ ಸೂರಿ ಅಗಲಿ ಒಂದು ... ಆಗಿಯೇ ಬಿಟ್ಟಿತು. ಈಗಲೂ ಅಗ... ದುಃಖ, ಎದೆಗಳಲ್ಲಿ, ಮನಗಳಲ್ಲಿ ಸದಾ ... ಜುಲೈ 1 ರ ಬೆಂಗಳೂರಿನ ಕಾರ್ಯಕ್ರಮಕ... ಮರೆಯದ ಮಾತುಗಳನ್ನು ಹ... ಹಂಚಿಕೊಳ್ಳೋಣ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH